5	2018-19	ಸಂಪೂರ್ಣ ನರೇಗಾ	11.60	ಮಂಟೂರ ಹಂಜಿ ತೋಟ	ಸ್ಲ್ಯಾಬ್ ಆಗಿರುತ್ತದೆ
6	2018-19	ಸಂಪೂರ್ಣ ನರೇಗಾ	11.60	ಮಂಟುರ ಬಡಿಗೇರ ಓಣಿ	ಸ್ಲ್ಯಾಬ್ ಆಗಿರುತ್ತದೆ
7	2018-19	ಸಂಪೂರ್ಣ ನರೇಗಾ	11.60	ಯಂಡ್ರಾವ ಪಡಲಾಳೆ ತೋಟ	ಸ್ಲ್ಯಾಬ್ ಆಗಿರುತ್ತದೆ
8	2018-19	ಸಂಪೂರ್ಣ ನರೇಗಾ	11.60	ಹನಬರಟ್ಟಿ ಅಡಿವೇಪ್ಪನ ಕೋಡಿ	ಸ್ಲ್ಯಾಬ್ ಆಗಿರುತ್ತದೆ
9	2018-19	ಡಿ ಎಮ್ ಎಫ್ ಅನುದಾನ	11.30	ಯಂಡ್ರಾವ ಗ್ರಾಮದಲ್ಲಿ	ಗೋಡೆ ಹಂತ
10	2019-20	ನರೇಗಾಒಗ್ಗೂಡಿಸುವಿಕೆ (ಇಲಾಖೆ + ನರೇಗಾ)	10.00	ಬೆಂಡವಾಡ ಪಾತ್ರೋಟ ತೋಟ	ಪಾಯಾ ಹಂತ
11	2019-20	ಡಿ.ಎಮ್.ಎಫ್ ಅನುದಾನ	11.30	ಬಿದರಳ್ಳಿ-57	ಪಾಯಾ ಪೂಜೆ
		ಒಟ್ಟು	121.80		

ಶ್ರೀ. ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ) ವಿಧಾನಸಭಾ ಸದಸ್ಯರು ಇವರ ಪ್ರಶ್ನೆ ಸಂಖ್ಯೆ 1486 ಕ್ಕೆ ಅನುಬಂಧ-3	
ನಿವೇಶನ ಲಭ್ಯವಿರುವ ವಿವರ	
ಕ್ರಸಂ	ನಿವೇಶನ ಲಭ್ಯವಿರುವ ಅಂಗನವಾಡಿ ಕೇಂದ್ರದ ಹೆಸರು
1	ಕಂಕಣವಾಡಿ ದೇಸಾಯಿ ತೋಟ
2	ಕಂಕಣವಾಡಿ ಪೂಜೇರಿ ತೋಟ
3	ಚಿಂಚಲಿ, ಕೆ ಇ ಬಿ ಮಡ್ಡಿ
4	ದಿಗ್ಗೇವಾಡಿ ಬಸವನಗರ
5	ಕಬ್ಬೂರ–95
6	ಕಬ್ಬೂರ–104
7	ಕಬ್ಬೂರ–105
8	ಕಮತ್ಯಾನಟ್ಟಿ–130
9	ಮುಗಳಿ–143
10	ಮೀರಾಪೂರಟ್ಟಿ–199
11	ಖೋತವಾಡಿ–200
12	ವಡ್ರಾಳ–87
13	ಹತ್ತರವಾಟ–62

10.5 Am

ಕರ್ನಾಟಕ ಸರ್ಕಾರ

ಸಂಖ್ಯೆ:ಟಿಓಆರ್ 83 ಟಿಡಿವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ: 17/03/2020

12

Stand
18/03/2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಡಿ. (ರಾಮನಗರ) ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2219 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2219 ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎಚ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2219

ಮಾನ್ಯ ಸದಸ್ಯರ ಹೆಸರು : ಶ್ರೀ. ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)

ವಿಷಯ : ಪ್ರವಾಸೋದ್ಯಮ ಸ್ಥಳ

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಉತ್ತರಿಸುವ ದಿನಾಂಕ: : 18-03-2020.

ಕ್ರ.ಸ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಪ್ರವಾಸೋದ್ಯಮಕ್ಕೆ ಹೆಸರಾಗಿರುವುದು ನಿಜವೇ;	ಹೌದು.
ಆ)	ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಪ್ರವಾಸೋದ್ಯಮ ಸ್ಥಳಗಳನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ ಅವುಗಳು ಯಾವುವು;	ಕರ್ನಾಟಕ ಪ್ರವಾಸೋದ್ಯಮ ನೀತಿ 2015-2020 ರಲ್ಲಿ ಗುರುತಿಸಿರುವ 319 ಪ್ರವಾಸಿ ತಾಣಗಳ ಪೈಕಿ ಸಕಲೇಶಪುರ ತಾಲ್ಲೂಕಿನಲ್ಲಿ ಮರಗುಂದ ಪ್ರವಾಸಿ ತಾಣವನ್ನು ಗುರುತಿಸಲಾಗಿದೆ. ಆಲೂರು ತಾಲ್ಲೂಕಿನಲ್ಲಿ ಈ ನೀತಿಯಡಿ ಯಾವುದೇ ಪ್ರವಾಸಿ ತಾಣಗಳನ್ನು ಗುರುತಿಸಿರುವುದಿಲ್ಲ.
ಇ)	ಗೋರೂರು ಹಾಗೂ ಹೇಮಾವತಿ ಜಲಾಶಯಗಳ ಅಣೆಕಟ್ಟಿನ ಮುಂಭಾಗ ಇರುವ ಪ್ರದೇಶವನ್ನು ಅಭಿವೃದ್ಧಿಪಡಿಸಿ, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಾಗುವುದೇ;	ಪ್ರಸ್ತುತ ಈ ಸಂಬಂಧ ಇಲಾಖೆಯ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಈ)	ಪಶ್ಚಿಮಘಟ್ಟ ಪ್ರದೇಶವನ್ನು ಸ್ವಿಡ್ಜರ್‌ಲ್ಯಾಂಡ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಯೋಚಿಸಿದೆಯೇ? (ವಿವರಗಳೊಂದಿಗೆ)	ಪ್ರಸ್ತುತ ಈ ಸಂಬಂಧ ಇಲಾಖೆಯ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕಡತ ಸಂಖ್ಯೆ: ಟಿಓಆರ್ 83 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಆಯುಕ್ತರವರ ಕಛೇರಿ, ಗ್ರಾ.ಕುನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009. ☎:080-22240508 📠:22240509
ಇ-ಮೇಲ್: krwssd@gmail.com

ಸಂ:ಗ್ರಾಕುನೀ&ನೈಇ/92/ಗ್ರಾನೀಸ(5)2020 ದಿನಾಂಕ:17.03.2020

15
Stored
18/3/20

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು-01.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ಸೋಮನಗೌಡ ಬಿ. ಪಾಟೀಲ್ (ಸಾಸನೂರು) (ದೇವರ ಜಹಿಪ್ಪರಗಿ)** ಇವರ **ಚುಕ್ಕೆ ಗುರುತಿನ ಪ್ರಶ್ನೆ ಸಂ:2279ಕ್ಕೆ** ಸಂಬಂಧಿಸಿದ ಮೇಲಿನ ಕ್ರಮ /ವಾಸ್ತವಿಕ ವರದಿಯ ಉತ್ತರ ನೀಡುವ ಬಗ್ಗೆ.

******

ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ಸೋಮನಗೌಡ ಬಿ. ಪಾಟೀಲ್ (ಸಾಸನೂರು) (ದೇವರ ಜಹಿಪ್ಪರಗಿ)** ಇವರ **ಚುಕ್ಕೆ ಗುರುತಿನ ಪ್ರಶ್ನೆ ಸಂ:2279ಕ್ಕೆ** ಸಂಬಂಧಿಸಿದ ಉತ್ತರದ **350** ಪ್ರತಿಗಳನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,
ಕೆ.ವಿ. [signature] 17/03/2020
ಪತ್ರಾಂಕಿತ ವ್ಯವಸ್ಥಾಪಕರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಪ್ರತಿಯನ್ನು:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರಿಗೆ

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಸೋಮನಗೌಡ ಬಿ ಪಾಟೀಲ್ (ಸಾಸನೂರು) (ದೇವರ ಹಿಪ್ಪರಗಿ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**2279**
ಉತ್ತರ ದಿನಾಂಕ	:	**18.03.2020**

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆ ದೇವರಹಿಪ್ಪರಗಿ ಹಾಗೂ ತಾಳಿಕೋಟೆ ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಲಾಗುವುದು;	ವಿಜಯಪುರ ಜಿಲ್ಲೆ ದೇವರಹಿಪ್ಪರಗಿ ಹಾಗೂ ತಾಳಿಕೋಟೆ ತಾಲೂಕಿನಲ್ಲಿ ಈ ಕೆಳಗಿನಂತೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. **ಪೂರ್ಣಗೊಂಡ ಯೋಜನೆಗಳು – 6 ಸಂಖ್ಯೆ:** 1. ಕಣಕಾಳ ಮತ್ತು ಇತರೆ 11 ಜನವಸತಿಗಳು 2. ಇಂಗಳೇಶ್ವರ ಮತ್ತು ಇತರೆ 40 ಜನವಸತಿಗಳು 3. ಆನೆಮಡು ಮತ್ತು ಇತರೆ 9 ಜನವಸತಿಗಳು 4. ಕಡ್ಲೇವಾಡ ಮತ್ತು ಇತರೆ 17 ಜನವಸತಿಗಳು 5. ಕನ್ನೊಳ್ಳಿ ಮತ್ತು ಇತರೆ 10 ಜನವಸತಿಗಳು 6. ಮುರದಾಳ ಮತ್ತು ಇತರೆ 15 ಜನವಸತಿಗಳು. ಮೇಲಿನ 6 ಯೋಜನೆಗಳು ಪೂರ್ಣಗೊಂಡು ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿವೆ. **ಪ್ರಗತಿಯಲ್ಲಿರುವ ಯೋಜನೆಗಳು – 1 ಸಂಖ್ಯೆ:** ಪೀರಾಪೂರ ಮತ್ತು ಇತರೆ 16 ಜನವಸತಿಗಳು. ಸದರಿ ಕಾಮಗಾರಿಗೆ ನಾರಾಯಣಪುರ ಎಡದಂಡೆ ಕಾಲುವೆಯಿಂದ ನೀರನ್ನು ಎತ್ತಿ Impounding Reservoirಗೆ ತುಂಬಿಸಿ ನೀರನ್ನು ಪೂರೈಸಲು ಉದ್ದೇಶಿಸಲಾಗಿತ್ತು, ಉದ್ದೇಶಿತ Impounding Reservoir ಕಾಮಗಾರಿಗೆ ಅಗತ್ಯ ಜಮೀನುಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಾಧಿಕಾರದಿಂದ ಈ ಇಲಾಖೆಗೆ ಹಸ್ತಾಂತರಿಸಿಕೊಳ್ಳವಲ್ಲಿ ವಿಳಂಬವಾಗಿರುತ್ತದೆ. ಮತ್ತು ವಿದ್ಯುತ್‌ಚ್ಛಕ್ತಿಯ Express Feeder Line ಕಾಮಗಾರಿಯ ಸ್ಥಳ ಬದಲಾವಣೆಯಾಗಿದ್ದು, ಈ ಕಾಮಗಾರಿಗೆ ಯಾದಗಿರಿ ಮತ್ತು ವಿಜಯಪುರ ಜಿಲ್ಲೆಗಳಿಂದ ವಿದ್ಯುತ್‌ಚ್ಛಕ್ತಿ ಲೈನ್‌ಗಳ ಅನುಮೋದನೆ ಪಡೆಯುವಲ್ಲಿ

		ವಿಳಂಬವಾಗಿರುತ್ತದೆ. ಪ್ರಸ್ತುತ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು 25-02-2020 ರಿಂದ ಯೋಜನೆಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. **ಕೈಬಿಡಲಾಗಿರುವ ಯೋಜನೆಗಳು – 2 ಸಂಖ್ಯೆ:** 1. ಅಸ್ಕಿ+ಕಲಕೇರಿ ಮತ್ತು ಇತರೆ 11 ಜನವಸತಿಗಳು. 2. ಕೋರವಾರ ಮತ್ತು ಇತರೆ 12 ಜನವಸತಿಗಳು. ವಿಜಯಪುರ ಜಿಲ್ಲೆಯಲ್ಲಿ ಹಾಲಿ ಇರುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ ಪ್ರಸ್ತುತ ನೀರು ಪೂರೈಕೆ ಪ್ರಮಾಣವನ್ನು ಪರಿಗಣಿಸಿ ಮತ್ತು ಜಲಧಾರೆ ಯೋಜನೆಯಿಂದಲೂ ಸೇರಿ ತಲಾ 85 ಎಲ್.ಪಿ.ಸಿ.ಡಿ ಯಂತೆ ಕುಡಿಯುವ ನೀರು ಪೂರೈಸಲು ಯೋಜನೆಯನ್ನು ಕೈಗೊಳ್ಳಲು ಪಿ.ಎಸ್.ಆರ್ ಅನ್ನು ಸಿದ್ಧಪಡಿಸಲಾಗಿದೆ. ಆದ್ದರಿಂದ ಈ ಎರಡು ಯೋಜನೆಗಳನ್ನು ಕೈಬಿಡಲಾಗಿದೆ.
ಇ)	ಹಾಗಿದ್ದಲ್ಲಿ, ಸದರಿ ತಾಲ್ಲೂಕುಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಜಲಧಾರೆ ಯೋಜನೆಯಡಿಯಲ್ಲಿ ವಿಜಯಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಜನವಸತಿಗಳಿಗೆ ತಲಾ 85 ಎಲ್.ಪಿ.ಸಿ.ಡಿ.ಯಂತೆ ಕುಡಿಯುವ ನೀರು ಪೂರೈಸಲು ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಜಿಲ್ಲೆಯ ಹಾಲಿ ಇರುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ ಪ್ರಸ್ತುತ ನೀರು ಪೂರೈಕೆ ಪ್ರಮಾಣವನ್ನು ಪರಿಗಣಿಸಿ ಮತ್ತು ಜಲಧಾರೆ ಯೋಜನೆಯಿಂದಲೂ ಸೇರಿ ತಲಾ 85 ಎಲ್.ಪಿ.ಸಿ.ಡಿ.ಯಂತೆ ಕುಡಿಯುವ ನೀರು ಪೂರೈಸಲು ಯೋಜನೆಯನ್ನು ಕೈಗೊಳ್ಳಲು ಪಿ.ಎಸ್.ಆರ್ ಅನ್ನು ಸಿದ್ಧಪಡಿಸಲಾಗಿದೆ. AIIB ಬ್ಯಾಂಕ್‌ನೊಂದಿಗೆ ಬಾಹ್ಯ ನೆರವಿನ ಬಗ್ಗೆ ಚರ್ಚಿಸಲಾಗುತ್ತಿದೆ. ವಿಜಯಪುರ ಜಿಲ್ಲೆಯ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ.

ಸಂ.ಗ್ರಾಕುನೀ&ನೈಇ/92/ಗ್ರಾನೀಸ(5)/2020

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

KARNATAKA LEGISLATIVE ASSEMBLY

Member Name : **Sri. B. Somanagowda B. Patil (Sasanuru) (Devara Hipparagi)**

Starred Question Number : **2279**

To be answered on : **18.03.2020**

Sl. No.	Question	Reply
A	Has the proposal of giving administrative approval and release of grants in respect of Multi Village Schemes of Devarahipparagi and Talikote taluks of Vijayapura come to the notice of Government;	Yes. The proposal has come to the notice of the Government.
B	If so, when will be the grant sanctioned;	The following Multi Village Schemes have been taken up in the taluks of Devarahipparagi and Talikote in Vijayapura district: **<u>Completed Schemes – 06 Nos.</u>** 1) Kanakal & other 11 habitations 2) Ingleshwara & other 40 habitations 3) Anemadu & other 09 habitations 4) Kadlewada & other 17 habitations 5) Kannolli & other 10 habitations 6) Puradala & other 15 habitations The above 6 schemes have been completed and are under O&M. **<u>Schemes under progress – 1 No.</u>** In respect of Peerapura & other 16 habitations, it was envisaged to provide drinking water by lifting water from Narayanpur left bank canal and filling up the Impounding Reservoir. The process of this

		Department getting suitable land for Impounding Reservoir work from Krishna upper bank authority has been delayed. With the site of Express Feeder Line work having changed, delay has occurred in getting suitable power lines from the districts of Yadgir and Vijayapura. Presently, all the works have been completed and trial run of the scheme has started from 25-02-2020. **<u>Dropped schemes – 02 Nos.</u>** 1) Aski, Kalkeri and other 11 habitations 2) Korawara and other 12 habitations Consequent upon, preparation of Preliminary Scheme Report (PSR) in which 85 lpcd of drinking water is proposed to be supplied through the exiting Multi Village Schemes in the district of Vijayapura and Jaladhare Scheme. Hence, these 2 schemes have been dropped.
C	If so, when will the Multi Village Schemes for these taluks be completed? (Detailed information to be furnished).	It is proposed to provide 85 lpcd of drinking water supply to all the habitations of taluks in Vijayapura under Jaladhare Scheme. Considering the quantity of drinking water being made available through existing Multi Village Schemes in the district and Jaladhare, PSR has been prepared to provide 85 lpcd of drinking water. Deliberations are on for obtaining external aid with AIIB Bank. Action has been taken to seek approval of the Cabinet for Vijayapura district's scheme.

No. RDW&SD/ 92/ RWS (5)/2020

Sd/-

(K. S. Eshwarappa)

Rural Development and Panchayath Raj Minister

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/9/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ: 17.03.2020.

T.I 16/3/2020

Stand 14/3/2020

19

pul 17/3/2020

18/3/2020

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್.** ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:157ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್.** ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:157ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

B.S. Prashant Kumar 17/03/2020

(ಬಿ. ಎಸ್. ಪ್ರಶಾಂತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,

17/3/2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 157

ಉತ್ತರಿಸಬೇಕಾದ ದಿನಾಂಕ : 04.03.2020

ಸದಸ್ಯರ ಹೆಸರು : ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್

ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ಗೌರಿಬಿದನೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ;	ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹಿರೇಬಿದನೂರು ಪಂಚಾಯಿತಿಗೆ ಸೇರಿದ ಸರ್ವೆ ನಂ-199 ರಲ್ಲಿ ಒಟ್ಟು 2.02 ಎಕರೆ ವಿಸ್ತೀರ್ಣದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಿಸಲು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಐ.ಡಿ.ಎಲ್.), ಚಿಕ್ಕಬಳ್ಳಾಪುರ-ವಿಭಾಗ, ಚಿಕ್ಕಬಳ್ಳಾಪುರ ರವರಿಗೆ ವಹಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು 12 ಮೀಟರ್ ಎತ್ತರದ ಗೋಡೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಟ್ರಸ್ ಅಳವಡಿಸುವ ಹಂತದಲ್ಲಿದೆ.
ಆ)	ಸದರಿ ಕ್ರೀಡಾಂಗಣ ನಿರ್ಮಾಣದ ಅಂದಾಜು ವೆಚ್ಚವೆಷ್ಟು;	ಗೌರಿಬಿದನೂರಿನಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ನಿರ್ಮಾಣಕ್ಕೆ ಆಡಳಿತ ಕಛೇರಿ ನಿರ್ಮಾಣವು ಸೇರಿದಂತೆ 2014-15 ನೇ ಸಾಲಿನ ಲೋಕೋಪಯೋಗಿ ದರಪಟ್ಟಿಯಂತೆ ರೂ 6.75 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ಮೆ. ಕೆ.ಆರ್.ಐ.ಡಿ.ಎಲ್. ರವರು ತಯಾರಿಸಿ, ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಸಲ್ಲಿಸಿರುತ್ತಾರೆ.
ಇ)	ಕ್ರೀಡಾಂಗಣದ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿದೆ ಹಾಗೂ ಪ್ರಸ್ತುತದ ಅಂದಾಜು ವೆಚ್ಚವನ್ನು ಸರ್ಕಾರ ಹೆಚ್ಚಿಸಲು ಯೋಚಿಸಿದೆಯೇ?	ಗೌರಿಬಿದನೂರು ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟಂತೆ ಮೆ॥ ಕೆ.ಆರ್.ಐ.ಡಿ.ಎಲ್. ನಿಂದ 2014-15ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ವಯ ರೂ 6.75 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆರವರಿಗೆ ಸಲ್ಲಿಸಿದ್ದು, ಸದರಿ ಅಂದಾಜು ಪಟ್ಟಿಯ ರೂ 150.00 ಲಕ್ಷಗಳು ಹಾಗೂ ರೂ 10.00 ಲಕ್ಷಗಳ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇನ್ನುಳಿದ ರೂ 515.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ. ಮುಂದುವರೆದು, ಗೌರಿಬಿದನೂರು ನಗರ ಸಭೆಯ 2018-19 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಡಿ ಈ ಕಾಮಗಾರಿಗೆ ಕ್ರಿಯಾ ಯೋಜನೆಯಲ್ಲಿ ರೂ.150.00 ಲಕ್ಷ ನಿಗದಿಪಡಿಸಿಕೊಂಡಿದ್ದು, ಒಟ್ಟಾರೆ ಅಂದಾಜು ಪಟ್ಟಿಯಲ್ಲಿರುವ ಆಡಳಿತ ಕಛೇರಿ ನಿರ್ಮಾಣ ಮತ್ತು ಇತರೆ ಕಾಮಗಾರಿಗಳ ಅವಶ್ಯಕತೆ ಮತ್ತು ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿ ಕೈಗೊಳ್ಳಲು ಹಾಗೂ ಅಂದಾಜು ವೆಚ್ಚವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ವೈಎಸ್ ಡಿ-/ಇಬಿಬಿ/09/2020

(ಸಿ.ಟಿ.ರವಿ)

ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಟಿಓಆರ್ 85 ಟಿಡಿವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ:17/03/2020

14

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

Stad
18/3/2020

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರವೀಂದ್ರ ಶ್ರೀಕಂಠಯ್ಯ ಶ್ರೀರಂಗಪಟ್ಟಣ ರವರು ಮಂಡಿಸಿರುವ ಚುಕ್ಕೆ ಗುರುತಿನ/~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 2352 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 2352 ಕ್ಕೆ ಉತ್ತರದ 350/~~100~~ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
[signature]
[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕವಿಧಾನಸಭೆ

ವಿ.ಸ. ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ	:	2352
ಕೇಳಿರುವ ಸದಸ್ಯರು	:	ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)
ವಿಷಯ	:	ಪ್ರವಾಸಿ ಕೇಂದ್ರ ಅಭಿವೃದ್ಧಿ
ಉತ್ತರಿಸಬೇಕಾದ ದಿನಾಂಕ	:	18.03.2020
ಉತ್ತರಿಬೇಕಾದವರು	:	ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಶ್ರೀರಂಗಪಟ್ಟಣವು ಪ್ರವಾಸಿ ಕೇಂದ್ರವಾಗಿದ್ದು, ಕೋಟೆಯ ಸುತ್ತಮುತ್ತ ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿಪಡಿಸುವ ಸಂಬಂಧ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು; (ವಿವರಗಳನ್ನು ನೀಡುವುದು)	ಶ್ರೀರಂಗಪಟ್ಟಣ ಕೋಟೆ ಸುತ್ತಮುತ್ತ ಒಟ್ಟು 06 ಕಾಮಗಾರಿಗಳನ್ನು ರೂ.1897.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡಿದ್ದು, ಈಗಾಗಲೇ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.1057.00 ಲಕ್ಷಗಳನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.
ಆ)	ಕೋಟೆಯ ಸುತ್ತಮುತ್ತ ಕೃತಕ ನೀರಿನ ವ್ಯವಸ್ಥೆ ಅಳವಡಿಸಿ, ಬೋಟುಗಳನ್ನು ಒದಗಿಸಿ ಪ್ರವಾಸೋದ್ಯಮ ಉತ್ತೇಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು, ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳಡಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿರುವ ಕೋಟೆ ಗೋಡೆಯ ಸುತ್ತಲೂ ಪ್ರವಾಸಿಗರ ದೋಣಿ ವಿಹಾರಕ್ಕಾಗಿ ಕಂದಕದ ಸಂರಕ್ಷಣಾ (1ನೇಹಂತ) ಕಾಮಗಾರಿಯನ್ನು ರೂ.500.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶಸಂಖ್ಯೆ: ಟಿಒಆರ್/84/ಟಿಡಿಪಿ/2019, ದಿನಾಂಕ: 23.01.2020 ರನ್ವಯ ಆಯುಕ್ತರು, ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರು ಸಲ್ಲಿಸಿದ್ದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.
ಇ)	ಸದರಿ ಪ್ರವಾಸಿ ಕೇಂದ್ರವನ್ನು ಅಭಿವೃದ್ಧಿಪಡಿಸಲು ಜಿಲ್ಲಾಡಳಿತವು ಪ್ರಸ್ತಾವನೆಯನ್ನು ಸಲ್ಲಿಸಿದೆಯೇ; ಹಾಗಿದ್ದಲ್ಲಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ?	ಜಿಲ್ಲಾಡಳಿತವು ಈ ರೀತಿಯ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಆದರೆ, ಮೇಲ್ಕಂಡಂತೆ ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳಡಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿರುವ ಕೋಟೆ ಗೋಡೆಯ ಸುತ್ತಲೂ ಪ್ರವಾಸಿಗರ ದೋಣಿ ವಿಹಾರಕ್ಕಾಗಿ ಕಂದಕದ ಸಂರಕ್ಷಣಾ (1ನೇ ಹಂತ) ಕಾಮಗಾರಿಯನ್ನು ರೂ.500.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಕಡತ ಸಂಖ್ಯೆ: ಟಿಒಆರ್ 85 ಟಿಡಿಪಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಅನುಬಂಧ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಕೋಟೆ ಹಾಗೂ ಸುತ್ತ ಮುತ್ತ ಪ್ರದೇಶದ ಬಳಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ಹಾಗೂ ಅವುಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ

(ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ: 2352)

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ಹೆಸರು	ಯೋಜನೆ	ಅಂದಾಜು ಮೊತ್ತ	ಕಾರ್ಯ ನಿರ್ವಾಹಕ ಸಂಸ್ಥೆಯ ಹೆಸರು	ಈವರೆಗೆ ಬಿಡುಗಡೆ ಮಾಡಿರುವ ಅನುದಾನ	ಷರಾ
1	ಶ್ರೀರಂಗಪಟ್ಟಣ ಪಾರಂಪರಿಕ ನಗರದ ಕೋಟೆಯ ಬೆಂಗಳೂರು ದ್ವಾರದ ಎಡ ಹಾಗೂ ಬಲ ಗೋಡೆಗಳ, ಆನೆ ದ್ವಾರದ ಮತ್ತು ಮೈಸೂರು ದ್ವಾರದ ಎರಡನೆಯ ಪ್ರವೇಶದ ಗೋಡೆಗಳ ಸಂರಕ್ಷಣೆ ಹಾಗೂ ಪುನರ್ ಸ್ಥಾಪನೆ ಕಾಮಗಾರಿ (2016-17)	ಬಂಡವಾಳ ವೆಚ್ಚಗಳು	310.00	ಆಯುಕ್ತರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು	170.00	ಅಗತ್ಯವಿರುವ ಕಲ್ಲುಗಳನ್ನು ಸರಬರಾಜು ಮಾಡಿ ನಯ ಗೊಳಿಸಲಾಗಿದೆ. ಆನೆ ದ್ವಾರ, ಮೈಸೂರು ದ್ವಾರ ಹಾಗೂ ಬೆಂಗಳೂರು ದ್ವಾರಗಳ ಹಾಳಾಗಿರುವ ಮಡ್ಡಿಯನ್ನು ತೆಗೆದು ಸುಣ್ಣದ ಗಾರೆಯಿಂದ ಮಡ್ಡಿ ಮಾಡುವ ಕೆಲಸವು ಪ್ರಗತಿಯಲ್ಲಿದೆ. ಶೇ.50ರಷ್ಟು ಕಾಮಗಾರಿಯು ಪ್ರಗತಿ ಯಲ್ಲಿದೆ. ಒಟ್ಟಾರೆ 160 ಮೀ. ಗೋಡೆಯ ಸಂರಕ್ಷಣೆಯನ್ನು ಅಂದಾಜಿನಲ್ಲಿ ಅಳವಡಿಸಿ ಕೊಳ್ಳಲಾಗಿದೆ.
2	ಶ್ರೀರಂಗಪಟ್ಟಣ ಪಾರಂಪರಿಕ ನಗರದ ಕೋಟೆಯ ಟಿ.ಎಮ್.ಸಿ ಕಛೇರಿಯ ಎದುರುಗಡೆಯ ಆನೆ ದ್ವಾರದ ಹತ್ತಿರವಿರುವ ಪ್ರವೇಶ ದ್ವಾರದ ಎನ್‌ಹೆಚ್-275 ಹೆದ್ದಾರಿಯಿಂದ ಶ್ರೀರಂಗಪಟ್ಟಣದ ವರೆಗಿನ ಗೋಡೆಯ ಹಾಗೂ ಆರು ಬತ್ತೇರಿಗಳ ಸಂರಕ್ಷಣೆ ಹಾಗೂ ಪುನರ್ ಸ್ಥಾಪನೆ ಕಾಮಗಾರಿ. (2016-17)	ಬಂಡವಾಳ ವೆಚ್ಚಗಳು	365.00	ಆಯುಕ್ತರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು	165.00	ಕೋಟೆ ಗೋಡೆಯ ಕಲ್ಲುಗಳನ್ನು ಬಿಚ್ಚಿ ಜೋಡಿ ಸುವ ಕೆಲಸ ಪ್ರಗತಿಯಲ್ಲಿದೆ. ಬತ್ತೇರಿಗಳ (ವಾಚ್ ಟವರ್ಸ್) ಹಾಳಾಗಿರುವ ಮಡ್ಡಿಯನ್ನು ತೆಗೆದು ಸುಣ್ಣದ ಗಾರೆಯಿಂದ ಮಡ್ಡಿ (ಲೈಮ್ ಪ್ಲಾಸ್ಟರಿಂಗ್) ಮಾಡಲಾಗಿದೆ. ಪ್ಯಾರಾಪಟ್ ಗೋಡೆಯ ಕೆಲಸ ನಿರ್ವಹಿಸ ಬೇಕಾಗಿದೆ. ಶೇ.50ರಷ್ಟು ಕಾಮಗಾರಿ ಪ್ರಗತಿಯಾಗಿರು ತ್ತದೆ. ಒಟ್ಟಾರೆ 127 ಮೀ. ಗೋಡೆಯ (ಕೋಟೆ ಗೋಡೆ 06 ಬತ್ತೇರಿಗಳನ್ನು ಒಳಗೊಂಡಿದೆ) ಸಂರಕ್ಷಣೆಯನ್ನು ಅಂದಾಜಿ ನಲ್ಲಿ ಅಳವಡಿಸಲಾಗಿದೆ.
3	ಶ್ರೀರಂಗಪಟ್ಟಣದ ಆನೆದ್ವಾರದ ಬಳಿ ಇರುವ ಮದ್ದಿನ ಮನೆ ಸಂರಕ್ಷಣೆ ಹಾಗೂ ದುರಸ್ತಿ ಕಾಮಗಾರಿ (2016-17)	ಬಂಡವಾಳ ವೆಚ್ಚಗಳು	296.00	ಆಯುಕ್ತರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು	96.00	ಒಬೆಲಿಸ್ಕ್ ಹುತಾತ್ಮ ಸ್ಮಾರಕ ಗಳ ಬಳಿ ಇರುವ ಮತ್ತು ತೂಗು ಸೇತುವೆ ಬಳಿ ಇರುವ ಎರಡು ಮದ್ದಿನ ಮನೆಗಳ ಸಂರಕ್ಷಣಾ ಕೆಲಸ ಪೂರ್ಣಗೊಂಡಿದ್ದು. ಲಾಯರ್ ಮನೆ ಮತ್ತು ಟಿಪ್ಪು ಸಮಾಧಿಯ ಬಳಿ ಇರುವ ಮದ್ದಿನ ಮನೆಗಳ ಸಂರಕ್ಷಣಾ ಕೆಲಸಗಳು ಪ್ರಗತಿಯಲ್ಲಿರುತ್ತವೆ.
4	ಶ್ರೀರಂಗಪಟ್ಟಣದಲ್ಲಿರುವ ಕೋಟೆ ಗೋಡೆಯ ಸುತ್ತಲೂ ಪ್ರವಾಸಿಗರ ದೋಣಿ ವಿಹಾರಕ್ಕಾಗಿ ಕಂದಕದ ಸಂರಕ್ಷಣಾ (1ನೇ ಹಂತ) ಕಾಮಗಾರಿ (2018-19)	ಕೆ.ಟಿ.ವಿ.ಜಿ.	500.00	ಆಯುಕ್ತರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು	500.00	ಅಂದಾಜುಪಟ್ಟಿಯು ತಾಂತ್ರಿಕ ಮಂಜೂರಾತಿಗಾಗಿ ಲೋಕೋಪಯೋಗಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.
5	ಶ್ರೀರಂಗಪಟ್ಟಣ ಪರಂಪರಾ ಪ್ರದೇಶದಲ್ಲಿರುವ ಪುರಾತನ ವೆಲ್ಲೆಸ್ಲಿ ಸೇತುವೆಯ ಸಂರಕ್ಷಣೆ ಕಾಮಗಾರಿ (2018-19)	ಕೆ.ಟಿ.ವಿ.ಜಿ.	26.00	ಆಯುಕ್ತರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು	26.00	ಸೇತುವೆಯಲ್ಲಿ ಬೆಳೆದಿದ್ದ ಗಿಡಗಂಟೆಗಳನ್ನು ತೆರವು ಗೊಳಿಸಿ ಸ್ವಚ್ಛಗೊಳಿಸಿದ್ದು, ವೆಂಟ್‌ಗಳಲ್ಲಿನ ಜಾಗಗಳಿಗೆ ಕಲ್ಲುಗಳನ್ನು ಸರಬರಾಜು ಮಾಡಿ ಅಳವಡಿಸಿದ್ದು, ಪಿಚ್ಚಿಂಗ್ ಕಾರ್ಯವು ಪ್ರಗತಿಯಲ್ಲಿದೆ.
6	ಶ್ರೀರಂಗಪಟ್ಟಣದ ಒಬೆಲಿಸ್ಕ್ ಹತ್ತಿರವಿರುವ ಡೆಲ್ಲಿ ಸೇತುವೆಯ ಗೇಟ್, ಬತೇರಿ ಹಾಗೂ ಕೋಟೆಗೋಡೆಯನ್ನು ಸಂರಕ್ಷಿಸುವ ಕಾಮಗಾರಿ (2019-20)	ಕೆ.ಟಿ.ವಿ.ಜಿ.	400.00	ಆಯುಕ್ತರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು	100.00	ಅಂದಾಜುಪಟ್ಟಿಯು ತಾಂತ್ರಿಕ ಮಂಜೂರಾತಿಗಾಗಿ ಲೋಕೋಪಯೋಗಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.
	ಒಟ್ಟು		1897.00		1057.00	

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ: 36:ಸ್ವೀಮರ:2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು. ದಿನಾಂಕ:17.03.2020

13 Stord 18/3/2020

ಇವರಿಂದ :

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಡಾ: ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2284 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಡಾ: ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2284ಕ್ಕೆ ಸಂಬಂಧಿಸಿದಂತೆ ಉತ್ತರದ ಕನ್ನಡ ಭಾಷೆಯ 350 ಪ್ರತಿಗಳನ್ನು ಮತ್ತು ಆಂಗ್ಲ ಭಾಷೆಯ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

Vanalakshmi CB 17/3/2020
(ವನಲಕ್ಷ್ಮಿ ಸಿ.ಬಿ)
ಶಾಖಾಧಿಕಾರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 2284
ಮಾನ್ಯ ಸದಸ್ಯರ ಹೆಸರು	: ಡಾ|| ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)
ಉತ್ತರಿಸುವವರು	: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು
ಉತ್ತರಿಸಬೇಕಾದ ದಿನಾಂಕ	: 18-03-2020.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿಯಲ್ಲಿ ಪ್ರಸ್ತುತ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಾವುವು;	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಪ್ರಸ್ತುತ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ವಿವರಗಳನ್ನು ಅನುಬಂಧ-01 ಮತ್ತು 02 ರಲ್ಲಿ ನೀಡಲಾಗಿದೆ. ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿಯಲ್ಲಿ ಪ್ರಸ್ತುತ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ವಿವರಗಳನ್ನು ಅನುಬಂಧ-03 ಮತ್ತು 04ರಲ್ಲಿ ನೀಡಲಾಗಿದೆ.
ಆ	ಈ ಯೋಜನೆಗಳನ್ನು ಅನುಷ್ಟಾನಗೊಳಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)	

ಸಂ:ಮಮಇ 36 ಸ್ವೀಮರ 2020

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಅನುಬಂಧ-1

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯಡಿಯಲ್ಲಿ ಪ್ರಸ್ತುತ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳ ವಿವರ

ಕ್ರ ಸಂ.	ಯೋಜನೆಗಳ ಹೆಸರು	ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು
1)	ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ (ಕೇಂದ್ರ ಪುರಸ್ಕೃತ ಯೋಜನೆ – ಜಿಲ್ಲಾ ವಲಯ)	ಅಂಗನವಾಡಿ ಕೇಂದ್ರದಲ್ಲಿ ದಾಖಲಾದ 06 ತಿಂಗಳಿಂದ 6 ವರ್ಷದ ಮಕ್ಕಳಿಗೆ ಪ್ರತಿ ದಿನ ರೂ.8.00/- ರಂತೆ, ಗರ್ಭಿಣಿ/ ಬಾಣಂತಿ/ ಪ್ರಾಯಪೂರ್ವ ಬಾಲಕಿಯರಿಗೆ ಘಟಕ ವೆಚ್ಚ ರೂ.9.50/-ರಂತೆ ಮತ್ತು ತೀವ್ರ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ ರೂ.12.00/-ರ ಘಟಕ ವೆಚ್ಚದಂತೆ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತದೆ.
2)	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ತರಬೇತಿ ಕಾರ್ಯಕ್ರಮ (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಉದ್ದೇಶಗಳು ಹಾಗೂ ಸೇವೆಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಲು ಐಸಿಡಿಎಸ್ ತರಬೇತಿ ಕಾರ್ಯಕ್ರಮವನ್ನು ಒಂದು ಪ್ರಧಾನ ಸಾಧನವಾಗಿ ಗುರುತಿಸಲಾಗಿದೆ. ಇಲಾಖೆಗೆ ಹೊಸದಾಗಿ ನೇಮಕಗೊಂಡ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ/ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ/ಮೇಲ್ವಿಚಾರಕಿಯರಿಗೆ ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಯೋಜನೆಯ ಇಂಡಕ್ಷನ್ ತರಬೇತಿ ವೃತ್ತಿ ತರಬೇತಿ ಮತ್ತು ಕಾಲಕಾಲಕ್ಕೆ ನಿಪ್ಸಿಡ್ ಸಂಸ್ಥೆಯವರು ಏರ್ಪಡಿಸುವ ತರಬೇತಿಗಳನ್ನೆ ನೀಡಲಾಗುತ್ತದೆ. ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ ಅಂಗನವಾಡಿ ಸಂಸ್ಥೆಗಳ ಮೂಲಕ ವೃತ್ತಿ ತರಬೇತಿಯನ್ನು ಸೇವಾವಧಿಯಲ್ಲಿ 1 ಬಾರಿಗೆ ನೀಡಲಾಗುವುದು. ಮತ್ತು ಕಾಲಕಾಲಕ್ಕೆ ಪುನಶ್ಚೇತನ ತರಬೇತಿಯನ್ನು ನೀಡಲಾಗುತ್ತದೆ.
3)	ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ (ಬಾಲಸಂಜೀವಿನಿ) (ರಾಜ್ಯ ವಲಯ)	ತೀವ್ರ ನ್ಯೂನಪೋಷಣೆಗೊಳಗಾದ ಮಕ್ಕಳ ಪೌಷ್ಟಿಕ ಮಟ್ಟ ಸುಧಾರಿಸಿ ಸಾಮಾನ್ಯ ದರ್ಜೆಗೆ ತರಲು ವೈದ್ಯಾಧಿಕಾರಿಗಳ ಸೂಚನೆಯಂತೆ ಔಷದೋಪಚಾರ ಹಾಗೂ ಚಿಕಿತ್ಸಾ ಆಹಾರಕ್ಕಾಗಿ ಪ್ರತಿ ಮಗುವಿಗೆ ವರ್ಷಕ್ಕೆ ರೂ.2000/-ನ್ನು ನೀಡಲಾಗುತ್ತಿದೆ.
4)	ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ವೈದ್ಯಕೀಯ ವೆಚ್ಚ/ಮರಣ ಪರಿಹಾರ (ರಾಜ್ಯ ವಲಯ)	ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಮರಣ ಪರಿಹಾರವಾಗಿ ಅವರ ವಾರಸುದಾರರಿಗೆ ರೂ.50000/- ಹಾಗೂ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ವೈದ್ಯಕೀಯ ವೆಚ್ಚಕ್ಕಾಗಿ ರೂ.50000/- ಗಳ ಧನ ಸಹಾಯ ಒದಗಿಸಲಾಗುತ್ತದೆ.
5)	ಅಂ. ಕಾರ್ಯಕರ್ತೆ/ ಸಹಾಯಕಿಯರ ಹೊಸ ಪಿಂಚಣಿ ವ್ಯವಸ್ಥೆ (ರಾಜ್ಯ ವಲಯ)	ಈ ಯೋಜನೆಯಡಿ 18–55 ವರ್ಷದ ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿಯರಿಗೆ ಮಾಹೆಯಾನ ಕ್ರಮವಾಗಿ ರೂ.150/- ಹಾಗೂ ರೂ.84/- ವಂತಿಕೆ ವಸೂಲಿ ಮಾಡಿ ಅಷ್ಟೇ ಮೊತ್ತದ ವಂತಿಕೆಯನ್ನು ಸರ್ಕಾರ ಭರಿಸುತ್ತದೆ. ಕಾರ್ಯಕರ್ತೆ/ಸಹಾಯಕಿಯರ ನಿವೃತ್ತಿ ನಂತರ ಪಿಂಚಣಿ ನೀಡಲಾಗುತ್ತದೆ.
6)	ಸಬಲ (SAG) ಪ್ರಾಯಪೂರ್ವ ಬಾಲಕಿಯರ ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	ಭಾರತ ಸರ್ಕಾರವು, ಪ್ರಾಯಪೂರ್ವ ಬಾಲಕಿಯರ ಸಬಲೀಕರಣ ಅಥವಾ ಸಬಲ ಯೋಜನೆಯನ್ನು ಪ್ರಾಯಪೂರ್ವ ಬಾಲಕಿಯರ ಯೋಜನೆಯನ್ನಾಗಿ (SAG) ಹೆಸರಿಸಿದ್ದು, 2018-19ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದರ ಉದ್ದೇಶವು 11–14 ವರ್ಷದ ಶಾಲೆಬಿಟ್ಟ ಪ್ರಾಯಪೂರ್ವ ಬಾಲಕಿಯರನ್ನು ಸಬಲರನ್ನಾಗಿ ಮಾಡುವುದಾಗಿದ್ದು, ಅವರ ಆರೋಗ್ಯ ಮತ್ತು ಪೌಷ್ಟಿಕ ಮಟ್ಟವನ್ನು ಹೆಚ್ಚಿಸುವುದರೊಂದಿಗೆ, ವಿವಿಧ ಕೌಶಲ್ಯಗಳು ಅಂದರೆ ಗೃಹ ಕೌಶಲ್ಯ, ಜೀವನಕೌಶಲ್ಯ, ವೃತ್ತಿ ತರಬೇತಿ ನೀಡಲಾಗುತ್ತದೆ.

7)	ಪ್ರಧಾನ ಮಂತ್ರಿ ಮಾತೃ ಂದನಾ ಯೋಜನೆ (ಕೇಂದ್ರ ಪುರಸ್ಕೃತ ಯೆ ಜನೆ – ರಾಜ್ಯ ವಲಯ)	ಮಾನ್ಯ ಪ್ರಧಾನ ಮಂತ್ರಿಗಳು ಪ್ಲಾನ್ ಇಂಡಿಯಾ ಅಡಿಯಲ್ಲಿ "ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ" (Maternity Benefit Programme) ಯಡಿ ದಿನಾಂಕ:01.01.2017ರ ನಂತರ ಗರ್ಭಿಣಿಯಾಗಿರುವ ಎಲ್ಲಾ ಮಹಿಳೆಯರಿಗೆ ರೂ.5000/-ಗಳ ಸಹಾಯಧನವನ್ನು ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು. ಸದರಿ ಯೋಜನೆ ಸೌಲಭ್ಯವನ್ನು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತಗೊಳಿಸಲಾಗಿದೆ.
8)	ಮಾತೃಶ್ರೀ ಯೋಜನೆ (ಜ್ಯ ವಲಯ)	ಸದರಿ ಯೋಜನೆಯಡಿ ಬಿ.ಪಿ.ಎಲ್/ಆದ್ಯತಾ ಕುಟುಂಬದ ಗರ್ಭಿಣಿಯರಿಗೆ ಹೆರಿಗೆ ಪೂರ್ವದ 3 ತಿಂಗಳು ಮತ್ತು ಬಾಣಂತಿಯರಿಗೆ ಹೆರಿಗೆ ನಂತರದ 3 ತಿಂಗಳ ಕಾಲ ಮಾಸಿಕ ರೂ.1,000/-ಗಳ ಸಹಾಯಧನವನ್ನು ಅವರ ಆಧಾರ್ ಲಿಂಕ್ಡ್ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು. ಸದರಿ ಯೋಜನೆಯು ಮೊದಲ 2 ಮಕ್ಕಳಿಗೆ ಅನ್ವಯವಾಗುತ್ತದೆ.
9)	ರಾಷ್ಟ್ರೀಯ ಶಿಶು ಪಾಲ ಯೋಜನೆ (ಕೇಂದ್ರ ಪುರಸ್ಕೃತ ಯೋ ಜನೆ – ರಾಜ್ಯ ವಲಯ)	ಉದ್ಯೋಗಸ್ಥ ಮಹಿಳೆಯರ ಮಕ್ಕಳ ಪಾಲನೆ–ಪೋಷಣೆಗಾಗಿ ಶಿಶು ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ತಾಯಂದಿರ ಕೆಲಸದ ಸಮಯದಲ್ಲಿ ತಮ್ಮ ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳಲು ಅನುಕೂಲವಾಗುವಂತೆ ಮಕ್ಕಳ ಸಮಗ್ರ ಬೆಳವಣಿಗೆಗೋಸ್ಕರ ಶಿಶು ಪಾಲನಾ ಕೇಂದ್ರದಲ್ಲಿ ಮಕ್ಕಳನ್ನು ಕಳುಹಿಸಬಹುದು.
10)	ನಬಾರ್ಡ್ ಅಡಿಯಲ್ಲಿ ಂಗನವಾಡಿ ಕಟ್ಟಡಗಳ ನಿರ್ಮಾಣ (ಜ್ಯ ವಲಯ)	ನಿವೇಶನ ಲಭ್ಯವಿರುವ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ನಿರ್ಮಾಣ ಮಾಡುವುದು. ನಬಾರ್ಡ್ ಸಹಾಯಾನುದಾನದಡಿ ಅಂಗನವಾಡಿ ಕಟ್ಟಡಗಳನ್ನು ಮಂಜೂರು ಮಾಡಲಾಗುತ್ತದೆ. ಶೇಕಡಾ 85 ನಬಾರ್ಡ್ ಪಾಲು ಹಾಗೂ ಶೇಕಡಾ 15 ರಾಜ್ಯದ ಪಾಲು ಸೇರಿರುತ್ತದೆ. ನಿಗದಿತ ಘಟಕ ವೆಚ್ಚದಂತೆ ಅನುದಾನ ಬಿಡುಗಡೆ ಮಾಡಲಾಗುತ್ತದೆ.
11)	ವಿಶೇಷ ಅಭಿವೃದ್ಧಿ ಯೋ ನೆಯಡಿಯಲ್ಲಿ ಅಂಗನವಾಡಿ ಕಟ್ಟಡಗಳ ರ್ಮಾಣ (ರಾಜ್ಯ ವಲಯ)	ನಂಜುಂಡಪ್ಪ ವರದಿ ಆಧಾರಿತ ಹಿಂದುಳಿದ 114 ತಾಲ್ಲೂಕುಗಳಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತದೆ. ಅಂಗನವಾಡಿ ಕಟ್ಟಡಗಳಿಗೆ ನಿವೇಶನ ಲಭ್ಯವಿರಬೇಕು. ಈ ಯೋಜನೆಯಡಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಕಪ್ಪು ಮಣ್ಣಿಗೆ ರೂ.18.00 ಲಕ್ಷ ಮತ್ತು ಕಪ್ಪು ಮಣ್ಣಿಗೆ ರೂ.16.80 ಲಕ್ಷ ನಿಗದಿ ಪಡಿಸಲಾಗಿದೆ.
12)	ಅಂಗನವಾಡಿ ಕಟ್ಟಡಗಳ ರ್ವಹಣೆ (ಜಿಲ್ಲಾ ವಲಯ)	ಈ ಯೋಜನೆಯಡಿ ಅಂಗನವಾಡಿ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ, ಹಾಗೂ ದುರಸ್ತಿಗೆ ಗರಿಷ್ಠ ರೂ.50,000/– ಮೀರದಂತೆ ಜಿಲ್ಲಾಪಂಚಾಯಿತಿಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.
13)	ಅಂಗನವಾಡಿ ಕಟ್ಟಡಗಳ ರ್ವಹಣೆ (ರಾಜ್ಯ ವಲಯ)	ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು 60:40 ರ ಅನುಪಾತದಂತೆ ಸ್ವಂತ ಮತ್ತು ಸರ್ಕಾರಿ ಕಟ್ಟಡಗಳ ವಾರ್ಷಿಕ ನಿರ್ವಹಣೆಗಾಗಿ ರೂ.3000/– ಅನುದಾನ ಬಿಡುಗಡೆ ಮಾಡಲಾಗುತ್ತದೆ.
14)	ಅಂಗನವಾಡಿಗಳ ಉನ್ನತಿ ರಣ (ರಾಜ್ಯ ವಲಯ)	ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು 60:40 ರ ಅನುಪಾತದಂತೆ ಅಂಗನವಾಡಿ ಕಟ್ಟಡಗಳ ಉನ್ನತೀಕರಣ, ಶೌಚಾಲಯ ಹಾಗೂ ನೀರಿನ ಸಂಪರ್ಕ ಕಲ್ಪಿಸಲು ಅನುದಾನ ಬಿಡುಗಡೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರ ನಿಗಧಿಪಡಿಸಿದ ಘಟಕ ವೆಚ್ಚದಂತೆ ಅನುದಾನ ಬಿಡುಗಡೆ ಮಾಡಲಾಗುತ್ತದೆ.
15)	ಅಂಗನವಾಡಿ ಕಟ್ಟಡಗಳ ರ್ಮಾಣ (ಐ.ಸಿ.ಡಿ.ಎಸ್.ನರೇಗಾ) ಜ್ಯ ವಲಯ)	2019–20ನೇ ಸಾಲಿನಲ್ಲಿ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ ಪ್ರತಿ ಕಟ್ಟಡಕ್ಕೆ ರೂ.10.00 ಲಕ್ಷ ಗಳಡಿ (ನರೇಗಾ ಪಾಲು ರೂ.5.00 ಲಕ್ಷ, ಕೇಂದ್ರದ ಪಾಲು ರೂ.1.00 ಲಕ್ಷ ಹಾಗೂ ರಾಜ್ಯದ ಪಾಲು ರೂ.4.00 ಲಕ್ಷ) ಹೊಂದಾಣಿಕೆ ಅನುದಾನದಿಂದ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ ಇವರು ನರೇಗಾ ಪಾಲಿನ ಅನುದಾನವನ್ನು ಒಗ್ಗೂಡಿಸಿಕೊಂಡು ಕಟ್ಟಡ ನಿರ್ಮಾಣಕ್ಕೆ ಕಾಲಾವಕಾಶ ನಿಗದಿ ಪಡಿಸಿ ಆರ್.ಡಿ.ಪಿ.ಆರ್. ಇಲಾಖೆಯಿಂದ ಸಿದ್ಧಪಡಿಸಿ ಕೊಟ್ಟಿರು ಅಂದಾಜು ಪಟ್ಟಿ & ನಕ್ಷೆ ಅನ್ವಯ ಕಟ್ಟಡ ನಿರ್ಮಿಸಲು ಕ್ರಮವಹಿಸುವುದು. ಸಂಬಂಧಿಸಿದ ಉಪನಿರ್ದೇಶಕರುಗಳು ಸೂಕ್ತ ಮೇಲ್ವಿಚಾರಣೆ ವಹಿಸುವುದು.
16)	ನಗರ ಅಂಗನವಾಡಿಗಳ ೀಲ್ದರ್ಜೆಕರಣ	ಜನಸಾಂದ್ರತೆ ಹೆಚ್ಚಿರುವ ನಗರ ಪ್ರದೇಶದಲ್ಲಿ 100 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವುದು. ಈ ಯೋಜನೆಯ ಉದ್ದೇಶ

	(ರಾಜ್ಯ ವಲಯ)	ಹಾಗೂ ಮಾನದಂಡವಾಗಿರುತ್ತದೆ.
17)	ಪೋಷಣ ಅಭಿಯಾನ (ರಾಷ್ಟ್ರೀಯ ಪೌಷ್ಠಿಕಾಂಶ ಅಭಿಯಾನ) (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	ಮಕ್ಕಳಲ್ಲಿ ಉಂಟಾಗುವ ಕುಂಠಿತ ಬೆಳವಣಿಗೆ, ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ತಡೆಗಟ್ಟುವುದು. ಮಕ್ಕಳ/ಕಿಶೋರಿ/ಮಹಿಳೆಯರಲ್ಲಿ ಉಂಟಾಗುವ ರಕ್ತ ಹೀನತೆಯನ್ನು ಕಡಿಮೆ ಗೊಳಿಸುವ ಸಲುವಾಗಿ ಅರಿವು/ಜಾಗೃತಿ ಮೂಡಿಸುವುದು.
18)	ಸ್ತ್ರೀಶಕ್ತಿ ಯೋಜನೆ (ರಾಜ್ಯ ವಲಯ)	ಸಮಾಜದ ಬಡ ಕುಟುಂಬದ, ಸಮಾನ ಆರ್ಥಿಕ ಹಾಗೂ ಸಾಮಾಜಿಕ ಹಿನ್ನಲೆಯುಳ್ಳ ಪರಸ್ಪರ ವಿಶ್ವಾಸದಿಂದ ಕೂಡಿದ 15 ರಿಂದ 20ಜನ ಮಹಿಳೆಯರು ಒಂದಡೆ ಸೇರಿ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಸ್ವಇಚ್ಚೆಯಿಂದ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳನ್ನು ರಚಿಸಿಕೊಂಡಿದ್ದಾರೆ. ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಮಹಿಳೆಯರು, ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು, ವಿಧವೆಯರು, ಏಡ್ಸ್ ಪೀಡಿತರು, ನಿರ್ಗತಿಕರು, ವಿಕಲಚೇತನರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರು, ಮದ್ಯಪಾನ ಮಾಡುವ ಅಥವಾ ಮಾದಕ ವಸ್ತುಗಳನ್ನು ಸೇವಿಸುವ ವ್ಯಕ್ತಿ ಇರುವ ಕುಟುಂಬದ ಮಹಿಳೆಯರಿಗೆ ಆದ್ಯತೆ ನೀಡಿ ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ.
19)	ಸಾಂತ್ವನ (ರಾಜ್ಯ ವಲಯ)	ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯ, ಆರ್ಥಿಕ ಪರಿಹಾರ ಹಾಗೂ ತರಬೇತಿ ಮುಖಾಂತರ ಸ್ವಾವಲಂಬಿಗಳಾಗುವಂತೆ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರನ್ನಾಗಿಸುವ ಗುರಿ ಹೊಂದಿದೆ. ಪ್ರಸ್ತುತ 193 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
20)	ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006 (ರಾಜ್ಯ ವಲಯ)	ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಉಂಟಾದಾಗ, ನ್ಯಾಯಾಲಯದ ಮುಖಾಂತರ ಮಹಿಳೆಯರಿಗೆ ಆರ್ಥಿಕ ಪರಿಹಾರ, ರಕ್ಷಣಾ ಆದೇಶ, ವಾಸದ ಆದೇಶ, ಮಕ್ಕಳ ವಶ, ತಾತ್ಕಾಲಿಕ ಆಶ್ರಯ, ವೈದ್ಯಕೀಯ ಹಾಗೂ ಕಾನೂನು ನೆರವನ್ನು ಒದಗಿಸಲು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ಹಾಗೂ ನಿಯಮ 2006ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ 47 ತಾಲ್ಲೂಕುಗಳಲ್ಲಿ ಮಾತ್ರ ಪ್ರತ್ಯೇಕ ಸಂರಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ತಾಲ್ಲೂಕುಗಳಲ್ಲಿ ಶಿಶುಅಭಿವೃದ್ಧಿ ಯೋಜನಾಧಿಕಾರಿಗಳೇ ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ 30 ಜಿಲ್ಲೆಗಳ ಉಪನಿರ್ದೇಶಕರು ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
21)	ರಾಜ್ಯ ಸರ್ಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ನಿರ್ಮಾಣ ಯೋಜನೆ (ರಾಜ್ಯ ವಲಯ)	ಉದ್ಯೋಗಸ್ಥ ಮಹಿಳೆಯರಿಗೆ ಸುರಕ್ಷಿತ ಹಾಗೂ ಯೋಗ್ಯ ವಸತಿ ಸೌಕರ್ಯ ಕಲ್ಪಿಸುವುದು ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ರೂ.25.00 ಲಕ್ಷಗಳನ್ನು ಕಟ್ಟಡ ಕಾಮಗಾರಿಗಾಗಿ ಅರ್ಹ ಸ್ವಯಂಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು. **ಪ್ರಸ್ತುತ ಈ ಯೋಜನೆಯಡಿ 5 ವಸತಿನಿಲಯಗಳಿಗೆ ಮಂಜೂರಾತಿ ನೀಡಲಾಗಿದೆ**
22)	ಬಾಲಕಿಯರ ವಸತಿ ನಿಲಯ (ರಾಜ್ಯ ವಲಯ)	ಹಿಂದುಳಿದ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ, ಇಲಾಖಾ ಅನುದಾನಿತ ಸ್ವಯಂಸೇವಾ ಸಂಸ್ಥೆಗಳ ಮೂಲಕ 21 ಜಿಲ್ಲೆಗಳಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ 41 ವಸತಿ ನಿಲಯಗಳನ್ನು ನಡೆಸಲಾಗುತ್ತದೆ.
23)	ಒನ್ ಸ್ಟಾಪ್ ಸೆಂಟರ್(ಸಖಿ) (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲು ಭಾರತ ಸರ್ಕಾರವು ಮೊದಲನೇ ಹಂತದಲ್ಲಿ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ತಲಾ ಒಂದರಂತೆ ಒನ್ ಸ್ಟಾಪ್ ಸೆಂಟರ್‌ನ್ನು ಸ್ಥಾಪಿಸಲು ಉದ್ದೇಶಿಸಿರುತ್ತದೆ.

		ಅದರಂತೆ ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿ ಒನ್ ಸ್ಟಾಪ್ ಸೆಂಟರ್ ಸ್ಥಾಪಿಸಲು ಕೇಂದ್ರ ಸರ್ಕಾರವು ಅನುದಾನ ಬಿಡುಗಡೆ ಮಾಡಿದ್ದು, ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಸ್ವಂತಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಎಲ್ಲಾ 29 ಜಿಲ್ಲಾ ಆಸ್ಪತ್ರೆಗಳಲ್ಲಿ ಒನ್ ಸ್ಟಾಪ್ ಸೆಂಟರ್ – ಸಖಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಅನುದಾನವು ನೇರವಾಗಿ ಭಾರತ ಸರ್ಕಾರದಿಂದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರ ಖಾತೆಗೆ ವರ್ಗಾಯಿಸಲ್ಪಡುತ್ತದೆ.
24)	ಸ್ವಾಧಾರಗೃಹ (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	2016–17ನೇ ಸಾಲಿನಿಂದ ಕೇಂದ್ರ ಸರ್ಕಾರವು ಸ್ವಾಧಾರ ಮತ್ತು ಅಲ್ಪಾವಧಿ ವಸತಿ ಗೃಹ ವಿಲೀನಗೊಳಿಸಿ ಸ್ವಾಧಾರಗೃಹ ಯೋಜನೆ ಅನುಷ್ಠಾನಕ್ಕೆ ತಂದಿರುತ್ತಾರೆ. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ನೊಂದಣಿಯಾಗಿ ಮೂರು ವರ್ಷವಾಗಿರುವ ಆರ್ಥಿಕವಾಗಿ ಸದೃಢವಾದ ಎಲ್ಲಾ ಮೂಲಭೂತ ಅನುಕೂಲತೆಗಳನ್ನು ಹೊಂದಿದ, ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಅನುಭವವಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರಗಳಲ್ಲಿ, ಸಲಹಾ ಕೇಂದ, ತರಬೇತಿ ಕೇಂದ್ರ ಹಾಗೂ ವೈದ್ಯಕೀಯ ಕೇಂದ್ರಗಳನ್ನು ನಡೆಸಲು ಅವಕಾಶವಿದೆ. ರಾಜ್ಯದಲ್ಲಿ ಪ್ರಸ್ತುತ 53 ಸ್ವಾಧಾರಗೃಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
25)	ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್ – 181 :	ಮಹಿಳೆಯರಿಗೆ ಮಾಹಿತಿಯನ್ನು ನೀಡಲು ಹಾಗೂ ದೌರ್ಜನ್ಯ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒಂದೇ ಸೂರಿನಡಿ ಒದಗಿಸುವ ನಿಟ್ಟಿನಲ್ಲಿ ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್–181 ಎಂಬ ಉಚಿತ ದೂರವಾಣಿ ಸೇವೆಯನ್ನು 24*7 ರಾಜ್ಯಾದ್ಯಂತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಭಾಗಿತ್ವದೊಂದಿಗೆ ಜಾರಿಗೊಳಿಸಲಾಗುತ್ತಿದೆ.
26)	ಭಾಗ್ಯಲಕ್ಷ್ಮಿ ಯೋಜನೆ (ರಾಜ್ಯ ವಲಯ)	**ಪ್ರಸ್ತುತ ಯೋಜನೆಯ ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಯ ಮಾನದಂಡಗಳು :** ಭಾಗ್ಯಲಕ್ಷ್ಮಿ ಯೋಜನೆಯನ್ನು 2006–07ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಈ ಬಗ್ಗೆ ಸರ್ಕಾರದ ಆದೇಶ ದಿನಾಂಕ: 06.03.2015ರ ಸರಳೀಕರಣ ಆದೇಶವನ್ನು ಹೊರಡಿಸಲಾಗಿದೆ. ಅದರಂತೆ, ➢ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ ಶಾಶ್ವತ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳು ಯೋಜನೆಯಡಿ ನೊಂದಣಿ ಮಾಡಲು ಅರ್ಹರಿರುತ್ತಾರೆ. ➢ ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು. ವಿಶೇಷ ಪ್ರಕರಣಗಳಲ್ಲಿ ಅಂದರೆ ಮೊದಲನೇ ಹೆರಿಗೆಯಲ್ಲಿ ಅವಳಿ ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಹಾಗು ಎರಡನೇ ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಈ ಎಲ್ಲಾ ಹೆಣ್ಣು ಮಕ್ಕಳಿಗೂ ಸೌಲಭ್ಯ ನೀಡುವುದು. ಈ ಸೌಲಭ್ಯವನ್ನು ಎರಡು ಹೆರಿಗೆಗೆ ಮಾತ್ರ ಮಿತಿಗೊಳಿಸುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಕುಟುಂಬದ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು ಎಂಬ ನಿಯಮವನ್ನು ಸಡಿಲಿಸಲಾಗಿದೆ. ➢ ಈ ಯೋಜನೆಯನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು. ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವ ಪ್ರದೇಶಗಳಲ್ಲಿ ವಾಸಿಸುವ ಪೋಷಕರು ತಮ್ಮ ಸಮೀಪದ ಅಂಗನವಾಡಿ ಕೇಂದ್ರದಲ್ಲಿ ನೊಂದಣಿ ಮಾಡುವುದು. ಮಗುವಿನ ಜನನವನ್ನು ಕಡ್ಡಾಯವಾಗಿ ನೊಂದಾಯಿಸಿರಬೇಕು ಹಾಗೂ ಜನನ ಪ್ರಮಾಣ ಪತ್ರವನ್ನು ಹೊಂದಿರಬೇಕು. ಈ ಯೋಜನೆಯ ಸರ್ಕಾರಿ ಆದೇಶ ಸಂಖ್ಯೆ:ಮಮಇ: 67 ಮಮಅ ದಿನಾಂಕ 24-02-2018 ರಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗಿದ್ದು ಸದರಿ ಆದೇಶದಂತೆ,

		• ಯೋಜನೆಯಡಿ ನೋಂದಣಿ ಮಾಡಲು ಮಗು ಜನಿಸಿದ ಒಂದು ವರ್ಷದೊಳಗೆ ಇರುವ ಅ ಧಿಯನ್ನು ಮಗು ಜನಿಸಿದ 2 ವರ್ಷಗಳವರೆಗೆ ವಿಸ್ತರಿಸಲಾಗಿದೆ ಮತ್ತು • ಎರಡನೇ ಮಗುವನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಕಡ್ಡಾಯ ಕುಟುಂಬ ಯೋಜನ ಶಸ್ತ್ರ ಚಿಕಿತ್ಸೆಗೆ ಒಳಪಡಬೇಕೆಂಬ ಷರತ್ತನ್ನ ಕೈಬಿಡಲಾಗಿದೆ. ಉಳಿದಂತೆ ದಿನಾಂಕ:06.03.2015ರ ಸರಳೀಕರಣದಲ್ಲಿನ ನಿಯಮಗಳು ಯಥಾವತ್ತಾಗಿ ಮುಂದುವರೆಯುತ್ತದೆ. ➢ ಪರಿಪಕ್ವ ಮೊತ್ತವನ್ನು ಪಡೆಯಲು ಫಲಾನುಭವಿ ಮಗು ಕನಿಷ್ಠ 8ನೇ ತರಗತಿಯವರೆಗೆ ವಿ ದ್ಯಾಭ್ಯಾಸವನ್ನು ಪಡೆದಿರಬೇಕು. ಆದರೆ ವಿಕಲಚೇತನ ಮಕ್ಕಳಿಗೆ ವಿನಾಯಿತಿ ನೀಡಲಾಗಿದ್ದು, ಸದರಿ ಮಕ್ಕಳು 1 ರಿಂದ ನೇ ತರಗತಿವರೆಗೆ ವ್ಯಾಸಂಗ ಮಾಡಿರಬೇಕು, ಒಂದು ವೇಳೆ ವಿಕಲಚೇತನ ಮಕ್ಕಳು ತೀವ್ರತರವಾದ ➢ ವಿಕಲತೆಯಿಂದ ಬಳಲುತ್ತಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಪ್ರತಿ ಪ್ರಕರ ಗಳ ಸಾಧಕ ಬಾಧಕಗಳನ್ನು ಪರಿಶೀಲಿಸಿ ಈ ಷರತ್ತನ್ನು ಸಹ ಸಡಿಲಿಸಲು ಅಧಿಕಾರ ನೀಡಿ ಆದೇಶಿಸಿದೆ. ➢ 5ನೇ ಮತ್ತು 8ನೇ ತರಗತಿ ಉತ್ತೀರ್ಣರಾಗಿರುವ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯ ಂದ ದೃಢೀಕರಣ ಪಡೆದು ಸಲ್ಲಿಸುವುದು. ➢ ಬಾಲಕಾರ್ಮಿಕ ನಿಷೇಧ ಕಾಯ್ದೆ 1986ರಂತೆ ಬಾಲ ಕಾರ್ಮಿಕಳಾಗಿರತಕ್ಕದ್ದಲ್ಲ. ➢ 18 ವರ್ಷ ಪೂರೈಸುವ ಮೊದಲು ವಿವಾಹವಾಗತಕ್ಕದ್ದಲ್ಲ. ➢ ಆಯ್ಕೆಯಾದ ಫಲಾನುಭವಿಯು ಮೇಲೆ ತಿಳಿಸಿದ ಅರ್ಹತೆಯ ಮಾನದಂಡಗಳಲ್ಲಿನ ಯಾವುದೇ ಒಂದು ಷರತ್ತುನ್ನು ಪೂರೈಸದಿದ್ದಲ್ಲಿಯೂ ಸಹ ಸೌಲಭ್ಯವನ್ನು ಮುಟ್ಟುಗೋಲು ಹಾಕಲಾಗುವುದು.
27)	ಮಕ್ಕಳ ಕಲ್ಯಾಣ ಉತ್ತಮ ಸೇವೆ ಸಲ್ಲಿಸಿದ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಪ್ರಶಸ್ತಿ. (ರಾಜ್ಯ ವಲಯ)	ಅಂತರ ರಾಷ್ಟ್ರೀಯ ಮಕ್ಕಳ ವರ್ಷದ ಅಂಗವಾಗಿ ಭಾರತ ಸರ್ಕಾರವು 1979ರಲ್ಲಿ ಜಾರಿಗೆ ತಂದ ಾಷ್ಟ್ರ ಪ್ರಶಸ್ತಿಗೆ ಅನುಗುಣವಾಗಿ ರಾಜ್ಯ ಸರ್ಕಾರವು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ನಿರತವಾಗಿರುವ ಕನಿಷ್ಠ 5 ವರ್ಷಗಳ ಕಾಲ ನಿ ತರವಾಗಿ ಸೇವೆ ಸಲ್ಲಿಸಿದ 4 ಸಂಸ್ಥೆಗಳನ್ನು ಹಾಗೂ 4 ವ್ಯಕ್ತಿಗಳನ್ನು ಸನ್ಮಾನಿಸಲು ರಾಜ್ಯ ಪ್ರಶಸ್ತಿಯನ್ನು ಜಾರಿಗೆ ತಂದಿರುತ್ತದೆ. ಈ ಪ್ರಶಸ್ತಿಯನ್ನು ಪ್ರತಿ ವರ್ಷ ನವಂಬರ್–14 ರಂದು ಆಚರಿಸಲಾಗುವ ಮಕ್ಕಳ ದಿನಾಚರಣೆಯ ದಿನದಂದು ನೀಡಲಾಗುವುದು.
28)	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ (ರಾಜ್ಯ ವಲಯ)	ಈ ಯೋಜನೆಯು 2006–07ನೇ ಸಾಲಿನಿಂದ ಜಾರಿಗೆ ತರಲಾಗಿದೆ. 6–18 ವರ್ಷದ ವಯೋಮಿತಿಯೊಳಗಿನ ಬಾಲಕರನ್ನು ಹೊಯ್ಸಳ ಪ್ರಶಸ್ತಿಗೆ ಮತ್ತು ಬಾಲಕಿಯರನ್ನು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಈ ಪ್ರಶಸ್ತಿಯು ರೂ. 10,000/–ಗಳ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಈ ಪ್ರಶಸ್ತಿಗಾಗಿ ಆಯ್ಕೆಯಾದ ಮಕ್ಕಳಿಗೆ ದ್ವಿತೀಯ ಪಿ.ಯು.ಸಿ ಪೂರೈಸುವವರೆಗೂ (18 ವರ್ಷದ ಮಿತಿಯೊಳಗೆ) ವಿದ್ಯಾಭ್ಯಾಸ ಮುಂದುವರೆಸಲು ಪ್ರತಿ ವರ್ಷ ರೂ.2,000/–ಗಳ ಶಿಷ್ಯವೇತನವನ್ನು ನೀಡಲಾಗುವುದು.
29)	ಬೇಟಿ ಬಚಾವೊ ಬೇಟಿ ಪಡಾವೊ (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	ಸನ್ಮಾನ್ಯ ಪ್ರಧಾನ ಮಂತ್ರಿಗಳು "ಬೇಟಿ ಬಚಾವೊ ಬೇಟಿ ಪಡಾವೊ ಕಾರ್ಯಕ್ರಮ" (Beti Bach , Beti Padhao) ಎಂಬ ಹೊಸ ಯೋಜನೆಯನ್ನು 22 ಜನವರಿ 2015ರಂದು ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದಿರು ರೆ. ಕುಸಿಯುತ್ತಿರುವ ಮಕ್ಕಳ ಲಿಂಗ ಅನುಪಾತವನ್ನು (Declining CSR) ಉತ್ತಮ ಪಡಿಸುವುದು ಹಾಗೂ ಮಹಿಳೆಯರನ ಸಬಲೀಕರಣಗೊಳಿಸುವುದು, "ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜ ಯನ್ನು ಅನುಷ್ಠಾನಗೊಳಿಸಲು,

		ಮಕ್ಕಳ ಲಿಂಗಾನುಪಾತ ಇಳಿಮುಖವಾಗುತ್ತಿರುವ ಭಾರತದ 100 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ, ಇದರಲ್ಲಿ ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಯು ಒಂದಾಗಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳ ಸಹಕಾರದಿಂದ ಅನುಷ್ಠಾನಗೊಳಿಸಲಾಗುತ್ತದೆ.
30)	ಉಜ್ವಲ ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯ ವಲಯ)	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆಗೆ ಹಾಗೂ ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು, ಇವರಿಗೆ ಪುನರ್‌ವಸತಿ ಕಲ್ಪಿಸಲು ಮತ್ತು ಕುಟುಂಬದವರೊಂದಿಗೆ ಪುನರ್ ವಿಲೀನಗೊಳಿಸಲು ರೂಪಿಸಿರುವ ಸಮಗ್ರ ಯೋಜನೆಯಾಗಿರುತ್ತದೆ. ಸದರಿ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಪ್ರಸ್ತುತ 14 ಉಜ್ವಲ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
31)	ಸ್ವೀಕಾರ ಕೇಂದ್ರ ಮತ್ತು ರಾಜ್ಯ ಮಹಿಳಾ ನಿಲಯ ಸಂಸ್ಥೆಗಳು. (ರಾಜ್ಯ ವಲಯ)	ಈ ಸದರಿ ಸಂಸ್ಥೆಗಳಲ್ಲಿ 18 ವರ್ಷದ ಮೇಲ್ಪಟ್ಟ ಮಹಿಳೆಯರಿಗೆ ತಾತ್ಕಾಲಿಕ ಮತ್ತು ಧೀರ್ಘಾವಧಿ ಪುನರ್ವಸತಿ ಕೇಂದ್ರವಾಗಿರುತ್ತವೆ. ಆಶ್ರಯ ಮತ್ತು ಪೋಷಣೆ ಅಗತ್ಯವಿರುವ ಮಹಿಳೆಯರು ಸ್ವ-ಇಚ್ಚೆಯಿಂದ, ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ, ಯಾವುದೇ ವ್ಯಕ್ತಿಗಳ ಮುಖಾಂತರ ಹಾಗೂ ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956ರ ಅಡಿಯಲ್ಲಿ ನ್ಯಾಯಾಲಯದಿಂದ ಪ್ರಕರಣವನ್ನು ದಾಖಲಿಸಿ ಕಳುಹಿಸಲ್ಪಟ್ಟ ಮಹಿಳೆಯರನ್ನು ದಾಖಲಿಸಿಕೊಳ್ಳಲಾಗುವುದು. ಸಂಸ್ಥೆಯಲ್ಲಿ ನಿವಾಸಿಯರಿಗೆ ಪಾಲನೆ, ಪೋಷಣೆ, ಊಟ, ವಸತಿ, ಬಟ್ಟೆ, ವೈದ್ಯಕೀಯ ಸೌಲಭ್ಯ, ರಕ್ಷಣೆ, ಶಿಕ್ಷಣ ತರಬೇತಿ ಮತ್ತು ಪುರ್ವಸತಿಯನ್ನು ಕಲ್ಪಿಸಲಾಗುತ್ತಿದೆ.
32)	ನಿರ್ಗತಿಕ ಮಕ್ಕಳ ಕುಟೀರ ಯೋಜನೆ (ಜಿಲ್ಲಾ ವಲಯ)	ಕುಟೀರದ ಮಕ್ಕಳಿಗೆ ಊಟ, ವಸತಿ, ಬಟ್ಟೆ, ವೈದ್ಯಕೀಯ ಸೌಲಭ್ಯ, ಮನರಂಜನೆ, ಶಿಕ್ಷಣ ನೀಡಿ ಸಮಾಜದ ಮುಖ್ಯ ವಾಹಿನಿಗೆ ತರಲಾಗುವುದು. ರಾಜ್ಯದಲ್ಲಿ 141 ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ 264 ಕುಟೀರಗಳು ಕಾರ್ಯ ನಿರ್ವಹಿಸುತ್ತಿವೆ.
33)	ಕಟ್ಟಡಗಳ ನಿರ್ಮಾಣ (ಸುಧಾರಣಾ ಸಂಸ್ಥೆಗಳು). (ರಾಜ್ಯ ವಲಯ)	ರಾಜ್ಯ ಮಹಿಳಾ ನಿಲಯ, ಸ್ವೀಕಾರ ಕೇಂದ್ರ ಹಾಗೂ ಉಪ ನಿರ್ದೇಶಕರ ಕಚೇರಿಗಳ ಕಟ್ಟಡದ ನಿರ್ಮಾಣವನ್ನು ಕೈಗೊಳ್ಳಲಾಗುತ್ತದೆ.
34)	ಕಟ್ಟಡಗಳ ದುರಸ್ತಿ ಹಾಗೂ ನಿರ್ವಹಣೆ (ಸುಧಾರಣಾ ಸಂಸ್ಥೆಗಳು) (ರಾಜ್ಯ ವಲಯ)	ರಾಜ್ಯ ಮಹಿಳಾ ನಿಲಯ ಹಾಗೂ ಸ್ವೀಕಾರ ಕೇಂದ್ರ ಹಾಗೂ ಉಪ ನಿರ್ದೇಶಕರ ಕಛೇರಿ ಕಟ್ಟಡ ದುರಸ್ತಿ ಹಾಗೂ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತದೆ.

*****

ಅನುಬಂಧ–2

2. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

1	ಉದ್ಯೋಗಿನಿ	1. ವಾರ್ಷಿಕ ಆದಾಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.2,00,000/– ಗಳು ಹಾಗೂ ಇತರ ವರ್ಗದ ಮಹಿಳೆಯರಿಗೆ ರೂ.1,50,000/– ಮೀರಿರಬಾರದು. 2. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು. 3. ವಿಧವೆ, ಸಂಕಷ್ಟಕ್ಕೊಳಗಾದ ಮಹಿಳೆ ಮತ್ತು ಅಂಗವಿಕಲರಿಗೆ ಆದಾಯ ಮಿತಿ ಇರುವುದಿಲ್ಲ. 4. ಸಾಲ ಮಂಜೂರಾದ ನಂತರ ಉದ್ಯಮಶೀಲತ ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕು. 5. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. ನಿಗಮದಿಂದ ನೀಡುವ ಸಹಾಯ ಧನದ ಮೊತ್ತ (ಘಟಕ ವೆಚ್ಚ) 6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಕನಿಷ್ಠ ರೂ.1.00 ಲಕ್ಷದಿಂದ ಗರಿಷ್ಠ ರೂ.5.00 ಲಕ್ಷಗಳು, ಸಹಾಯಧನದ ಮೊತ್ತ ಶೇ.70 ರಷ್ಟು ಗರಿಷ್ಠ ರೂ.3,50,000/-ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಗರಿಷ್ಠ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.30 ರಷ್ಟು ಗರಿಷ್ಠ ರೂ.90,000/– 7. ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತದೆ.
2	ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ	1. ವಯೋಮಿತಿ 18 ವರ್ಷ ಮೀರಿರಬೇಕು. 2. ಲಿಂಗತ್ವ ಅಲ್ಪಸಂಖ್ಯಾತರು ಸಂಗಮ ಅಥವಾ ಕೆ.ಎಸ್.ಎಂ.ಎಫ್. ಸಂಸ್ಥೆಗಳಲ್ಲಿ ನೊಂದಣಿಯಾಗಿರಬೇಕು. 3. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ್ ಸೀಡಿಂಗ್ ಆಗಿರಬೇಕು. 4. ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 5. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
3	ಕಿರುಸಾಲ ಯೋಜನೆ	1. ಗುಂಪಿನ ಉಳಿತಾಯ ಕನಿಷ್ಠ ರೂ.2.00 ಲಕ್ಷ. 2. ಸ್ತ್ರೀಶಕ್ತಿ ಗುಂಪು ತಾಲ್ಲೂಕು ಒಕ್ಕೂಟದಲ್ಲಿ ನೊಂದಣಿಯಾಗಿದ್ದು, ಸದಸ್ಯತ್ವ ಹೊಂದಿರಬೇಕು. 3. ಗುಂಪಿನ ಸದಸ್ಯರೆಲ್ಲರೂ ಸೇರಿ ಒಂದೇ ಉದ್ದಿಮೆ ಕೈಗೊಳ್ಳಬೇಕು. 4. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. 5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ತ್ರೀ ಶಕ್ತಿ ಸಂಘಕ್ಕೆ ರೂ.1.00 ಲಕ್ಷದಿಂದ ರೂ. 5.00 ಲಕ್ಷಗಳವರೆಗೆ ಮತ್ತು ಇತರೆ ವರ್ಗದ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳಿಗೆ ರೂ.1.00 ಲಕ್ಷದಿಂದ ರೂ. 2.00 ಲಕ್ಷಗಳವರೆಗೆ ಬಡ್ಡಿ ರಹಿತ ಸಾಲ ಒದಗಿಸಲಾಗುತ್ತದೆ. 6. ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
4	ಚೇತನ ಯೋಜನೆ	1. ವಯೋಮಿತಿ 18 ವರ್ಷ ಮೀರಿರಬೇಕು.2.ಲೈಂಗಿಕ ಕಾರ್ಯಕರ್ತೆಯರ ಸಮುದಾಯ ಆಧಾರಿತ ಸಂಸ್ಥೆಯ ಗುರುತಿನ ಚೀಟಿ ಹೊಂದಿರಬೇಕು 3.ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ್ ಸೀಡಿಂಗ್ ಆಗಿರಬೇಕು. 4.ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 5.ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದಮನಿತ ಮಹಿಳೆಯರಿಗೆ ನೇರವಾಗಿ ತಲಾ ರೂ.1,00,000/–(ರೂ.50,000/– ಗಳ ನೇರ ಸಾಲ ಹಾಗೂ ರೂ.50,000/– ಗಳ ಪ್ರೋತ್ಸಾಹಧನ)ಗಳನ್ನು ಹಾಗೂ ಇತರೆ ವರ್ಗದ ದಮನಿತ ಮಹಿಳೆಯರಿಗೆ ತಲಾ ರೂ.50,000/–

		(ರೂ.25,000/- ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನ) ಗಳನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.6. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
5	ಮಹಿಳಾ ತರಬೇತಿ ಯೋಜನೆ	1 ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ವಿಧವೆಯರಿಗೆ, ನಿರ್ಗತಿಕ ಮತ್ತು ವಿಕಲಚೇತನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ತರಬೇತಿ ನೀಡಿ ಉದ್ಯಮಶೀಲತೆ ಬೆಳೆಸುವುದು. 2.ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳ ಮೂಲಕ ತರಬೇತಿಯನ್ನು ನೀಡುವುದು. 3. ವಯೋಮಿತಿ 18 ರಿಂದ 45 ವರ್ಷಗಳು.
6	ಸಮೃದ್ಧಿ ಯೋಜನೆ	1. 18 ರಿಂದ 60 ವರ್ಷ ವಯೋಮಿತಿ. 2. ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಪೌರಾಡಳಿತ ಇಲಾಖೆಯಲ್ಲಿ ಮತ್ತು ಬೆಂಗಳೂರು ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಬೃಹತ್ ಮಹಾನಗರ ಪಾಲಿಕೆಯಲ್ಲಿ 'ಬೀದಿಬದಿ ವ್ಯಾಪಾರಿ' ಎಂದು ನೊಂದಣಿ ಮಾಡಿಸಿರುವ ಗುರುತಿನ ಚೀಟಿಯನ್ನು ಹೊಂದಿರಬೇಕು. ಗ್ರಾಮೀಣ ಪ್ರದೇಶಗಳ ವ್ಯಾಪ್ತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ) ರವರಿಂದ ಬೀದಿಬದಿ ವ್ಯಾಪಾರಿ ಎಂದು ದೃಢೀಕರಿಸಿದ ದಾಖಲೆಯನ್ನು ಪಡೆದಿರಬೇಕು. 3. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 4.ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
7	ಧನಶ್ರೀ ಯೋಜನೆ	1. ಅರ್ಜಿದಾರರು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಚಾಲ್ತಿಯಲ್ಲಿರಬೇಕು. 2. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳಾಗಿರಬೇಕು. 3 .ಅರ್ಜಿದಾರರು 18 ರಿಂದ 60 ವರ್ಷದೊಳಗಿರಬೇಕು. 4. ಅರ್ಜಿದಾರರು ಖಾತೆ ಹೊಂದಿರುವ ಆರ್ಥಿಕ ಸಂಸ್ಥೆ/ ಬ್ಯಾಂಕುಗಳಲ್ಲಿ ಸಾಲಗಾರರಾಗಿರಬಾರದು. 5. ಅರ್ಜಿದಾರರು ಹೆಚ್.ಐ.ವಿ. ಸೋಂಕಿತರೆಂದು ಆರೋಗ್ಯ ಕೇಂದ್ರದಲ್ಲಿ/ಐ.ಸಿ.ಟಿ.ಸಿ. ಕೇಂದ್ರಗಳಲ್ಲಿ ಪಡೆದ ವೈದ್ಯಕೀಯ ವರದಿಯನ್ನು ಹೊಂದಿರುವುದು. 6. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
8	ಬಡ್ಡಿ ಸಹಾಯಧನ ಯೋಜನೆ	1. ಮೊದಲನೇ ಬಾರಿ ಹೊಸ ಘಟಕವನ್ನು ಮಹಿಳಾ ಉದ್ದಿಮೆದಾರರು ಪ್ರಾರಂಭಿಸುವ ಸಲುವಾಗಿ. 2. ಹಾಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ/ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರಿಗೆ ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ/ ಆಧುನೀಕರಣಗೊಳಿಸುವ ಸಲುವಾಗಿ.

		3. * ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು * ಪಾಲುದಾರಿಕೆಯ ಉದ್ಯಮ/ನಿಯಮಿತ ಕಂಪನಿಗಳಲ್ಲಿ ಹೆಚ್ಚಿನ ಷೇರು/ನಿರ್ದೇಶಕರು ಶೇ 5ರಷ್ಟು ಇರಬೇ: * ಫಲಾನುಭವಿಗಳು ಒಂದು ಸಲ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
9	ದೇವದಾಸಿ ಪುನರ್ವಸತಿ ಯೋಜನೆ(ಆದಾಯೋತ್ಪನ್ನಕರ ಚಟುವಟಿಕೆ)	1. 1993-94 ಹಾಗೂ 2007-08ನೇ ಸಾಲಿನಲ್ಲಿ ಮಾಡಿದ ಸಮೀಕ್ಷೆಯಲ್ಲಿ ನೊಂದವಣಿಯಾಗಿರಬೇಕು. 2. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ್ ಸೀಡಿಂಗ್ ಆಗಿರಬೇಕು. 3. ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ.
10	ಮಾಜಿ ದೇವದಾಸಿಯರಿಗೆ ಮಾಸಾಶನ	1. 1993-94ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ ಗುರುತಿಸಲ್ಪ, ಹಾಗೂ ಪುನರ್ ಖಾತರೀಕರಣದಲ್ಲಿಯೂ ಗುರುತಿಸಲ್ಪಟ್ಟ ಮಾಜಿ ದೇವದಾಸಿಯರು ಮಾತ್ರ ಮಾಸಾಶನಕ್ಕೆ ಅರ್ಹರಿರುತ್ತಾರೆ. 2. ಅರ್ಜಿದಾರಳು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. 3. ಅರ್ಜಿದಾರಳು 1993-94ರ ಸಮೀಕ್ಷೆಯಲ್ಲಿ ಹಾಗೂ ಪುನರ್ ಖಾತರೀಕರಣದಲ್ಲಿ ಗುರುತಿಸಲ್ಪಟ್ಟಿರತಕ್ಕದ್ದು ಹಾಗೂ 45 ವರ್ಷ ಅಥವಾ 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವಳಾಗಿರತಕ್ಕದ್ದು. 4. 45 ವರ್ಷಕ್ಕಿಂತ ಕಡಿಮೆಯಿರುವ ಮಾಜಿ ದೇವದಾಸಿ ಮಹಿಳೆಯರು ಈ ಮಾಸಾಶನಕ್ಕೆ ಅರ್ಹರಿರುವುದಿಲ್ಲ.
11	ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ	1. ಮಾಜಿ ದೇವದಾಸಿಯು ಕರ್ನಾಟಕ ರಾಜ್ಯದ ಖಾಯಂ ವಾಸಿಯಾಗಿರಬೇಕು. 2. ಅರ್ಜಿದಾರರು 18 ವರ್ಷ ಮೇಲ್ಪಟ್ಟವರಾಗಿರಬೇಕು. 3. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.40,000/-ಗಳನ್ನು ಮೀರಿರಬಾರದು. 4. ಅರ್ಹ ಫಲಾನುಭವಿಯು ಸರ್ಕಾರದ ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು. 5. ಅರ್ಜಿದಾರರು ನಿವೇಶನ ಹೊಂದಿರುವ ಗ್ರಾಮದಲ್ಲಿ ಕನಿಷ್ಠ 5 ವರ್ಷಗಳು ನೆಲೆಸಿರಬೇಕು. 6. ಸ್ವಂತ ನಿವೇಶನ ಹೊಂದಿರಬೇಕು.

*****

<u>ಅನುಬಂಧ–3</u>

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಇಲಾಖೆಯ ಕಾರ್ಯಕ್ರಮಗಳನ್ನು 3 ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

1. ವಿಕಲಚೇತನರಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳು.
2. ಹಿರಿಯ ನಾಗರಿಕರಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳು.
3. ಸಾಮಾಜಿಕ ಭದ್ರತೆ ಮತ್ತು ರಕ್ಷಣೆ ಕಾರ್ಯಕ್ರಮಗಳು.

ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು:

(ಎ) ಶೈಕ್ಷಣಿಕ:–

1) ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಇಲಾಖೆಯಡಿ ಶ್ರವಣದೋಷವುಳ್ಳ ಮಕ್ಕಳಿಗಾಗಿ ಬೆಂಗಳೂರು ನಗರ, ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 5 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

2. ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಇಲಾಖೆಯಡಿ 4 ಅಂಧ ಮಕ್ಕಳ ವಸತಿ ಶಾಲೆಗಳು ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

3. ಸರ್ಕಾರಿ ಅನುದಾನಿತ ಶಾಲೆಗಳು

(ಅ) 1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

(ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 133 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/– ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/– ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ [illegible] ಮಾಹೆಯಾನ ತಲಾ ರೂ. 6000/– ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

4. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ:

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು

ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

5. <u>ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:</u>

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ. ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

6. <u>ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:</u>

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

7. <u>ಬ್ರೈಲ್ ಮುದ್ರಣಾಲಯ:</u>

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

8. <u>ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:</u>

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ.

8. <u>ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:</u>

ಸೆರೆಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ. 10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ. ಪ್ರತಿ ವಿಭಾಗವಾರು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ.

<u>(ಬಿ) ಉದ್ಯೋಗ ಮತ್ತು ತರಬೇತಿ:</u>

1. <u>ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:</u>

ಈ ಯೋಜನೆಯ ಉದ್ದೇಶವು ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ. 1982ರ ರಾಜ್ಯ ಅನುದಾನ ಸಂಹಿತೆಯಡಿ 5 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರು ಮತ್ತು ಮೈಸೂರಿನಲ್ಲಿ ನಡೆಸಲಾಗುತ್ತಿದೆ. ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾಕ್‌ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ. ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯುತ್ತಿದ್ದಾರೆ.

2. <u>ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:</u>

ಬೆಂಗಳೂರಿನಲ್ಲಿ ಮಹಿಳಾ ಮತ್ತು ಪುರುಷ ಅಂಗವಿಕಲ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾದ ಒಂದೊಂದು ವಸತಿ ನಿಲಯವನ್ನು ನಡೆಸಲಾಗುತ್ತಿದೆ. ಪುರುಷರ ವಸತಿ ನಿಲಯದಲ್ಲಿ 50 ನಿವಾಸಿಗಳು ಹಾಗೂ ಮಹಿಳೆಯರ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿದೆ.

3. <u>ಆಧಾರ ಯೋಜನೆ :</u>

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಸಾಲ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ.15,000/–ಗಳ ಮೌಲ್ಯದ ಕಬ್ಬಿಣದ ಗೂಡಂಗಡಿಯನ್ನು ಉಚಿತವಾಗಿ ಹಾಗೂ ರೂ.20,000/–ಗಳ ನಿರ್ವಹಣಾ ಬಂಡವಾಳವನ್ನು ಬಡ್ಡಿ ರಹಿತ ಸಾಲದ ರೂಪದಲ್ಲಿ ನೀಡಲಾಗುತ್ತಿದೆ. 2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ 'ಆಧಾರ' ಸ್ವಯಂ ಉದ್ಯೋಗ ಯೋಜನೆಯ ಘಟಕ ವೆಚ್ಚವನ್ನು ಈಗಿರುವ ರೂ.0.35ಲಕ್ಷಗಳಿಂದ ರೂ.1.00 ಲಕ್ಷ ರೂ.ಗಳಿಗೆ ಹೆಚ್ಚಿಸಿ, ಇದರಲ್ಲಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲಾಗಿದೆ.

4. <u>ಗ್ರಾಮೀಣ ಪುನರ್ವಸತಿ ಯೋಜನೆ:</u>

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ: ಮಮಇ/241/ಪಿಹೆಚ್‌ಪಿ/2019, ದಿನಾಂಕ: 07–02–2020ರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/–ಗಳಿಂದ ರೂ.6000/–ಗಳಿಗೆ ಹಾಗೂ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.6000/–ಗಳಿಂದ ರೂ.12,000/–ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

5. <u>ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:</u>

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಿಲ್ಲಾ ಕೇಂದ್ರಗಳಲ್ಲಿ 26 ಮಹಿಳಾ ವಸತಿ ನಿಲಯಗಳನ್ನು ನಡೆಸುತ್ತಿದ್ದು, ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/–ಗಳನ್ನು ಪಾವತಿಸಬೇಕಾಗಿರುತ್ತದೆ.

<u>ಸಿ. ಸಾಮಾಜಿಕ ಭದ್ರತಾ ಯೋಜನೆಗಳು:</u>

1. [illegible]

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ.

2. <u>ಮಂದಮತಿ ಮಹಿಳೆಯರ ಅನುಪಾಲನಾ ಗೃಹ:</u>

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ.

3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:

ಮಾನಸಿಕ ಅಸ್ವಸ್ಥರಿಗಾಗಿ ಬೆಂಗಳೂರು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾನಸ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿಯನ್ನು ನೀಡಿರುತ್ತದೆ. ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ. ಪ್ರಸ್ತುತ ಬೆಂಗಳೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಮಾತ್ರ ಮಾನಸ ಕೇಂದ್ರಗಳು ನಡೆಯುತ್ತಿವೆ.

4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಟಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 2 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

(ಡಿ) ಪುನರ್ವಸತಿ ಯೋಜನೆಗಳು:

1. ಅಂಗವಿಕಲರಿಗೆ ಸಾಧನ ಸಲಕರಣೆಗಳು :

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡ ಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗ ರೂ.24,000/- ನಿಗದಿಗೂಳಿಸಲಾಗಿದ.

ಅ. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ಆ. ತೀವ್ರತರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ ವಿಕಲಚೇತನರಿಗೆ ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಒದಗಿಸಲಾಗುತ್ತಿದೆ.

2. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು.

3. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

4. ಸಾಧನೆ ಮತ್ತು ಪ್ರತಿಭೆ ಯೋಜನೆ:

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

5. ನಿರಾಮಯ ಆರೋಗ್ಯ ವಿಮಾ ಯೋಜನೆ :

ಬುದ್ದಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯು ಜಾರಿಯಲ್ಲಿದ್ದು, ಮೇಲೆ ವಿವರಿಸಿದ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿಗೆ ವರ್ಷಕ್ಕೆ ಒಂದು ಸಾರಿಗೆ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಅಧಿಕೃತ ಸಂಸ್ಥೆಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

6. ಅರಿವಿನ ಸಿಂಚನ:

ವಿಕಲಚೇತನರಿಗೆ ಸೂಕ್ತ ಸಾಧನ ಸಲಕರಣೆ, ಅಡೆತಡೆ ರಹಿತ ವಾತಾವರಣ, ವಿಶೇಷ ಶಿಕ್ಷಣ, ಅವಶ್ಯಕ ಥೆರಪಿ ಚಿಕಿತ್ಸೆ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವುದರಿಂದ ಸಮಾಜದ ಮುಖ್ಯವಾಹಿನಿಗೆ ತರಬಹುದಾಗಿರುತ್ತದೆ. ವಿಕಲಚೇತನರ ತಂದೆ-ತಾಯಿ, ಪೋಷಕರಿಗೆ ಅವರ ಕರ್ತವ್ಯ/ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು ಈ ಯೋಜನೆಯ ಉದ್ದೇಶವಾಗಿದೆ.

7. ಸ್ಪರ್ಧಾ ಚೇತನ:-

[illegible] ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

8. ನಿರುದ್ಯೋಗ ಭತ್ಯೆ :- ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

(ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:

1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು.

2) ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:-

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ (ಗಓಖಕಿಗಇ ಆಖಖಂಃಖಐಖಖಿಜ ಖಆ) ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

3). ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್:

ಈ ಯೋಜನೆಯಡಿ ಸರ್ಕಾರವು ಅರ್ಹ ವಿಕಲಚೇತನರಿಗೆ 100 ಕಿ.ಮೀ. ವ್ಯಾಪ್ತಿಯೊಳಗೆ ಸಂಚರಿಸಲು ವಾರ್ಷಿಕ ರೂ.660/-ರ ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತಿದೆ.

ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

ಹಗಲು ಯೋಗಕ್ಷೇಮ ಕೇಂದ್ರಗಳು:

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50–150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

1. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

2. ವೃದ್ಧಾಶ್ರಮಗಳಿಗೆ ಅನುದಾನ ನೀಡುವ ಯೋಜನೆ:

ರಾಜ್ಯದ 30 ಜಿಲ್ಲೆಗಳಲ್ಲಿ 31 ವೃದ್ಧಾಶ್ರಮಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ನೀಡಲು ಅವಕಾಶವನ್ನು ಕಲ್ಪಿಸಿಕೊಳ್ಳಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ 25 ವೃದ್ಧರು ಇರುವ ಒಂದು ಘಟಕಕ್ಕೆ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ನೀಡಲಾಗುತ್ತದೆ. ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ.

3. **ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:**

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

ಕೇಂದ್ರ ಸರ್ಕಾರದ ಅನುದಾನಿತ ಯೋಜನೆಗಳು

1. **ದೀನದಯಾಳ್ ರಿಹ್ಯಾಬಿಲಿಟೇಷನ್ (ಡಿಡಿಆರ್‌ಎಸ್) ಯೋಜನೆಯಡಿ ವಿಕಲಚೇತನರಿಗೆ ಶೈಕ್ಷಣಿಕ ಹಾಗೂ ವೃತ್ತಿ ತರಬೇತಿ ಯೋಜನೆಗಳು**

ವಿವಿಧ ಬಗೆಯ ವಿಕಲಚೇತನ ಮಕ್ಕಳಿಗೆ ಹಾಗೂ ವ್ಯಕ್ತಿಗಳಿಗೆ ಉಚಿತ ವಿದ್ಯಾಭ್ಯಾಸ, ತರಬೇತಿ, ಪುನರ್ವಸತಿ, ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ವಿದ್ಯಾಭ್ಯಾಸವನ್ನು ಒದಗಿಸಲು ಈ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಮೂಲಕ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

2. **ಸುಗಮ್ಯ ಭಾರತ ಅಭಿಯಾನ (ಎಸ್‌ಬಿಎ) ಯೋಜನೆಯಡಿ ವಿಕಲಚೇತನರಿಗೆ ಸಾರ್ವಜನಿಕ ಕಟ್ಟಡಗಳಲ್ಲಿ ಅಡೆತಡೆರಹಿತ ವಾತವರಣ ಕಲ್ಪಿಸುವುದು.**

ಸುಗಮ್ಯ ಭಾರತ ಯೋಜನೆಯಡಿ ವಿಕಲಚೇತನರು ಸಾರ್ವಜನಿಕ ಕಟ್ಟಡ ಹಾಗೂ ಸ್ಥಳಗಳಲ್ಲಿ ಅಡೆತಡೆ ರಹಿತವಾಗಿ ಸುಲಭವಾಗಿ ಓಡಾಡಲು ಅನುವಾಗುವಂತೆ ಇಳಿಜಾರು ದಾರಿ(ರ್‍ಯಾಂಪ್), ಅಂಗವಿಕಲಸ್ನೇಹಿ ಶೌಚಾಲಯ, ಸೂಚನಾ ಫಲಕಗಳು, ಟ್ಯಾಕ್ಟೈಲ್ ಫ್ಲೋರಿಂಗ್, ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತ ಮತ್ತು ಶಬ್ದ ಸಂಕೇತಗಳನ್ನು ನಿರ್ಮಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

3. **ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರ**

- ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರಗಳ ಅನುಷ್ಠಾನದ ಯೋಜನೆಯು 2015-16ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈ ಇಲಾಖೆಗೆ ವರ್ಗಾವಣೆಯಾಗಿರುತ್ತದೆ.
- ಕರ್ನಾಟಕದಲ್ಲಿ ಒಟ್ಟು 38 ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರಗಳು(ಐಆರ್‌ಸಿಎ) ಕೇಂದ್ರಗಳು ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತಿವೆ.
- ಆ ಪೈಕಿ 38 ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ (ಐಆರ್‌ಸಿಎ) ಕೇಂದ್ರಗಳು ಕೇಂದ್ರ ಸರ್ಕಾರದಿಂದ ಅನುದಾನ ಪಡೆಯುತ್ತಿವೆ.
- ವಿವಿಧ ಜಿಲ್ಲೆಗಳಲ್ಲಿ 15 ಬೆಡ್‌ಗಳ ಕೇಂದ್ರಗಳು-34 ಹಾಗೂ 30 ಬೆಡ್‌ಗಳ ಕೇಂದ್ರಗಳು-4 ಒಟ್ಟು 38 ಕೇಂದ್ರಗಳು ನಡೆಯುತ್ತಿವೆ.

4. **ಇಂಟಿಗ್ರೇಟೆಡ್ ಪ್ರೋಗ್ರಾಂ ಫಾರ್ ಓಲ್ಡರ್ ಪರ್ಸನ್ಸ್:**

ಕೇಂದ್ರ ಸರ್ಕಾರದ ಯೋಜನೆಯು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಹಿರಿಯ ನಾಗರಿಕರಿಗಾಗಿ ಈ ಕೆಳಕಂಡ ಯೋಜನೆಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಅ. ವೃದ್ಧಾಶ್ರಮಗಳು – 40

ಆ. ಡಿಮೆನ್ಷಿಯಾ ಕೇರ್ ಸೆಂಟರ್ -1 ದಾವಣಗೆರೆ ಜಿಲ್ಲೆ

ಇ. ಮೊಬೈಲ್ ಮೆಡಿಕೇರ್ ಯೂನಿಟ್ -01 ಕೋಲಾರ ಜಿಲ್ಲೆ.

ಈ. ಫಿಜಿಯೋ ಥೆರಪಿ ಕ್ಲಿನಿಕ್ -1 ಕೋಲಾರ ಜಿಲ್ಲೆ.

*****

ಅನುಬಂಧ-4

ಕ್ರ. ಸಂ.	ಯೋಜನೆಯ ಹೆಸರು	ಯೋಜನೆಯ ಸ್ವರೂಪ	ಫಲಾನುಭವಿಗಳ ಅರ್ಹತೆಗಳು	ನೆರವಿನ ಮಿತಿ	ಮಂಜೂರಾತಿ ಷರತ್ತುಗಳು	ಮಂಜೂರಾತಿ ಅಧಿಕಾರಿ
೧	೨	೩	೪	೫	೬	೭
೧.	ಶ್ರವಣದೋಷವುಳ್ಳ ಮಕ್ಕಳಿಗಾಗಿ ವಿಶೇಷ ವಸತಿಯುತ ಶಾಲೆಗಳು	ಇಲಾಖೆಯಿಂದ ಶ್ರವಣದೋಷವುಳ್ಳ ಮಕ್ಕಳಿಗಾಗಿ ಬೆಂಗಳೂರು ನಗರ, ಮೈಸೂರು, ಗುಲ್ಬರ್ಗ, ಬಳ್ಳಾರಿ, ಬೆಳಗಾಂ ಜಿಲ್ಲೆಗಳಲ್ಲಿ ೫ ಕಿವುಡು ಮಕ್ಕಳ ಶಾಲೆಗಳು ನಡೆಯುತ್ತಿವೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತವಾಗಿ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಬೆಳಗಾಂನಲ್ಲಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಇರುವ ಪ್ರತ್ಯೇಕ ಶಾಲೆಯಾಗಿರುತ್ತದೆ.	ಶ್ರವಣದೋಷವುಳ್ಳ ಮಕ್ಕಳಿಗೆ	–	–	ಶಾಲೆಯ ಅಧೀಕ್ಷಕರು
೨	ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:	ಇಲಾಖೆಯಿಂದ ೪ ಅಂಧ ಮಕ್ಕಳ ಶಾಲೆಗಳು ಗುಲ್ಬರ್ಗಾ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಗಳಲ್ಲಿ ನಡೆಯುತ್ತಿವೆ. ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ದಾವಣಗೆರೆಯಲ್ಲಿ ಅಂಧ ಹೆಣ್ಣು ಮಕ್ಕಳಿಗಾಗಿ ಇರುವ ಪ್ರತ್ಯೇಕ ಶಾಲೆಯಾಗಿರುತ್ತದೆ.	ಅಂಧ ಮಕ್ಕಳಿಗೆ	–	–	ಶಾಲೆಯ ಅಧೀಕ್ಷಕರು
೩.	೧೯೮೨ರ ಅನುದಾನ ಸಂಹಿತೆಯಡಿ ವಿಶೇಷ ಶಾಲೆಗಳು	ವಿವಿಧ ವಿಕಲಚೇತನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಊಟ, ವಸತಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ಸಮಾಜದಲ್ಲಿ ಇತರೆ ಮಕ್ಕಳಂತೆ ವಿದ್ಯಾಭ್ಯಾಸವನ್ನು ಒದಗಿಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯಿತಿ ಮೂಲಕ ಧನ ಸಹಾಯ ನೀಡುವ ಯೋಜನೆ. ಸರ್ಕಾರದ ಆದೇಶ ಸಂಖ್ಯೆ:ಮಮಇ/೩೮೩/ಪಿಹೆಚ್‌ಪಿ/೨೦೧೪ ದಿನಾಂಕ:೦೩-೦೫-೨೦೧೫ರಲ್ಲಿ ವಸತಿಯುತ ಮಕ್ಕಳ ಪಥ್ಯಾಹಾರಕ್ಕಾಗಿ ಹಾಲಿ ನೀಡುತ್ತಿರುವ ಅನುದಾನವನ್ನು ರೂ.೬೦೦/- ರಿಂದ ರೂ.೧೦೦೦/-ಗಳಿಗೆ ಹೆಚ್ಚಿಸಲಾಗಿದೆ.	• ಈ ಯೋಜನೆಯನ್ನು ಜಿಲ್ಲಾ ಪಂಚಾಯಿತಿಗಳ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತರಲಾಗುತ್ತಿದೆ. • ವಿವಿಧ ರೀತಿಯ ಅಂಗವಿಕಲತೆಗೆ ಸಂಬಂಧಿಸಿದಂತೆ ವಿಶೇಷ ಶಾಲೆಗಳಿಗೆ ರಾಜ್ಯ ಸರ್ಕಾರದಿಂದ ಶೇಕಡಾ ೧೦೦ ರಷ್ಟು ಅನುದಾನವನ್ನು ಒದಗಿಸಲಾಗುತ್ತಿದೆ. • ಈ ಯೋಜನೆಯನ್ನು	ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ. ಕಾಲಕಾಲಕ್ಕೆ ಸರ್ಕಾರಿ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಯನ್ವಯ ವೇತನವನ್ನು ಹಾಗೂ ಆಹಾರ ವೆಚ್ಚ ಮುಂತಾದವುಗಳಿಗೆ ಅನುದಾನವನ್ನು ನೀಡಲಾಗುತ್ತಿದೆರ.	• ಸಂಸ್ಥೆಯು ಯಾವುದೇ ಒಂದು ಜನಾಂಗದ ಲಾಭಕ್ಕಾಗಿ ವಿಶೇಷ ಶಾಲೆಯನ್ನು ನಡೆಸುತ್ತಿರಬಾರದು. • ಸಂಸ್ಥೆಯು ಅಧಿಕೃತವಾಗಿ ರಚಿತವಾಗಿರುವ ಆಡಳಿತ ಮಂಡಳಿಯನ್ನು ಹೊಂದಿದ್ದು ಆಡಳಿತ ವರ್ಗದ ಅಧಿಕಾರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿ	ಜಿಲ್ಲಾ ಪಂಚಾಯಿತಿ

			ಪಡೆಯಲು ಸ್ವಯಂ ಸೇವಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ ೨ ವರ್ಷಗಳಾಗಿರಬೇಕು. • ಸ್ವಯಂ ಸೇವಾ ಸಂಸ್ಥೆಯು, ಸಾಕಷ್ಟು ಸಿಬ್ಬಂದಿವರ್ಗದೊಂದಿಗೆ ಅಗತ್ಯವಾದ ಮೂಲ ಸೌಲಭ್ಯ ಸಂಪನ್ಮೂಲ ಹಾಗೂ ಅನುಭವ ಮತ್ತು ಆರ್ಥಿಕವಾಗಿ ಸದೃಢವಾಗಿರಬೇಕು.		ಸಂಸ್ಥೆಯ ಬರವಣಿಗೆಯಲ್ಲಿರುವ ಸಂವಿಧಾನದಲ್ಲಿ ನಿರೂಪಿತವಾಗಿರಬೇಕು. • ಸಂಸ್ಥೆಯು ಯಾವುದೇ ಜಾತಿ, ಪಂಥ, ಮತ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು.	
೪	ಸರ್ಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ಅಂಗವಿಕಲರ ವಿಶೇಷ ಶಾಲೆಗಳಿಗೆ ಆರ್ಥಿಕ ನೆರವು	• ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣ ಸೂಚಿಸಿದಂತೆ ಅಂಗವಿಕಲ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ನೀಡುವುದು. • ಎಲ್ಲಾ ಅಂಗವಿಕಲ ಮಕ್ಕಳಿಗೂ ಶೈಕ್ಷಣಿಕ ಸೌಲಭ್ಯ ಒದಗಿಸುವುದು. • ಅಂಗವಿಕಲ ಮಕ್ಕಳಲ್ಲಿ ಶೇ.೧೦೦ರಷ್ಟು ಸಾಕ್ಷರತೆಯನ್ನು ಮೂಡಿಸುವುದು. • ಅಂಗವಿಕಲ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು. • ಕುಷ್ಠರೋಗ ನಿವಾರಿತ ಅಂಗವಿಕಲರಿಗೆ, ಮಾನಸಿಕ ಅಸ್ವಸ್ಥರಿಗೆ ಹಾಗೂ ತರಬೇತಿ ಪಡೆಯಲು ಅರ್ಹರಿರು ವಂತಹ ಬುದ್ಧಿಮಾಂದ್ಯರಿಗೆ ಔದ್ಯೋಗಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ೧ ಪುನರ್ವಸತಿಗೆ ನೆರವು ನೀಡುವುದು. ೬ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರನಾದ ಬುದ್ಧಿಮಾಂದ್ಯರ ಪಾಲನೆಗಾಗಿ ಬೆಂಗಳೂರು ನಗರದಲ್ಲಿ ಪ್ರಾಯೋಗಿಕವಾಗಿ ೦೨ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ತನ್ಮೂಲಕ ಇಂತಹ ಮಕ್ಕಳ ಪೋಷಕರಿಗೆ ಸಮರ್ಪಕವಾಗಿ ಉದ್ಯೋಗದಲ್ಲಿ ತೊಡಗಿಸಿ ಕೊಳ್ಳಲು ಸಹಕಾರ ನೀಡಲಾಗುವುದು. ಪ್ರತಿ ಮಗುವಿಗೆ ಮಾಸಿಕ ರೂ.೧೦,೦೦೦/-ಗಳಂತೆ	ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು, ಸಹಾಯಧನದ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಜಿಲ್ಲಾ ಅಂಗ ವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಿದಲ್ಲಿ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾಮಟ್ಟದ ಸಮಿತಿಯ ಶಿಫಾರಸ್ಸಿನೊಂದಿಗೆ ಪ್ರಧಾನ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು. ಸಹಾಯಧನದ ಮಂಜೂರಾತಿ ಅಧಿಕಾರವು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ.	ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಹಾಯ ಧನ ನೀಡಲು ೨೦೧೦-೧೧ನೇ ಸಾಲಿನಿಂದ ಈ ಯೋಜನೆಯು ಜಾರಿಗೆ ಬಂದಿರುತ್ತದೆ. ಪ್ರಾರಂಭದಲ್ಲಿ ವಸತಿಯುತ ಶಾಲೆಗಳಿಗೆ ಪ್ರತೀ ಮಗುವಿಗೆ ಮಾಹೆಯಾನ ರೂ.೨೫೦೦/- ರಂತೆ ಹಾಗೂ ವಸತಿ ರಹಿತ ಶಾಲೆಗಳಿಗೆ ಮಗುವಿಗೆ ಮಾಹೆಯಾನ ರೂ. ೨೦೦೦/- ರಂತೆ ವರ್ಷದಲ್ಲಿ ೧೦ ತಿಂಗಳ ಅವಧಿಗೆ ಅನುದಾನ ನೀಡಲಾಗುತ್ತಿತ್ತು. ಪ್ರಸ್ತುತ ೨೦೧೭-೧೮ನೇ ಸಾಲಿನಿಂದ ಬುದ್ಧಿಮಾಂದ್ಯ ಮಗುವಿಗೆ ಪ್ರತಿ ಮಾಹೆಯಾನ ರೂ.೬೮೦೦/- ಹಾಗೂ ವಸತಿರಹಿತ ಮಗುವಿಗೆ ರೂ.೬೦೦೦/- ಹಾಗೂ ಶ್ರವಣದೋಷವುಳ್ಳ ಮತ್ತು ದೃಷ್ಟಿದೋಷವುಳ್ಳ ಮಕ್ಕಳಿಗೆ ಪ್ರತಿ	• ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೊಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್ ಸೊಸೈಟಿ ಅಥವಾ ಸಮಾಜ ಸೇವೆಯಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಯಾಗಿರಬೇಕು. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲರ ಹಕ್ಕುಗಳ ಕಾಯ್ದೆ-೧೯೯೫ ಸೆಕ್ಷನ್ ೪೯, ೫೦ ರಂತೆ ನೊಂದಣಿ ಮಾಡಿಸಿರಬೇಕು. • ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಅನುಮತಿ ಪಡೆದಂತಹ ಸಂಸ್ಥೆಗಳಿಗೆ ಮಾತ್ರವೇ ಸಹಾಯಧನ	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

		೨೫ ಮಕ್ಕಳಿಗೆ ೧೦ ತಿಂಗಳಿಗೆ ಪಾವತಿಸಲಾಗುತ್ತಿದೆ. ಸದರಿ ಯೋಜನೆಯನ್ನು ಸರ್ಕಾರದ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ತರಲಾಗಿದೆ.		ವಸತಿಯುತ ಮಗುವಿಗೆ ಮಾಹೆಯಾನ ರೂ.೬,೨೦೦/- ಹಾಗೂ ವಸತಿರಹಿತ ಮಗುವಿಗೆ ರೂ.೫,೨೦೦/- ಗಳಿಗೆ ಹೆಚ್ಚಿಸಿ ವರ್ಷದಲ್ಲಿ ೧೦ ತಿಂಗಳ ಅವಧಿಗೆ ಅನುದಾನ ನೀಡಲಾಗುತ್ತಿತ್ತು. ಈ ಅನುದಾನ ಶಿಕ್ಷಕರ ಗೌರವಧನ, ಪಥ್ಯಾಹಾರ ಹಾಗೂ ಶಾಲಾ ನಿರ್ವಹಣಾ ವೆಚ್ಚ ಮುಂತಾದವುಗಳನ್ನು ಒಳಗೊಂಡಿರುತ್ತದೆ. ೩ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರನಾದ ಬುದ್ಧಿಮಾಂದ್ಯರ ಪಾಲನೆಗಾಗಿ ಬೆಂಗಳೂರು ನಗರದಲ್ಲಿ ೦೨ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಿದ್ದು, ಪ್ರತಿ ಮಗುವಿಗೆ ಮಾಸಿಕ ರೂ.೧೦,೦೦೦/-ಗಳಂತೆ ೨೫ ಮಕ್ಕಳಿಗೆ ೧೦ ತಿಂಗಳಿಗೆ ಪಾವತಿಸಲಾಗುತ್ತಿದೆ.	ನೀಡಲಾಗುವುದು. • ಸಂಸ್ಥೆಯು ವ್ಯಾಸಂಗಮಾಡು ತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ ಮುಂತಾದ ವುಗಳನ್ನು ಸ್ವೀಕರಿಸತಕ್ಕದ್ದಲ್ಲ. • ಯಾವುದೇ ಸಂಸ್ಥೆಯು ಇಲಾಖೆಯಿಂದ ಅನುಮತಿ ಪಡೆದು ಶಾಲೆ ಪ್ರಾರಂಭಿಸಿದ ೩ ವರ್ಷದ ಒಳಗೆ ಸಹಾಯಧನಕ್ಕೆ ಅರ್ಹತೆ ಪಡೆಯುವುದಿಲ್ಲ. • ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಎಲ್ಲಾ ಅಂಗವಿಕಲ ಮಕ್ಕಳಿಗೂ ಮುಕ್ತವಾಗಿರಬೇಕು. • ಸಹಾಯಧನ ಪಡೆಯುವ ಸಂಸ್ಥೆಯು ರಾಜ್ಯ ಸರ್ಕಾರದ ಅಧಿಕಾರಿಗಳ ಅಥವಾ ಇಲಾಖೆಯಿಂದ ದೃಢೀಕ ರಿಸಲ್ಪಟ್ಟ ಯಾವುದೇ ವ್ಯಕ್ತಿಗಳ/ ಸಂಸ್ಥೆಗಳ ತಪಾಸಣೆಗೆ ಸಿದ್ಧ ವಾಗಿರಬೇಕು./ಮುಕ್ತವಾ ಗಿರ ಬೇಕು. • ಶಾಲೆಯಲ್ಲಿ ಕನಿಷ್ಠ ೨೫ ವಿದ್ಯಾರ್ಥಿಗಳು ದಾಖಲಾ ಗಿರಬೇಕು. ಶಾಲೆಯಲ್ಲಿ ೨೦ ಕ್ಕಿಂತ ಕಡಿಮೆ ಇದ್ದಲ್ಲಿಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.	

					• ಶಾಲೆಯು ೨೨೦ ದಿನಗಳಿಗೆ ಕಡಿಮೆ ಇರದಂತೆ ಕಾರ್ಯನಿರ್ವಹಿಸಬೇಕು. • ಶಿಕ್ಷಕರ ಶೈಕ್ಷಣಿಕ ಅರ್ಹತೆಯು ಯೋಜನೆಯ ನಿಯಮಾನುಸಾರ ಇರತಕ್ಕದ್ದು.	
೫	ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನ	ಈ ಕಾರ್ಯಕ್ರಮದಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.	• ವಿಕಲಚೇತನ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಶಾಲಾ/ಕಾಲೇಜು ಮುಖ್ಯಸ್ಥರ ದೃಢೀಕರಣದೊಂದಿಗೆ ಅರ್ಜಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುವುದು. • ಉನ್ನತ ಶಿಕ್ಷಣದಲ್ಲಿ ಆಯಾ ವರ್ಷಗಳಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು. • ವಿದ್ಯಾರ್ಥಿಗಳು ಕಡ್ಡಾಯವಾಗಿ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು.	ಮಾಸಿಕ(ರೂ.ಗಳಲ್ಲಿ) • ೧–೫ನೇ ತರಗತಿ– ರೂ. ೧೦೦/- • ೬–೫ನೇ ತರಗತಿ– ರೂ.೨೦೦/- • ಪಿ.ಯು.ಸಿ – ರೂ.೩೦೦/- • ಪದವಿ/ಟಿ.ಸಿಹೆಚ್ ತತ್ಸಮಾನ –ರೂ.೪೦೦/- • ಬಿಇ/ಬಿಟೆಕ್,ಎಂಬಿಬಿಎಸ್, ಎಲ್ಎಲ್ಬಿ/ಡಿಪ್ಲಮೋ ಇನ್ ಪ್ರೊಫೇಷನಲ್ ಅಂಡ್ ಇಂಜಿನಿಯರಿಂಗ್ ಇನ್‌ಪ್ಲಾಂಟ್ ಟ್ರೈನಿಂಗ್– ರೂ. ೫೦೦/- • ಎಂ.ಎ, ಎಂ.ಎಸ್ಸಿ, ಎಂ.ಕಾಂ. ಎಲ್.ಎಲ್.ಎಂ. ಹಾಗೂ ತತ್ಸಮಾನ– ರೂ. ೬೦೦/-	• ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು ಯಾವುದೇ ಆದಾಯಮಿತಿ ಇರುವುದಿಲ್ಲ. • ವಿಕಲಚೇತನ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಶಾಲಾ/ಕಾಲೇಜು ಮುಖ್ಯಸ್ಥರ ದೃಢೀಕರಣದೊಂದಿಗೆ ಅರ್ಜಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುವುದು.	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
೬	ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಬಹುಮಾನ ಯೋಜನ	ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡ ೬೦ ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ವಿಕಲಚೇತನ ವಿದ್ಯಾರ್ಥಿಗಳನ್ನು ಪ್ರತಿಭಾವಂತರನ್ನಾಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು ಯೋಜನೆಯ ಉದ್ದೇಶವಾಗಿರುತ್ತದೆ.	• ವ್ಯಾಸಂಗ ಮಾಡುತ್ತಿರುವ ಹಾಗೂ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಯು ಶೇ.೪೦ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರಬೇಕು ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ	ಮಾಸಿಕ(ರೂ.ಗಳಲ್ಲಿ) • ಎಸ್.ಎಸ್.ಎಲ್.ಸಿ– ರೂ. ೩೦೦೦/- • ಪಿ.ಯು.ಸಿ – ರೂ.೫೦೦೦/-	• ಶೇ.೬೦%ಕ್ಕಿಂತಲೂ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.	ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

			ಪಡೆದ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು. • ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಪ್ರಥಮ ಬಾರಿಗೆ ಉತ್ತೀರ್ಣರಾಗಿರಬೇಕು.	• ಪದವಿ/ಟಿ.ಸಿಹೆಚ್ – ರೂ.೮೦೦೦/- • ಬಿ.ಇಡಿ/ಸ್ನಾತಕೋತರ ಪದವಿ/ ಎಂ.ಎ/ಎಂ.ಕಾಂ/ಎಂ.ಎಸ್ಸಿ ಹಾಗೂ ಪದವಿ ನಂತರ ೨ ವರ್ಷಗಳ ಕೋರ್ಸ್‌ಗೆ – ರೂ. ೧೦,೦೦೦/- • ಕೃಷಿ ಪದವಿ ಇಂಜಿನಿಯರಿಂಗ್/ಪಶು ವೈದ್ಯಕೀಯ/ ಎಂ.ಇಡಿ ವೈದ್ಯಕೀಯ ಪದವಿ- ರೂ.೧೨,೦೦೦/-	• ಅರ್ಜಿಯನ್ನು ವ್ಯಾಸಂಗ ಮಾಡುತ್ತಿರುವ ಶಾಲೆ/ಕಾಲೇಜು ಮುಖ್ಯಸ್ಥರ ಮೂಲಕ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು. •	
೭	ಶುಲ್ಕ ಮರುಪಾವತಿ	ಎಸ್.ಎಸ್.ಎಲ್.ಸಿ. ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿಕಲಚೇತನ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗಧಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರು ಪಾವತಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ.	• ವಿಕಲಚೇತನರು ಭಾರತದ ಪ್ರಜೆಯಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ ೫ ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರತಕ್ಕದ್ದು. • ಸರ್ಕಾರಿ, ಸ್ಥಳೀಯ ಸಂಸ್ಥೆ, ಅನುದಾನಿತ ಸಂಸ್ಥೆ, ಸರ್ಕಾರದ ಮಾನ್ಯತೆ ಪಡೆದ ಅನುದಾನ ಸಹಿತ ಮತ್ತು ಅನುದಾನ ರಹಿತ ಖಾಸಗಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ ನಂತರದ ವಿಕಲಚೇತನ ವಿದ್ಯಾರ್ಥಿಗಳು ಶುಲ್ಕ ಮರು ಪಾವತಿ ಪಡೆಯಲು ಅರ್ಹರಿರುತ್ತಾರೆ. • ಯಾವ ಸಂಸ್ಥೆಗಳು ವಿಕಲಚೇತನ ವಿದ್ಯಾರ್ಥಿಗಳಿಗೆ ಶುಲ್ಕವನ್ನು ವಿಧಿಸುವುದಿಲ್ಲವೋ ಅಂತಹ ಸಂಸ್ಥೆಯ ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ.	-	• ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ. • ವಿದ್ಯಾರ್ಥಿಯು ವ್ಯಾಸಂಗ ಮಾಡುವ ಅವಧಿಯಲ್ಲಿ ೨ನೇ ವರ್ಷದಿಂದ ನೀಡುವಾಗ ಹಿಂದಿನ ವರ್ಷದಲ್ಲಿ ಕನಿಷ್ಠ ಶೇ.೮೦ರಷ್ಟು ಹಾಜರಾತಿ ಹೊಂದಿರಬೇಕು. • ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಸೂಚಿಸಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಯೋಜನೆಗೆ ಅರ್ಹರಿರುತ್ತಾರೆ.	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

			• ವಿಕಲಚೇತನ ವಿದ್ಯಾರ್ಥಿಗಳು ಹಿಂದಿನ ವರ್ಷದ ಪಬ್ಲಿಕ್ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗದಿದ್ದಲ್ಲಿ ಮುಂದಿನ ವರ್ಷದಲ್ಲಿ ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ. ಆದರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹಿಂದಿನ ಬಾಕಿ ವಿಷಯಗಳು ಸೇರಿದಂತೆ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ನಂತರದ ವರ್ಷದಲ್ಲಿ ಶುಲ್ಕ ಮರುಪಾವತಿಗೆ, ಆ ಕೋರ್ಸ್‌ಗಳಲ್ಲಿ ಕ್ಯಾರಿ ಓವರ್ ಪದ್ಧತಿ ಜಾರಿಯಿದ್ದು ಮುಂದಿನತರಗತಿಗೆ/ವರ್ಷಕ್ಕೆ ಪ್ರವೇಶ ಅವಕಾಶವಿದ್ದಲ್ಲಿ ಅಂತಹವರು ಶುಲ್ಕ ಮರುಪಾವತಿಗೆ ಅರ್ಹರಿರುತ್ತಾರೆ. • ಪರೀಕ್ಷಾ ಶುಲ್ಕವನ್ನು ವರ್ಷಕ್ಕೆ ಒಂದು ಸಲ ಮಾತ್ರ ಮರುಪಾವತಿಸಲಾಗುವುದು. ಅನುತ್ತೀರ್ಣರಾದ ಅಭ್ಯರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ. • ಬೇರೆ ಇಲಾಖೆ ಹಾಗೂ ಇತರೆ ಮೂಲಗಳಿಂದ ಶುಲ್ಕವನ್ನು ಪಡೆದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಶುಲ್ಕ ಮರುಪಾವತಿಗೆ			

			ಅವಕಾಶವಿರುವುದಿಲ್ಲ.			
೮	ಸ್ಪರ್ಧಾಚೇತನ	ವಿಶೇಷ ಸಾಮರ್ಥ್ಯ / ಭಿನ್ನ ಸಾಮರ್ಥ್ಯದ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಗೆ ಐ.ಎ.ಎಸ್ / ಕೆ.ಎ.ಎಸ್ / ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಯೋಜನೆ ಇದಾಗಿದ್ದು, ವಿದ್ಯಾವಂತ ನಿರುದ್ಯೋಗಿ ಅಂಗವಿಕಲರಿಗೆ ಗುಣಾತ್ಮಕ ತರಬೇತಿಯನ್ನು ನೀಡಿ ಅವರನ್ನು ಸಾಮಾನ್ಯರಂತೆ ಉನ್ನತ ಹುದ್ದೆಗಳನ್ನು ಪಡೆಯಲು ಅವಕಾಶ ನೀಡಿ, ಸಮಾಜದ ಮುಖ್ಯವಾಹಿನಿಗೆ ಕರೆದೊಯ್ಯುವುದಾಗಿದೆ. • ಕೇಂದ್ರ ಲೋಕಸೇವಾ ಆಯೋಗದಿಂದ (ಯು.ಪಿ.ಎಸ್.ಸಿ) ನಡೆಸುವ ಗ್ರೂಪ್ 'ಎ' ಮತ್ತು 'ಬಿ' ವೃಂದದ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸಹಾಯಧನ ನೀಡುವುದು. • ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ (ಕೆ.ಪಿ.ಎಸ್.ಸಿ) ಗ್ರೂಪ್ 'ಎ' ಮತ್ತು 'ಬಿ' ವೃಂದದ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸಹಾಯಧನ ನೀಡುವುದು. • ಬ್ಯಾಂಕ್ / ಜೀವವಿಮಾ ನಿಗಮ, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಮತ್ತು ಇತರೆ ಸಂಸ್ಥೆಗಳು ನಡೆಸುವ ಅಧಿಕಾರಿ / ಪ್ರಥಮ ದರ್ಜೆ / ದ್ವಿತೀಯ ದರ್ಜೆ ಹುದ್ದೆಗಳಿಗೆ ನಡೆಸುವ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸಹಾಯಧನ ನೀಡುವುದು.	• ನಿರುದ್ಯೋಗಿ ಅಂಗವಿಕಲ ವಿದ್ಯಾರ್ಥಿಯು ಶೇ.೪೦ ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರಬೇಕು. • ನಿರುದ್ಯೋಗಿ ಅಂಗವಿಕಲ ವಿದ್ಯಾರ್ಥಿಯು ಕನಿಷ್ಠ ೧೮ ವರ್ಷದಿಂದ ನೇಮಕಾತಿ ಪ್ರಾಧಿಕಾರಿಗಳು ಹೊರಡಿಸುವ ಅಧಿಸೂಚನೆಯಲ್ಲಿ ನಿಗದಿಗೊಳಿಸಿರುವ ಗರಿಷ್ಠ ವಯೋಮಿತಿಯೊಳಗಿರಬೇಕು • ಕರ್ನಾಟಕದಲ್ಲಿ ಕನಿಷ್ಠ ೧೦ ವರ್ಷಗಳು ವಾಸವಾಗಿರತಕ್ಕದ್ದು. • ಆದಾಯ ಮಿತಿ ಇರುವುದಿಲ್ಲ. • ನಿರುದ್ಯೋಗಿ ಅಂಗವಿಕಲರ ವಿದ್ಯಾರ್ಥಿಯು ಪಿಯುಸಿ ನಂತರ ವ್ಯಾಸಂಗವನ್ನು ಹೊಂದಿರಬೇಕು ಹಾಗೂ ನೇಮಕಾತಿ ಪ್ರಾಧಿಕಾರಿಗಳು ಹುದ್ದೆಗಳಿಗೆ ಹೊರಡಿಸುವ ಅಧಿಸೂಚನೆಯಂತೆ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು.	• ಸದರಿ ಯೋಜನೆಗೆ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ. ತರಬೇತಿಗೆ ನಿಗದಿಗೊಳಿಸುವ ಶುಲ್ಕ ಮತ್ತು ಇತರೆ ಖರ್ಚುಗಳನ್ನು ಒಳಗೊಂಡಂತೆ ಸಹಾಯಧನವನ್ನು ಅಂಗವಿಕಲ ವಿದ್ಯಾರ್ಥಿಯು ತರಬೇತಿ ಪಡೆಯುತ್ತಿರುವ ಕೇಂದ್ರಕ್ಕೆ ನೀಡಲಾಗುವುದು. • ಆಯಾ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಮಾಸಿಕವಾಗಿ ನಿಗದಿಪಡಿಸಿರುವ ಭತ್ಯೆ ರೂ.೮೦೦೦/-, ರೂ.೬೦೦೦/- ರೂ.೪೦೦೦/- ಹಾಗೂ ರೂ.೨೦೦೦/-ಗಳ ಸಹಾಯಧನವನ್ನು ಅಂಗವಿಕಲ ವಿದ್ಯಾರ್ಥಿಯು ತರಬೇತಿ ಪಡೆಯುತ್ತಿರುವ ಕೇಂದ್ರಕ್ಕೆ ನೀಡಲಾಗುವುದು.	• ನಿರುದ್ಯೋಗಿ ಅಂಗವಿಕಲ ವಿದ್ಯಾರ್ಥಿಯು ಶೇ.೪೦ ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರಬೇಕು. • ನಿರುದ್ಯೋಗಿ ಅಂಗವಿಕಲ ವಿದ್ಯಾರ್ಥಿಯು ಕನಿಷ್ಠ ೧೮ ವರ್ಷದಿಂದ ನೇಮಕಾತಿ ಪ್ರಾಧಿಕಾರಿಗಳು ಹೊರಡಿಸುವ ಅಧಿಸೂಚನೆಯಲ್ಲಿ ನಿಗದಿಗೊಳಿಸಿರುವ ಗರಿಷ್ಠ ವಯೋಮಿತಿಯೊಳಗಿರಬೇಕು. • ಕರ್ನಾಟಕದಲ್ಲಿ ಕನಿಷ್ಠ ೧೦ ವರ್ಷಗಳು ವಾಸವಾಗಿರತಕ್ಕದ್ದು. • ಆದಾಯ ಮಿತಿ ಇರುವುದಿಲ್ಲ. • ನಿರುದ್ಯೋಗಿ ಅಂಗವಿಕಲರ ವಿದ್ಯಾರ್ಥಿಯು ಪಿಯುಸಿ ನಂತರ ವ್ಯಾಸಂಗವನ್ನು ಹೊಂದಿರಬೇಕು ಹಾಗೂ ನೇಮಕಾತಿ	• ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು • ರಾಜ್ಯ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು (ಪ್ರಿ ಎಕ್ಸಾ ಮಿನೇಷನ್ ಟ್ರೈನಿಂಗ್ ಸೆಂಟರ್) • ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಗುರುತಿಸಲ್ಪಟ್ಟ ಖಾಸಗಿ / ಅನುದಾನಿತ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ತರಬೇತಿ ಕೇಂದ್ರಗಳು.

					ಪ್ರಾಧಿಕಾರಿಗಳು ಹುದ್ದೆಗಳಿಗೆ ಹೊರಡಿಸುವ ಅಧಿಸೂಚನೆಯಂತೆ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು.	
೯	ಉಪಗ್ರಹ ಆಧಾರಿತ ಶಿಕ್ಷಣ	ರಾಜ್ಯದಲ್ಲಿ ೧,೨ ಮತ್ತು ೩ನೇ ತರಗತಿಗಳಲ್ಲಿ ವಿಶೇಷ ಶಿಕ್ಷಣ ಪಡೆಯುತ್ತಿರುವ ಶ್ರವಣದೋಷವುಳ್ಳ ಮಕ್ಕಳ ಕಲಿಕೆಯ ಉನ್ನತೀಕರಣಕ್ಕಾಗಿ ಉಪಗ್ರಹ ಆಧಾರಿತ ಶಿಕ್ಷಣವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ೪೭ ವಿಶೇಷ ಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಿರುತ್ತದೆ.	ಶ್ರವಣದೋಷವುಳ್ಳ ಮಕ್ಕಳಿಗೆ ಸರ್ಕಾರಿ ವಿಶೇಷ ಶಾಲೆಗಳು, ೧೯೮೨ರಡಿ ಬರುವ ವಿಶೇಷ ಶಾಲೆಗಳು ಹಾಗೂ ಶಿಶುಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ವಿಶೇಷ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಈ ಯೋಜನೆಯ ಸೌಲಭ್ಯವನ್ನು ಕಲ್ಪಿಸಲಾಗುವುದು.	–	ಶ್ರವಣದೋಷವುಳ್ಳ ಮಕ್ಕಳ ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗುವುದು.	ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
೧೦	ಸಮಾಜ ಸೇವಾ ಸಂಕೀರ್ಣ ಮತ್ತು ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳು	ನಿರ್ಗತಿಕ ಪುರುಷ ಬುದ್ಧಿಮಾಂದ್ಯರಿಗೆ ಹಾಗೂ ಮಂದಮತಿ ಮಹಿಳೆಯರಿಗೆ ಊಟ, ವಸತಿ, ವೈದ್ಯಕೀಯ ಸೌಲಭ್ಯ, ರಕ್ಷಣೆ ಒದಗಿಸುವ ಉದ್ದೇಶದಿಂದ ಸಮಾಜ ಸೇವಾ ಸಂಕೀರ್ಣವು ಬೆಂಗಳೂರಿನಲ್ಲಿ ಸ್ಥಾಪಿತ ವಾಗಿದೆ. ಈ ಸಂಕೀರ್ಣದಲ್ಲಿ ಸುಮಾರು ೧೦೦ ಫಲಾನುಭವಿಗಳಿಗೆ ಊಟ, ವಸತಿ, ರಕ್ಷಣೆ, ವೈದ್ಯಕೀಯ ಸೌಲಭ್ಯ ಒದಗಿಸಲಾಗಿದೆ.	• ೧೮ ವರ್ಷಕ್ಕಿಂತ ಮೇಲ್ಪಟ್ಟ ಪೋಷಕರಿಲ್ಲದ ಪುರುಷ ಬುದ್ಧಿಮಾಂದ್ಯ ವ್ಯಕ್ತಿಗಳನ್ನು ದಾಖಲು ಮಾಡಿಕೊಳ್ಳಲಾಗುವುದು. • ಸದರಿ ವ್ಯಕ್ತಿಗಳು ನಿಮ್ಹಾನ್ಸ್ ಅಥವಾ ತತ್ಸಮಾನ ಸಂಸ್ಥೆಗಳಿಂದ ಬುದ್ಧಿಮಾಂದ್ಯತೆ ಬಗ್ಗೆ ದೃಢೀಕರಣಪತ್ರ ಹೊಂದಿರಬೇಕು. • ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಪೋಲೀಸ್ ಠಾಣೆಗಳ ಮೂಲಕ ಬರುವಂತಹ ಬುದ್ಧಿಮಾಂದ್ಯ ವ್ಯಕ್ತಿಗಳನ್ನು ದಾಖಲಿಸಿಕೊಳ್ಳಲಾಗುವುದು. • ಇತರೆ ಸರ್ಕಾರಿ ಸಂಸ್ಥೆಗಳಿಂದ	ಸರ್ಕಾರಿ ಸಂಸ್ಥೆಯಾಗಿದ್ದು, ನಿವಾಸಿಗಳಿಗೆ ಉಚಿತ ಊಟ, ವಸತಿ, ಔಷದೋಪಚಾರ ಕಲ್ಪಿಸಲಾಗುತ್ತಿದೆ.	• ನಿಮ್ಹಾನ್ಸ್‌ನಿಂದ ಶಿಫಾರಸ್ಸು ಮಾಡಲಾದ ನಿರ್ಗತಿಕ ಬುದ್ಧಿಮಾಂದ್ಯರಾಗಿ ರಬೇಕು. • ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಪೋಲೀಸ್ ಠಾಣೆಗಳ ಮೂಲಕ ಬರುವಂತಹ ಬುದ್ಧಿಮಾಂದ್ಯ ವ್ಯಕ್ತಿಗಳನ್ನು/ ಮಹಿಳೆಯರನ್ನು ದಾಖಲಿಸಿಕೊಳ್ಳಲಾಗು ವುದು	ಸಂಸ್ಥೆಯ ಮುಖ್ಯಸ್ಥರು

			ವರ್ಗಾವಣೆ ಆದಂತಹ ವ್ಯಕ್ತಿಗಳನ್ನು ಸಹ ದಾಖಲಿಸಿ ಕೊಳ್ಳಲಾಗುವುದು.			
೧೧	ಮಾನಸಿಕ ಸವಾಲಿಗೊಳಗಾದವರಿಗಾಗಿ ನಿವಾಸಿ ಗೃಹಗಳು	ಮಾನಸಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದ ಮಾನಸಿಕ ಅಸ್ವಸ್ಥರು ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಗೊಳ್ಳುವ ಮುನ್ನ ಅವರಿಗೆ ತರಬೇತಿ ಹಾಗೂ ಆಪ್ತ ಸಮಾಲೋಚನೆ ನೀಡಿ ಪುನರ್ವಸತಿ ಕಲ್ಪಿಸುವ ಉದ್ದೇಶದಿಂದ ಅಲ್ಪಾವಧಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಮಾನಸ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಗೆ ಅವಶ್ಯಕವಾಗಿ ಬೇಕಾಗಿರುವ ಆರೋಗ್ಯ, ಪೋಷಣೆ ಮತ್ತು ಆಶ್ರಯವನ್ನು ಒದಗಿಸುವುದು. ಈ ಮಾನಸ ಕೇಂದ್ರಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು.	• ಮಾನಸಿಕ ಅಸ್ವಸ್ಥರು ಅಂದರೆ ಅಂಗವಿಕಲರ ಅಧಿನಿಯಮ ೨೦೧೬ರಲ್ಲಿ ತಿಳಿಸಿರುವ ವ್ಯಾಖ್ಯಾನಕ್ಕೆ ಒಳಪಟ್ಟವರು. • ಫಲಾನುಭವಿಯು ಮಾನಸಿಕ ಅಸ್ವಸ್ಥರಾಗಿದ್ದು ಅವರ ಅಂಗವಿಕಲತೆಯು ಕನಿಷ್ಠ ಶೇಕಡ ೪೦ ರಷ್ಟು ಇರತಕ್ಕದ್ದು. • ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ನಗರ ಪ್ರದೇಶಗಳಲ್ಲಿ ೨೪,೦೦೦ ಮತ್ತು ಗ್ರಾಮೀಣ ಪ್ರದೇಶದಲ್ಲಿ ೧೧,೫೦೦ ರೂಗಳಗಿಂತ ಕಡಿಮೆ ಇರತಕ್ಕದ್ದು. • ರಸ್ತೆಗಳಲ್ಲಿ ಓಡಾಡುವ (Wandering) ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಿಗೆಸೇರಿಸಿಕೊಳ್ಳ ಲಾಗುವುದು. • ರಾಜ್ಯ ಉಚ್ಛ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳು ಆದೇಶಿಸುವ ವ್ಯಕ್ತಿಗಳನ್ನು ಸಹ ಈ ಕೇಂದ್ರಗಳಿಗೆ ಸೇರಿಸಕೊಳ್ಳಲಾಗುವುದು	–	–	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
೧೨	ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳು	ಗ್ರಾಮೀಣ ವಿಕಲಚೇತನ ಯುವತಿಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು ೨೪ ಜಿಲ್ಲೆಗಳಲ್ಲಿ ೨೬ ಮಹಿಳಾ ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.	ಈ ವಸತಿ ನಿಲಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಅಂಗವಿಕಲ ಉದ್ಯೋಗಸ್ಥ ಮಹಿಳೆಯರು/ ವಿದ್ಯಾರ್ಥಿನಿಯರು/ ವೃತ್ತಿಪರ ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ ಮಾತ್ರ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.	ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಈ ಯೋಜನೆಯನ್ನು ನಡೆಸಲಾಗುತ್ತಿದೆ.	ಈ ವಸತಿ ನಿಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಇತರೆ ಯಾವುದೇ ತರಹದ ಶಿಷ್ಯವೇತನವನ್ನು ಪಡೆಯಲು ಅರ್ಹರಿರುವುದಿಲ್ಲ.	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು.

೧೩.	ಸಾಧನ ಸಲಕರಣೆಗಳು.	ಅಂಗವಿಕಲರ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾಗಿರುವ ತ್ರಿಚಕ್ರವಾಹನಗಳು, ಶ್ರವಣ ಸಾಧನಗಳು, ಕೃತಕ ಅಂಗಾಂಗಗಳು, ಬ್ರೈಲ್ ಗಡಿಯಾರಗಳು, ದೃಷ್ಟಿದೋಷವುಳ್ಳವರು ಉಪಯೋಗಿಸುವ ಬಿಳಿ ಕೋಲುಗಳನ್ನು ಉಚಿತವಾಗಿ ವಿತರಿಸುವುದು.	• ಅಂಗವಿಕಲ ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿ ೧೦ ವರ್ಷಗಳಿಂದ ವಾಸ ಮಾಡುತ್ತಿರಬೇಕು. • ಅಂಗವಿಕಲ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ನಗರ ವಾಸಿಯಾಗಿದ್ದಲ್ಲಿ ರೂ.೨೪,೦೦೦ ಮತ್ತು ಗ್ರಾಮೀಣ ವಾಸಿಯಾಗಿದ್ದಲ್ಲಿ ರೂ.೧೧,೫೦೦ ಮೀರಿರಬಾರದು. • ಈ ಹಿಂದೆ ಸರ್ಕಾರದ ವತಿಯಿಂದಾಗಲಿ ಅಥವಾ ಸಂಘ ಸಂಸ್ಥೆಗಳಿಂದಾಗಲೀ ಸಹಾಯಧನ/ಸಾಧನಸಲಕರಣೆ ಪಡೆದಿರಬಾರದು.	ಗರಿಷ್ಠ ರೂ. ೧೫,೦೦೦/- ಗಳವರೆಗೆ ಉಚಿತವಾಗಿ ಸಾಧನ ಸಲಕರಣೆಗಳನ್ನು ಮಂಜೂರು ಮಾಡಲಾಗುವುದು.	• ಅಂಗವಿಕಲತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ವೈದ್ಯಕೀಯ ಮಂಡಳಿಯಿಂದ ಪಡೆದ ದೃಡೀಕರಣ ಒದಗಿಸಬೇಕು.	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

೪	ಟಾಕಿಂಗ್ ಲ್ಯಾಪ್‌ಟಾಪ್	ಅಂಧ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಹೊಂದಲು ಅನುಕೂಲವಾಗುವಂತೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆಯನ್ನು ಜಾರಿಗೆ ತರಲಾಗಿದೆ.	• ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗುವ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು. • ಯೋಜನೆಯ ಸೌಲಭ್ಯ ಪಡೆಯಲು ಯಾವುದೇ ಆದಾಯಮಿತಿ ಇರುವುದಿಲ್ಲ.	ಅಂಧ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಹೊಂದಲು ಅನುಕೂಲವಾಗುವಂತೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದೆ	• ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗುವ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು. • ವ್ಯಾಸಂಗ ಮಾಡುತ್ತಿರುವ ಬಗ್ಗೆ ಸಂಬಂಧಿತ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪತ್ರ ಒದಗಿಸಬೇಕು. • ಸರ್ಕಾರ ನೀಡುವ ಲ್ಯಾಪ್‌ಟಾಪ್‌ನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದು. • ಜೀವಿತ ಕಾಲದಲ್ಲಿ ಒಂದು ಬಾರಿ ಈ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. • ಬೇರೆ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಲ್ಯಾಪ್‌ಟಾಪ್ ಪಡೆದಿದ್ದಲ್ಲಿ ಅರ್ಹರಿರುವುದಿಲ್ಲ. ಈ ಬಗ್ಗೆ ದೃಢೀಕರಣವನ್ನು ನೀಡಬೇಕು.	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
೧೫	ಯಂತ್ರಚಾಲಿತ ದ್ವಿಚಕ್ರವಾಹನಗಳು	ರಾಜ್ಯದ ೨೦೧೧ರ ಜನಗಣತಿಯ ಪ್ರಕಾರ ೨೦ ರಿಂದ ೬೦ರ ವಯೋಮಾನದ ೧೬.೬೭.೭೨೬ ದೈಹಿಕ ವಿಕಲಚೇತನರಲ್ಲಿ ಶೇ.೩೦ ರಷ್ಟು ವಿಕಲಚೇತನರು ತೀವ್ರತರನಾದ ವಿಕಲಚೇತನರಾಗಿರುತ್ತಾರೆ. ಅವರುಗಳು ಉದ್ಯೋಗ ನಿರ್ವಹಿಸುವ / ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಿಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಬರಲು ಚಲನವಲನಕ್ಕೆ ಅಡೆತಡೆಗಳಿರುತ್ತವೆ. ಆದ್ದರಿಂದ ಅವರ ಚಲನವಲನಕ್ಕೆ	ದೈಹಿಕ ವಿಕಲಚೇತನರು ಶೇ. ೭೫% ಕ್ಕಿಂತ ಹೆಚ್ಚಿನ ದೈಹಿಕ ವಿಕಲಚೇತನರಾಗಿರಬೇಕು ಹಾಗೂ ಸೊಂಟದ ಕೆಳಗೆ ಅಂದರೆ ಎರಡು ಕಾಲುಗಳಲ್ಲಿ ಸ್ವಾಧೀನ ಕಳೆದುಕೊಂಡಿರುವ ಎರಡು ಕೈಗಳು ಸ್ವಾಧೀನದಲ್ಲಿರುವ ಹಾಗೂ ಇತರೆ ಎಲ್ಲಾ ರೀತಿಯಲ್ಲಿ ಸದೃಢವಾಗಿರುವ ವಿಕಲಚೇತನರಾಗಿರಬೇಕು.		• ಈ ಯೋಜನೆಯ ಸೌಲಭ್ಯ ಪಡೆಯಲು ಕುಟುಂಬದ ವಾರ್ಷಿಕ ಆದಾಯ ರೂ.೨ ಲಕ್ಷಗಳಿಗಿಂತ ಕಡಿಮೆಯಿರಬೇಕು. • ಅಂಗವಿಕಲರ ಅಧಿನಿಯಮದಲ್ಲಿ	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

		ಅನುಕೂಲವಾಗುವಂತೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವ ಯೋಜನೆಯನ್ನು ೨೦೧೪-೧೫ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.	ಎಂಬುದರ ಬದಲಾಗಿ "ಅಪಘಾತ ಅಥವಾ ಅನಾರೋಗ್ಯ ಅಥವಾ ಹುಟ್ಟಿನಿಂದ ಒಂದು ಅಥವಾ ಎರಡು ಕಾಲುಗಳನ್ನು ಕಳೆದುಕೊಂಡ ಅಥವಾ ಸ್ವಾದೀನ ಇಲ್ಲದಿರುವ ಹಾಗೂ ಅಂಗವೈಕಲ್ಯತೆಯ ಪ್ರಮಾಣ ಶೇ. ೭೫ಕ್ಕಿಂತ ಹೆಚ್ಚು ಇದ್ದು, ಎರಡು ಕೈಗಳು ಸ್ವಾಧೀನವಾಗಿರುವ ಮತ್ತು ಇತರೆ ಎಲ್ಲಾ ರೀತಿಯಲ್ಲಿ ದೈಹಿಕವಾಗಿ ಸದೃಢವಾಗಿರುವ ವಿಶೇಷಚೇತನರಿಗೆ ಪ್ರಥಮ ಆದ್ಯತೆ" ಎಂದು ಸೇರಿಸಿ ಓದಿಕೊಳ್ಳತಕ್ಕದ್ದು ಎಂದು ಸೇರ್ಪಡೆ ಆದೇಶವನ್ನು ಹೊರಡಿಸಲಾಗಿದೆ.		ಸೂಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ಇತರ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಯಂತ್ರಚಾಲಿತ ದ್ವಿಚಕ್ರವಾಹನ ಪಡೆದಿದ್ದಲ್ಲಿ ಅಂತಹವರು ಅರ್ಹರಾಗಿರುವುದಿಲ್ಲ.	
೧೬	ಸಾಧನೆ	ಅಂಗವಿಕಲರು ಇತರೆ ಸಾಮಾನ್ಯ ಜನರಂತೆ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಮಾಜದ ಮುಖ್ಯವಾಹಿನಿಯಲ್ಲಿ ಸೇರುವಂತೆ ಅವಕಾಶ ಕಲ್ಪಸಲು ಈ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿದ ಕ್ರೀಡಾ ಪಟುಗಳಿಗೆ ಗರಿಷ್ಟ ರೂ.೩೦,೦೦೦/- ಗಳವರೆಗೆ ಧನ ಸಹಾಯ ನೀಡಲಾಗುವುದು.	ಕ್ರೀಡೆಯಲ್ಲಿ ಭಾಗವಹಿಸಿದ ನಂತರ, ಭಾಗವಹಿಸಲು ಆಹ್ವಾನಿಸಿರುವವರ ಮಾಹಿತಿ ಹಾಗೂ ಪ್ರಯಾಣದ ವೆಚ್ಚದ ಹಾಗೂ ಇತರೆ ವೆಚ್ಚದ ಮೂಲ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. • ಪ್ರಸ್ತಾವನೆ ಪರಿಶೀಲಿಸಿದ ನಂತರ ಸಹಾಯಧನವನ್ನು ಮಂಜೂರು ಮಾಡಲಾಗುವುದು.	ರೂ. ೫೦,೦೦೦/-	• ಕ್ರೀಡೆಯಲ್ಲಿ ಭಾಗವಹಿಸಿದ ನಂತರ, ಭಾಗವಹಿಸಲು ಆಹ್ವಾನಿಸಿರುವವರ ಮಾಹಿತಿ ಹಾಗೂ ಪ್ರಯಾಣದ ವೆಚ್ಚದ ಹಾಗೂ ಇತರೆ ವೆಚ್ಚದ ಮೂಲ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ೫೫ ದಿನಗಳ ಮುಂಚೆ ಜಿಲ್ಲಾ ಕಛೇರಿಗೆ ಸಲ್ಲಿಸತಕ್ಕದ್ದು. • ಪ್ರಸ್ತಾವನೆ ಪರಿಶೀಲಿಸಿದ ನಂತರ ಸಹಾಯಧನವನ್ನು ಮಂಜೂರು ಮಾಡಲಾಗುವುದು.	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
೧೭	ಪ್ರತಿಭೆ	ಅಂಗವಿಕಲರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು, ನೋಂದಾಯಿತ ಸಾಂಸ್ಕೃತಿಕ ಸ್ವಯಂ ಸೇವಾ ಸಂಸ್ಥೆಗಳು ಅಂಗವಿಕಲ ಕಲಾವಿದರನ್ನು ಒಳಗೊಂಡು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 'ಪ್ರತಿಭೆ' ಯೋಜನೆಯಡಿ ದಿ:೧೮/೦೯/೧೯೯೩ರ ಆದೇಶದನ್ವಯ ಗರಿಷ್ಠ ಮೊತ್ತ ರೂ.೧೦,೦೦೦/-	• ಜಿಲ್ಲೆಯ ಕಲಾವಿದರನ್ನು ಆಯಾ ಜಿಲ್ಲೆಯಲ್ಲಿ ಸ್ಥಳೀಯ ಕಲಾವಿದರೆಂದು ಪರಿಗಣಿಸಲಾಗುವುದು. • ಪ್ರಾಯೋಜಿತ ಕಾರ್ಯಕ್ರಮ ನೀಡುವ ಕಲಾವಿದರು ಅಲ್ಲದೇ	ಸಂಸ್ಥೆಗಳ ಮೂಲಕ ನಡೆಸುವ ಸಾಂಸ್ಕೃತಿ ಕಾರ್ಯಕ್ರಮಕ್ಕೆ ಗರಿಷ್ಠ ಮೊತ್ತ ರೂ.೧೦,೦೦೦/- ಸಹಾಯಧನವನ್ನು ನೀಡಲಾಗುತ್ತಿದೆ. ವೈಯಕ್ತಿಕವಾಗಿ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ	ಕಾರ್ಯಕ್ರಮ ನಡೆದಿರುವ ಬಗ್ಗೆ ಸೂಕ್ತ ವಿವರಗಳನ್ನು ಹಾಗೂ ಅಗತ್ಯವಿರುವ ದಾಖಲೆಗಳನ್ನು ಪಡೆದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಾಯೋಜಿತ ಕಾರ್ಯಕ್ರಮ ಗಳಿಗೆ ಸಹಾಯಧನವನ್ನು	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

		ಸಹಾಯಧನವನ್ನು ನೀಡಲಾಗುತ್ತಿದ್ದು, ದಿನಾಂಕ:೭/೬/೨೦೧೪ರ ಆದೇಶದಲ್ಲಿ ವಿಕಲಚೇತನರು ವೈಯಕ್ತಿಕವಾಗಿ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಲಾ ರೂ.೨೦೦೦/- ಸಹಾಯಧನ ನೀಡಲು ಸರ್ಕಾರವು ಮಂಜೂರಾತಿ ನೀಡಿದೆ.	ಪ್ರಾಯೋಜಿತ ಕಾರ್ಯಕ್ರಮಗಳನ್ನು ಪಡೆಯಲು ಉದ್ದೇಶಿಸಿರುವ ನೊಂದಾಯಿತ ಸಂಸ್ಥೆಯ ಕಲಾವಿದರು ಹಾಗೂ ಕಾರ್ಯಕ್ರಮದ ಕುರಿತು ಎಲ್ಲಾ ವಿವರಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಕನಿಷ್ಠ ೧ ತಿಂಗಳ ಮೊದಲು ಅರ್ಜಿಯನ್ನು ಸಲ್ಲಿಸತಕ್ಕದ್ದು.	ತಲಾ ರೂ.೨೦೦೦/- ಸಹಾಯಧನ ನೀಡಲಾಗುತ್ತಿದೆ.	ಮಂಜೂರು ಮಾಡುವರು.	
೧೮	ಅರಿವಿನ ಸಿಂಚನ	ವಿಕಲಚೇತನರ ಪೋಷಕರಿಗೆ / ಸಮುದಾಯಕ್ಕೆ ಅರಿವು, ಸ್ಫೂರ್ತಿ ಮೂಡಿಸುವ ಕಾರ್ಯಕ್ರಮವೆಂಬ ಯೋಜನೆಯಾಗಿದ್ದು, ವಿಕಲಚೇತನರಿಗೆ ಸೂಕ್ತ ಸಾಧನ-ಸಲಕರಣೆ, ಅಡೆ-ತಡೆ ರಹಿತ ವಾತಾವರಣ, ವಿಶೇಷ ಶಿಕ್ಷಣ, ಅವಶ್ಯಕ ಥೆರಪಿ ಚಿಕಿತ್ಸೆ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ದೊರೆತಲ್ಲಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ಕರೆದೊಯ್ಯಬಹುದಾಗಿದೆ. ಈ ನಿಟ್ಟಿನಲ್ಲಿ ಇವರಿಗೆ ಪೋಷಕರ / ಶಿಕ್ಷಕರ/ ಸಮಾಜದ ಅಗತ್ಯತೆ ಇದ್ದು, ಎಲ್ಲಾ ವಿಧದ ವಿಕಲಚೇತನರ ತಂದೆ-ತಾಯಿ/ ಪೋಷಕರಿಗೆ ಅವರ ಕರ್ತವ್ಯ / ಜವಾಬ್ದಾರಿಗಳ ಅರಿವು ಮೂಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಕಾರ್ಯಕ್ರಮದಿಂದ ಪೋಷಕರಿಗೆ, ಸಮುದಾಯಕ್ಕೆ ವಿಕಲಚೇತನರ ಬಗ್ಗೆ ಗೌರವ, ಆತ್ಮವಿಶ್ವಾಸ ಹೆಚ್ಚಿಸಲು ಅವಕಾಶ ಮಾಡಿಕೊಡುವುದು. ಪ್ರತಿಭೆ / ಸಾಹಸ / ಸಾಧನೆಗಳನ್ನು ಮಾಡಿದ ವಿಕಲಚೇತನರ ಬಗ್ಗೆ ಪ್ರಚಾರ ಮಾಡಿ, ವಿಕಲಚೇತನರಲ್ಲಿ ಸ್ಫೂರ್ತಿ ಮೂಡಿಸುವುದು. ವಿಕಲಚೇತನರನ್ನು ಕುಟುಂಬದಲ್ಲಿ ಗೌರವಾನ್ವಿತ ಸದಸ್ಯರನ್ನಾಗಿ ರೂಪಿಸುವುದು.	-	-	• ಜಿಲ್ಲಾ / ತಾಲ್ಲೂಕು ಮಟ್ಟದಲ್ಲಿ ಮತ್ತು ಸಾಮಾನ್ಯ ಶಾಲೆಗಳಲ್ಲಿ ಮಕ್ಕಳಿಗೆ ಹಾಗೂ ಪೋಷಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. • ಆಲ್ ಇಂಡಿಯಾ ರೇಡಿಯೋ / ದೂರದರ್ಶನದಲ್ಲಿ ಪ್ರತಿ ತಿಂಗಳು ಕನಿಷ್ಠ ಒಂದು ಗಂಟೆಯ ಕಾಲವಿಕಲಚೇತನರ ಪ್ರತಿಭೆ / ಸಾಹಸ / ಸಾಧನೆಗಳನ್ನು ಮಾಡಿರುವ ವ್ಯಕ್ತಿಗಳಂದ ಸಂದರ್ಶನ ಪಡೆದು ಪ್ರಸಾರಗೊಳಿಸುವುದು. • ಎಲ್ಲಾ ಗ್ರಾಮ ಮಟ್ಟಗಳಲ್ಲಿ ಅರಿವಿನ ಸಭೆ ನಡೆಸಿ ಸಮುದಾಯದಲ್ಲಿ ಅರಿವು ಮೂಡಿಸುವುದು. • ಎಲ್ಲಾ ಗ್ರಾಮ ಮಟ್ಟದಲ್ಲಿ ವ	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

					ಮನೆಗೂ ಇಲಾಖೆಯ ಯೋ ವಿವರಗಳನ್ನು ಹೊಂದಿರುವ ಪತ್ರಗಳನ್ನು ಹಂಚುವುದು. • ಗ್ರಾಮ ಪಂಚಾಯತ್, ತಾಲ್ಲೂಕು ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿ ಇಲಾಖಾ ಯೋಜನೆಗಳ ಬಗ್ಗೆ ಹೋರ್ಡಿಂಗ್ಸ್ /ಬೋರ್ಡ್‌ಗಳನ್ನು ಅಳವಡಿಸುವುದು. • ತಾಲ್ಲೂಕು ಮಟ್ಟದಲ್ಲಿ ವಿಕಲಚೇತನರ ದಿನಾಚರಣೆಯನ್ನು ಆಚರಿಸುವುದು ಶಾಲೆಗಳಲ್ಲಿ ವಿಕಲಚೇತನರ ಸಾಧನೆ / ಇತರೆ ವಿಷಯಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳನ್ನು ನಡೆಸುವುದು.	
೧೯	ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆ	ರಾಜ್ಯದಲ್ಲಿರುವ ಎಲ್ಲಾ ಅಂಗವಿಕಲರಿಗೆ ಅವರ ವಾಸಸ್ಥಳದಲ್ಲಿಯೇ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪುನರ್ವಸತಿ ಸೇವೆಯನ್ನು ಒದಗಿಸಲು ಅವಕಾಶ ಕಲ್ಪಿಸಲು. ಅಂಗವಿಕಲ ವ್ಯಕ್ತಿಯು ತಾನು ವಾಸಿಸುವ ಸ್ಥಳದಲ್ಲಿಯೇ ಎಲ್ಲರಂತೆ ಸಮನ್ಯ ಜೀವನ ನಿರ್ವಹಿಸುವಂತಾಗಲು ಅಗತ್ಯವಿರುವ ಸೇವೆಗಳನ್ನು ಅವರಿರುವಲ್ಲಿಯೇ ಪೂರೈಸುವುದು. ಅಂಗವಿಕಲರಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿ, ಅವರ ಜೀವನ ಮಾರ್ಗೋಪಾಯಗಳನ್ನು ಕಂಡು ಹಿಡಿಯುವುದು ಹಾಗೂ ಅವರು ಸಮಾಜದಲ್ಲಿ ಬದುಕಲು ಸಮಾನ ಅವಕಾಶ ಒದಗಿಸುವುದು.	• ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಸ್ಥಳೀಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು (ಸ್ಥಳೀಯರಾಗಿರಬೇಕು) • ವಯೋಮಿತಿ ೧೮-೪೫ ವರ್ಷದ ಆರೋಗ್ಯವಂತರು • ವಿದ್ಯಾರ್ಹತೆ- ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು • ಗೌರವಧನದ ನೇಮಕತಿಯು ಒಂದು ವರ್ಷದ ನಂತರ	೬೦೨೨ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ. ೨,೦೦೦/- ರೂ.ಗಳಿಂದ ರೂ. ೩,೦೦೦/- ರೂ.ಗಳಿಗೆ ಹಾಗೂ ೧೭೩ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ. ೫,೦೦೦/-ಗಳಿಂದ ರೂ. ೬,೦೦೦/-ಗಳಿಗೆ ಹೆಚ್ಚಿಸಿ, ೬೧೩ ನಗರ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ ರೂ. ೩,೦೦೦/-ಗಳ ಗೌರವಧನದೊಂದಿಗೆ	• ಅಂಗವಿಕಲರಾಗಿರಬೇಕು- ಭಾಗಶಃ ಅಂಧರಿಗೆ, ಭಗಶಃ ಶ್ರವಣದೋಷವುಳ್ಳವರಿಗೆ (ಮೈಲ್ಡ್ ಮತ್ತು ಮಾಡರೇಟ್) ಮತ್ತು ದೈಹಿಕ ಅಂಗವಿಕಲರಿಗೆ ಅವಕಾಶ ಕಲ್ಪಿಸುವುದು. • ಮೂರು ರೀತಿಯ ಅಂಗವಿಕಲರಿಗೆ ಸಮನಾಗಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಆಯ್ಕೆ ಮಾಡಬೇಕು. ಒಂದು ವರ್ಗದ ಅಂಗವಿಕಲರು	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

			ಪುನರ್ ಪರಿಶೀಲನೆಗೆ ಒಳಪಟ್ಟಿರುತ್ತದೆ. ಪುನರ್ ಪರಿಶೀಲನೆಯಲ್ಲಿ ಕೆಲಸ ಕಾರ್ಯಗಳ ನಿರ್ವಹಣೆ, ಅಂಗವಿಕಲರೊಂದಿಗೆ ಸಂಬಂಧ, ವಿವಿಧ ಇಲಾಖೆಗಳೊಂದಿಗೆ/ಸ್ವಯಂ ಸೇವಾ ಸಂಸ್ಥೆ/ಸಮುದಾಯದೊಂದಿಗೆ ಇಟ್ಟುಕೊಂಡಿರುವ ಸಂಬಂಧಗಳನ್ನು ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು. • ಆಯ್ಕೆ ಮಾಡುವಾಗ ಸರ್ಕಾರ ನಿಗದಿಪಡಿಸಿರುವ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥಕ ಎಂಬ ಬಗ್ಗೆಪರಿಶೀಲಿಸಿಶ ಆಯ್ಕೆ ಮಾಡುವುದು ಹುದ್ದೆಯು ಗೌರವಧನದ ಆಧಾರದ ಮೇಲೆ ಇರುವುದರಿಂದ ಇವರನ್ನು ಯಾವಾಗ ಬೇಕಾದರೂ ಕೆಲಸದಿಂದ ತೆಗೆದುಹಾಕಬಹುದಾಗಿದೆ/ ಬಿಡುಗಡೆ ಮಾಡಬಹುದಾಗಿದೆ.	ನೇಮಕ ಮಾಡಲಾಗಿದೆ.	ಆಯ್ಕೆಗೆ ಲಭ್ಯವಿಲ್ಲದಿದ್ದಲ್ಲಿ ಇನ್ನೊಂದು ವರ್ಗದವರಲ್ಲಿರುವ ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳುವುದು • ಮಹಿಳೆಯರಿಗೆ ಆದ್ಯತೆ ನೀಡಬೇಕು • ಅಂಗವಿಕಲತೆಯು ಶೇ.೪೦ ರಷ್ಟಿರಬೇಕು • ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಮಂಡಲಿಯ ಪ್ರಮಾಣ ಪತ್ರ/ಗುರುತಿನ ಚೀಟಿಯ ದಾಖಲೆ ಪಡೆಯಬೇಕು. • ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಚರಿಸಿ ಮಾಹಿತಿ/ಸೌಲಭ್ಯ ಕಲ್ಪಿಸಲು ಸಮರ್ಥರಾಗಿರಬೇಕು.	
೨೦	ಉದ್ಯೋಗ ಕೋಶ	ವಿವಿಧ ಬಗೆಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಸೂಕ್ತ ತರಬೇತಿ ಯನ್ನು ನೀಡಿ ಉದ್ಯೋಗವನ್ನು ಒದಗಿಸುವ ಸಲುವಾಗಿ ಹಾಗೂ ಸಾರ್ವಜನಿಕ ವಲಯಗಳಲ್ಲಿ ವಿಕಲಚೇತನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವ ಉದ್ದೇಶ ದಿಂದ ಉದ್ಯೋಗ ಕೋಶವನ್ನು ಸರ್ಕಾರದ ಆದೇಶದಂತೆ ಮೆ॥ ಎನೇಬಲ್ ಇಂಡಿಯಾ, ಕೋರಮಂಗಲ, ಬೆಂಗಳೂರು ಸಂಸ್ಥೆಯ ಮುಖಾಂತರ ಬೆಂಗಳೂರಿನಲ್ಲಿ ೨೦೧೩-೧೪ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.	• ವಿಕಲಚೇತನರು ೧೮-೪೫ ವಯೋಮಾನದವರಾಗಿ ರಬೇಕು • ಅಭ್ಯರ್ಥಿಯು ಕರ್ನಾಟಕ ರಾಜ್ಯದವರಾಗಿರಬೇಕು, • ಅಂಗವಿಕಲತೆಯ ಕುರಿತಂತೆ ವೈದ್ಯಕೀಯ ಮತ್ತು ವಿದ್ಯಾರ್ಹತೆ ಪ್ರಮಾಣ ಪತ್ರ ಸಲ್ಲಿಸಬೇಕು.	• ಆಸಕ್ತ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಶಿಬಿರಗಳಲ್ಲಿ ಸಂದರ್ಶನದ ಮೂಲಕ ಆಯ್ಕೆ ಮಾಡಿ. • ಅವಶ್ಯಕತೆಗನುಗುಣ ವಾಗಿ ತರಬೇತಿಯನ್ನು ನೀಡಲಾಗುವುದು. • ವಿಭಾಗ ಮಟ್ಟದಲ್ಲಿ ಪ್ರತಿ ತ್ರೈಮಾಸಿಕಕ್ಕೊಮ್ಮೆ ಉದ್ಯೋಗ ಮೇಳ	• ವಿಕಲಚೇತನರು ೧೮-೪೫ ವಯೋಮಾನದವರಾಗಿ ರಬೇಕು. • ಅಭ್ಯರ್ಥಿಯು ಕರ್ನಾಟಕ ರಾಜ್ಯದವರಾಗಿರಬೇಕು. • ಅಂಗವಿಕಲತೆಯ ಕುರಿತಂತೆ ವೈದ್ಯಕೀಯ ಮತ್ತು ವಿದ್ಯಾರ್ಹತೆ ಪ್ರಮಾಣ ಪತ್ರ	ಮೆ॥ ಎನೇಬಲ್ ಇಂಡಿಯಾ, ಕೋರಮಂಗಲ, ಬೆಂಗಳೂರು ಸಂಸ್ಥೆಯ ಮುಖಾಂತರ

				ಆಯೋಜಿಸಲಾಗುವುದು. ಈ ಮೇಳದಲ್ಲಿ ಅರೆಸರ್ಕಾರಿ/ ಖಾಸಗಿ /ಬಹುರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸಿ ಸದರಿ ಕಂಪನಿಗಳ ಮೂಲಕ ಉದ್ಯೋಗದಾತರಿಗೆ ಉದ್ಯೋಗ ಒದಗಿಸಲು ಅವಕಾಶ ಒದಗಿಸಲಾಗುವುದು. • ಸ್ವಯಂ ಉದ್ಯೋಗ ಮಾಡಬಯಸುವ ವಿಕಲಚೇತನರಿಗೆ ಉಚಿತವಾಗಿ ಅಗತ್ಯ ವೃತ್ತಿ ತರಬೇತಿ ಮತ್ತು • ದೈನಂದಿನ ಕೌಶಲ್ಯಗಳನ್ನು ಕಲ್ಪಿಸುವುದು (Vacational Trining and Soft Skills). • ೨೦೧೩-೧೪ನೇ ಸಾಲಿನಲ್ಲಿ ೬೯೪ ವಿಕಲಚೇತನರಿಗೆ ತರಬೇತಿ ನೀಡಿದ್ದು, ತರಬೇತಿ ಹೊಂದಿದವರಲ್ಲಿ ೩೪೮ ಜನರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗಿದೆ. • ೨೦೧೪-೧೫ನೇ ಸಾಲಿನಲ್ಲಿ ೭೬೬ ವಿಕಲಚೇತನರಿಗೆ	ಸಲ್ಲಿಸಬೇಕು.	

				ತರಬೇತಿ ನೀಡಿದ್ದು, ತರಬೇತಿ ಹೊಂದಿದವರಲ್ಲಿ ೬೪೮ ಜನರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗಿದೆ. • ೨೦೧೫-೧೬ನೇ ಸಾಲಿನಲ್ಲಿ ೮೧೯ ವಿಕಲಚೇತನರಿಗೆ ತರಬೇತಿ ನೀಡಿದ್ದು, ತರಬೇತಿ ಹೊಂದಿದವರಲ್ಲಿ ೫೦೧ ಜನರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗಿದೆ • ೨೦೧೬-೧೭ನೇ ಸಾಲಿನಲ್ಲಿ ೬೪೪ ವಿಕಲಚೇತನರಿಗೆ ತರಬೇತಿ ನೀಡಿದ್ದು, ತರಬೇತಿ ಹೊಂದಿದವರಲ್ಲಿ ೧೦೪ ವಿಕಲಚೇತನರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗಿದೆ		
೨೧	ನಿರುದ್ಯೋಗ ಭತ್ಯೆ		• ಶೇ.೪೦ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿರಬೇಕು ಹಾಗೂ ಎಸ್.ಎಸ್.ಎಲ್.ಸಿ. ಮತ್ತು ನಂತರದ ವಿದ್ಯಾರ್ಹತೆ ಹೊಂದಿರಬೇಕು. • ೨೫ ರಿಂದ ೪೫ ವರ್ಷ ವಯೋಮಿತಿಯೊಳಗಿರಬೇಕು. • ಭಾರತದ ಪ್ರಜೆಯಾಗಿದ್ದು,		• ಅರ್ಜಿ ಸಲ್ಲಿಸುವ ದಿನಾಂಕದಂದು ಇರುವಂತೆ ವಯಸ್ಸಿನ ಬಗ್ಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯೊಂದಿಗೆ ದೃಢೀಕರಣ ಪತ್ರ ಸಲ್ಲಿಸುವುದು. • ಅಂಗವಿಕಲತೆ ಗುರುತಿನ ಚೀಟಿ.	ಅರ್ಜಿಗಳನ್ನು ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಮಂಜೂರಾತಿ ಗಾಗಿ

			ಕರ್ನಾಟಕದಲ್ಲಿ ಕನಿಷ್ಠ ೧೦ ವರ್ಷಗಳು ವಾಸವಾಗಿರಬೇಕು. • ಈ ಸೌಲಭ್ಯ ಪಡೆಯಲು ಯಾವುದೇ ಆದಾಯ ಮಿತಿ ಇರುವುದಿಲ್ಲ • ಬೇರೆ ಯಾವುದೇ ಯೋಜನೆಯಡಿ ಅಂದರೆ, ಮಾಸಿಕ ಪೋಷಣಾ ಭತ್ಯೆ/ಶುಲ್ಕ ಮರುಪಾವತಿ/ವಿದ್ಯಾರ್ಥಿ ವೇತನ ಯೋಜನೆಗಳಡಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳು ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಿರುವುದಿಲ್ಲ. • ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿತವಾಗಿ ೨ ವರ್ಷಗಳು ಕಳೆದಿರಬೇಕು.		• ನಿರುದ್ಯೋಗಿ ಅಂಗವಿಕಲರೆಂಬ ಬಗ್ಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣ ಪತ್ರ. • ಅರ್ಜಿದಾರರು ಎಷ್ಟು ವರ್ಷಗಳಿಂದ ನಮೂದಿಸಿರುವ ವಿಳಾಸದಲ್ಲಿ ವಾಸವಾಗಿರುತ್ತಾರೆ ಎಂಬ ದೃಢೀಕರಣ ಪತ್ರ. • ಅರ್ಜಿದಾರರ ಬ್ಯಾಂಕ್ ಖಾತೆ ವಿವರ (ಐ.ಎಫ್.ಎಸ್.ಸಿ ಕೋಡ್, ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್‌ನ ಹೆಸರು ಮತ್ತು ವಿಳಾಸ).	ಆಯಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರಿಗೆ ಸಲ್ಲಿಸುವುದು
೨೨	ಆಧಾರ ಯೋಜನೆ	• ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಯ ಅಡಿಯಲ್ಲಿ ರೂ.೧೫೦೦೦ ಮೌಲ್ಯದ ಪೆಟ್ಟಿಗೆ ಅಂಗಡಿಯನ್ನು ಮತ್ತು ನಿರ್ವಹಣಾ ಬಂಡವಾಳ ರೂ.೨೦೦೦೦/-ಗಳನ್ನು ಬಡ್ಡಿರಹಿತ ಸಾಲವನ್ನಾಗಿ ಮಂಜೂರು ಮಾಡಲಾಗುತ್ತದೆ. ಸಾಲವನ್ನು ೪೦ ಕಂತಿನಲ್ಲಿ ಮರುಪಾವತಿ ಮಾಡಲು ಕಾಲಾವಕಾಶ ವಿರುತ್ತದೆ. • ದೃಷ್ಟಿದೋಷವುಳ್ಳ, ಶ್ರವಣದೋಷವುಳ್ಳ, ಚಲನವಲನ ತೊಂದರೆ ಮತ್ತು ಮನೋವಿಕಲತೆಯುಳ್ಳ ಅಂಗವಿಕಲರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸಿಕೊಡುವುದು.	ಫಲಾನುಭವಿಗಳಿಗೆ ಶೇ. ೪೦ ಹಾಗೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು, ಗ್ರಾಮೀಣ ಅಭ್ಯರ್ಥಿಗಳಿಗೆ ರೂ.೧೧,೫೦೦ಗಳು ಮತ್ತು ನಗರದ ಅಭ್ಯರ್ಥಿಗಳಿಗೆ ರೂ.೨೪,೦೦೦ಗಳ ಗಿಂತ ಕಡಿಮೆ ವಾರ್ಷಿಕ ಆದಾಯ ಇರತಕ್ಕದ್ದು. ಅಕ್ಷರಸ್ಥರಾಗಿರಬೇಕು. ಸಣ್ಣ ವ್ಯಾಪಾರ ಮಾಡುವ ನೈಪುಣ್ಯವಿರಬೇಕು. ಕಳೆದ ೧೦ ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು. ಸರ್ಕಾರಕ್ಕೆ ಸುಸ್ತಿದಾರರಾಗಿರಬಾರದು. ಕನಿಷ್ಠ ೧೮ ಹಾಗೂ ಗರಿಷ್ಠ ೫೫ ವರ್ಷಗಳೊಳಗಿನ	• ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಯ ಅಡಿಯಲ್ಲಿ ರೂ.೧೫೦೦೦ ಮೌಲ್ಯದ ಪೆಟ್ಟಿಗೆ ಅಂಗಡಿಯನ್ನು ಮತ್ತು ನಿರ್ವಹಣಾ ಬಂಡವಾಳ ರೂ.೨೦೦೦೦/-ಗಳನ್ನು ಡ್ಡಿರಹಿತ ಸಾಲವನ್ನಾಗಿ ಮಂಜೂರು ಮಾಡಲಾಗುತ್ತದೆ. ಸಾಲವನ್ನು ೪೦	ಫಲಾನುಭವಿಗಳಿಗೆ ಶೇ. ೪೦ ಹಾಗೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು, ಗ್ರಾಮೀಣ ಅಭ್ಯರ್ಥಿಗಳಿಗೆ ರೂ.೧೧,೫೦೦ಗಳು ಮತ್ತು ನಗರದ ಅಭ್ಯರ್ಥಿಗಳಿಗೆ ರೂ.೨೪,೦೦೦ಗಳ ಗಿಂತ ಕಡಿಮೆ ವಾರ್ಷಿಕ ಆದಾಯ ಇರತಕ್ಕದ್ದು. ಅಕ್ಷರಸ್ಥರಾಗಿರಬೇಕು. ಸಣ್ಣ ವ್ಯಾಪಾರ ಮಾಡುವ ನೈಪುಣ್ಯವಿರಬೇಕು. ಕಳೆದ ೧೦ ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು.	• ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು

		ಅಂಗವಿಕಲರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಪ್ರೋತ್ಸಾಹಿಸುವುದು ಹಾಗೂ ಆರ್ಥಿಕ ಮಟ್ಟವನ್ನು ಅಭಿವೃದ್ಧಿಗೊಳಿಸಿ ಇವರು ಸಮಾಜದಲ್ಲಿ ಇತರರಿಗೆ ಸಮಾನವಾಗಿ ಬಾಳಲು ಅವಕಾಶ ಮಾಡಿಕೊಡುವುದು. **೨೦೧೮-೧೯ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಆಧಾರ ಸ್ವಯಂ ಉದ್ಯೋಗ ಯೋಜನೆಯ ಘಟಕ ವೆಚ್ಚವನ್ನು ಈಗಿರುವ ರೂ.೩೫,೦೦೦/-ಗಳಿಂದ ರೂ.೧,೦೦,೦೦೦/-ಗಳಿಗೆ ಹೆಚ್ಚಿಸಿ, ಇದರಲ್ಲಿ ಶೇಕಡ ೫೦ರಷ್ಟು ಬ್ಯಾಂಕ್ ಸಾಲ ಮತ್ತು ಶೇಕಡ ೫೦ರಷ್ಟು ಸಬ್ಸಿಡಿ" ಎಂದು ಘೋಷಿಸಲಾಗಿದೆ.**	ನಿರುದ್ಯೋಗಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.	ಕಂತಿನಲ್ಲಿ ಮರುಪಾವತಿ ಮಾಡಲು ಕಾಲಾವಕಾಶವಿರುತ್ತದೆ.	ಸರ್ಕಾರಕ್ಕೆ ಸುಸ್ತಿದಾರರಾಗಿರಬಾರದು. ಕನಿಷ್ಠ ೧೮ ಹಾಗೂ ಗರಿಷ್ಠ ೫೫ ವರ್ಷಗಳೊಳಗಿನ ನಿರುದ್ಯೋಗಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.	
೨೩.	ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳು	ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ೨೦೧೧-೧೨ನೇ ಸಾಲಿನಿಂದ ಜಿಲ್ಲಾ ಪುನರ್ವಸತಿ ಕೇಂದ್ರಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿರುತ್ತದೆ. ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ರಾಜ್ಯದ ಮೈಸೂರು, ಗದಗ, ಹಾವೇರಿ, ಬೆಂಗಳೂರು ನಗರ, ಬೆಂಗಳೂರು (ಗ್ರಾ) ಉಡುಪಿ, ದಕ್ಷಿಣಕನ್ನಡ, ಬೆಳಗಾವಿ, ರಾಯಚೂರು, ಚಿಕ್ಕಮಗಳೂರು, ಬಿಜಾಪುರ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ೨೦೧೪-೧೫ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಮಮಇ/೧೧೩/ಪಿಹೆಚ್‌ಪಿ /೨೦೧೪ ದಿನಾಂಕ:೧೪.೦೫.೨೦೧೪ರಲ್ಲಿ "ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರಗಳಿಗೆ"	–	• ತಪಾಸಣಾ ಶಿಬಿರಗಳ ಮೂಲಕ ಅಂಗವಿಕಲರ ಸಮೀಕ್ಷೆ ಹಾಗು ಗುರುತಿಸುವಿಕೆ. • ಅಂಗವಿಕಲತೆಯನ್ನು ತಡೆಗಟ್ಟುವ ಬಗ್ಗೆ ಪ್ರೋತ್ಸಾಹಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು. • ಬಾಲ್ಯಾವಸ್ಥೆಯಲ್ಲಿಯೇ ಅಂಗವಿಕಲತೆಯನ್ನು ಪತ್ತೆಹಚ್ಚಿ ತಡೆಗಟ್ಟುವುದು. • ಅಗತ್ಯವಿರುವ ಸಾಧನ ಸಲಕರಣೆಗಳನ್ನು ಗುರುತಿಸುವುದು ಹಾಗೂ ಅವುಗಳನ್ನು ತಯಾರಿಸಿ ನೀಡುವುದು ಮತ್ತು ದುರಸ್ತಿ ಕಾರ್ಯ ಕೈಗೊಳ್ಳುವುದು. • ಅಂಗವಿಕಲತೆ ಪ್ರಮಾಣ ಪತ್ರಗಳನ್ನು ಒದಗಿಸುವುದು, ರಿಯಾಯಿತಿ ದರದ	–	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

		ನೀಡುವ ಸಹಾಯಧನದ ಸೌಲಭ್ಯವನ್ನು ೧೬ ಜಿಲ್ಲೆಗಳಿಗೆ ವಿಸ್ತರಿಸಿ, ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ.೨೮.೦೦ ಲಕ್ಷದಿಂದ ರೂ.೩೬.೦೦ಲಕ್ಷಗಳಿಗೆ ಪರಿಷ್ಕರಣೆ ಮಾಡಿ ಹೆಚ್ಚಿಸಲಾಗಿದೆ.		ಬಸ್‌ಪಾಸ್ ಅಂಗವಿಕಲರಿಗೆ ಇತರೆ ರಿಯಾಯಿತಿಗಳನ್ನು ಒದಗಿಸಲು ಕ್ರಮವಹಿಸುವುದು. • ಅಂಗವಿಕಲತೆ ನಿವಾರಣೆ ಶಸ್ತ್ರಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆ ಹಾಗೂ ಇತರೆ ಖಾಸಗಿ ಆಸ್ಪತ್ರೆಗಳಿಗೆ ಅಂಗವಿಕಲರನ್ನು ಕಳುಹಿಸಲು ಮಾಹಿತಿ ಸೇವೆ ನೀಡಲು ವ್ಯವಸ್ಥೆ ಮಾಡುವುದು. • ಸ್ವಯಂ ಉದ್ಯೋಗಕ್ಕೆ ಬ್ಯಾಂಕ್ ಹಾಗೂ ಇತರೆ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸುವುದು. • ಶಿಕ್ಷಕರು, ಸಮುದಾಯ ಹಾಗೂ ವಿಕಲಚೇತನರ ಕುಟುಂಬಗಳಿಗೆ ತರಬೇತಿಯನ್ನು ನೀಡುವುದು. • ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ವಿಕಲಚೇತನರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರನ್ನು ಸೂಕ್ತ ಕೆಲಸಗಳಲ್ಲಿ ತೊಡಗಿಸುವುದರ ಮೂಲಕ ಆರ್ಥಿಕವಾಗಿ ಸಬಲೀಕರಿಸುವುದು.		

೨೪	ವೈದ್ಯಕೀಯ ಪರಿಹಾರ	ಅಂಗವಿಕಲತೆಯ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲು ಅಥವಾ ನಿವಾರಿಸುವ ಸಲುವಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗುವ ವಿಕಲಚೇತನ ವ್ಯಕ್ತಿಗೆ ಶಸ್ತ್ರಚಿಕಿತ್ಸೆ/ ಔಷಧಿ/ವೈದ್ಯಕೀಯ ಪರೀಕ್ಷೆ/ ಬೆಡ್‌ಚಾರ್ಜ್‌ಗಳ ವೆಚ್ಚವನ್ನು ಭರಿಸಲು ಗರಿಷ್ಠ ರೂ.೧.೦೦ ಲಕ್ಷಗಳವರೆಗೆ ಅನುದಾನವನ್ನು ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ವೈದ್ಯರ ಶಿಫಾರಸ್ಸಿನ ಮೇಲೆ ಮರುಪಾವತಿಸಲಾಗುವುದು. ಈ ಸೌಲಭ್ಯವನ್ನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆ, ಸುಸಜ್ಜಿತ ಖಾಸಗಿ ಆಸ್ಪತ್ರೆಗಳ ಅಥವಾ ಸಂಜಯಗಾಂಧಿ ಆಸ್ಪತ್ರೆ, ಬೆಂಗಳೂರು ಮುಖಾಂತರ ಅನುಷ್ಠಾನಗೊಳಸಲಾಗುತ್ತಿದೆ. ಸದರಿ ಯೋಜನೆಯು ದಿನಾಂಕ:೦೧-೦೪-೨೦೦೦ದಿಂದ ಜಾರಿಯಲ್ಲಿರುತ್ತದೆ.	• ಶಸ್ತ್ರ ಚಿಕಿತ್ಸೆಯಿಂದ ಅಂಗವಿಕಲತೆ ನಿವಾರಣೆಯಾಗುವ ಇಲ್ಲವೆ ಅಂಗವಿಕಲತೆಯ ಪ್ರಮಾಣ ಕಡಿಮೆಯಾಗುವ ಕುರಿತಂತೆ ತಜ್ಞ ವೈದ್ಯಾಧಿಕಾರಿಗಳಂದ ಪಡೆದ ದೃಢೀಕರಣ ಒದಗಿಸಬೇಕು. • ಮರುಪಾವತಿ ಪಡೆಯಲು, ಚಿಕಿತ್ಸೆಗೆ ಸಂಬಂಧಪಟ್ಟ ಔಷಧಿ ಖರೀದಿ, ಹಾಸಿಗೆ ಖರ್ಚು, ವೈದ್ಯಕೀಯ ಪರೀಕ್ಷೆಗಳ ವೆಚ್ಚ ಮತ್ತು ಶಸ್ತ್ರಚಿಕಿತ್ಸೆಗೆ ತಗಲುವ ವೆಚ್ಚದ ಮೂಲ ರಸೀತಿಗಳನ್ನು ಒದಗಿಸಬೇಕು	• ಗರಿಷ್ಠ ರೂ.೧.೦೦ ಲಕ್ಷಗಳವರೆಗೆ ಅನುದಾನವನ್ನು ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ವೈದ್ಯರ ಶಿಫಾರಸ್ಸಿನ ಮೇಲೆ ಮರುಪಾವತಿಸ ಲಾಗುವುದು.	ನಿಗದಿತ ನಮೂನೆಯಲ್ಲಿ ಅರ್ಜಿ ಯನ್ನು ಭರ್ತಿ ಮಾಡಿ, ಸಂಬಂಧಪಟ್ಟ ಆಸ್ಪತ್ರೆಯ ಮುಖ್ಯಸ್ಥರು ಶಸ್ತ್ರಚಿಕಿತ್ಸೆ ಕೈಗೊಂಡ ನಂತರ ತಗಲಿದ ವೆಚ್ಚ ದೃಢೀಕರಿಸಿ, ಮೂಲ ರಸೀದಿಯೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗಳಿಗೆ ನಿಗದಿತ ನಮೂನೆಯಲ್ಲಿ ಕೋರಿಕೆ ಸಲ್ಲಿಸಿದಲ್ಲಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿ ಕಾರಿಗಳಂದ, ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆ ಯಲ್ಲಿರುವ ಜಿಲ್ಲಾಮಟ್ಟದ ಸಮಿತಿಯಲ್ಲಿ ಮಂಡಿಸಿ, ಅನು ಮೋದನೆ ಪಡೆದು ಚಿಕಿತ್ಸೆ ನಡೆಸಿದ ಆಸ್ಪತ್ರೆಗೆ ನೇರವಾಗಿ ಸಂದಾಯ ಮಾಡಲಾಗುತ್ತದೆ.	ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು
೨೫	ಬುದ್ಧಿಮಾಂದ್ಯ ಮಕ್ಕಳ ಪೋಷಕರ ವಿಮಾ ಯೋಜನೆ	ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ಹೆಸರಲ್ಲಿ, ಭಾರತೀಯ ಜೀವ ವಿಮಾ ನಿಗಮಕ್ಕೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದಿಂದ ವಾರ್ಷಿಕ ವಿಮಾ ಕಂತನ್ನು ಪಾವತಿ ಮಾಡಿ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತದೆ. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ನಿಧನದ ನಂತರ ಬುದ್ಧಿಮಾಂದ್ಯ ವ್ಯಕ್ತಿಗಳ ಪೋಷಣೆಗಾಗಿ ಜೀವವಿಮಾ ನಿಗಮದಿಂದ ನಾಮನಿರ್ದೇಶಿತರಿಗೆ ರೂ. ೨೦,೦೦೦/- ವಿಮಾ ಹಣ ದೊರೆಯುತ್ತದೆ.	• ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ ಪೋಷಕರು ೧೮ ರಿಂದ ೬೦ ವರ್ಷವರೆಗಿನ ವಯೋಮಿತಿ ಯವರಾಗಿರಬೇಕು. • ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ ೧೧,೫೦೦/- ಮತ್ತು ನಗರ ಪ್ರದೇಶಗಳಲ್ಲಿ	ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ನಿಧನದ ನಂತರ ಬುದ್ಧಿಮಾಂದ್ಯ ವ್ಯಕ್ತಿಗಳ ಪೋಷಣೆಗಾಗಿ ಜೀವವಿಮಾ ನಿಗಮದಿಂದ ನಾಮನಿರ್ದೇಶಿತರಿಗೆ ರೂ. ೨೦,೦೦೦/- ವಿಮಾ ಹಣ ದೊರೆಯುತ್ತದೆ.	-	-

		ದಿನಾಂಕ:೨೮-೦೮-೨೦೦೬ರ ಸರ್ಕಾರದ ಆದೇಶದಲ್ಲಿ ಒಂದೇ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳು ಬುದ್ಧಿಮಾಂದ್ಯರಾಗಿದ್ದಲ್ಲಿ ಎರಡು ಬುದ್ಧಿಮಾಂದ್ಯ ಮಕ್ಕಳಿಗೆ ವಿಮಾ ಸೌಲಭ್ಯ ಪಡೆಯಬಹುದು. ಪಡೆದಿದ್ದಲ್ಲಿ ಅವರ ಪೋಷಕರು (ವಿಮಾದಾರರು) ಮರಣ ಹೊಂದಿದ ಪಕ್ಷದಲ್ಲಿ ನಾಮ ನಿರ್ದೇಶಿತರಿಗೆ ರೂ.೨೦,೦೦೦/-ಗಳ ವಿಮಾ ಮೊತ್ತವನ್ನು ಭಾರತಿಯ ಜೀವ ವಿಮಾ ನಿಗಮದಿಂದ ಪಾವತಿಸಲಾಗುವುದು.	ರೂ.೨೪,೦೦೦/-ಗಳನ್ನು ಮೀರಿರಬಾರದು. • ಬುದ್ಧಿಮಾಂದ್ಯತೆ ಬಗ್ಗೆ ತಜ್ಞ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದಿರಬೇಕು. • ವಿಮಾ ಮೊತ್ತವನ್ನು ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ ಪೋಷಕರ ನಿಧನದ ನಂತರ ಅವರ ನಾಮನಿರ್ದೇಶಿತರಿಗೆ ಜೀವ ವಿಮಾ ನಿಗಮವು ಹಣವನ್ನು ಪಾವತಿ ಮಾಡುತ್ತದೆ.			
೨೬	ವಿವಾಹ ಪ್ರೋತ್ಸಾಹ ಧನ	ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ಜಂಟಿಯಾಗಿ ರೂ.೫೦,೦೦೦/-ಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ೫ ವರ್ಷಗಳ ಅವಧಿಗೆ ನಿಶ್ಚಿತ ಠೇವಣಿ ಇಡಲಾಗುವುದು. ಅದರಿಂದ ಬರುವ ಬಡ್ಡಿ ಹಣವನ್ನು ಜೀವನ ನಿರ್ವಹಣೆಗೆ ಉಪಯೋಗಿಸುವುದು. ೦೫ ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದು. ಈ ಯೋಜನೆಯು ದಿ:೨೯-೦೮-೨೦೧೫ರಿಂದ ಜಾರಿಗೆ ಬಂದಿರುತ್ತದೆ. • ಸಾಮಾನ್ಯ ವ್ಯಕ್ತಿಗಳು ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗಲು ಪ್ರೋತ್ಸಾಹಿಸುವುದು. • ಸಾಮಾನ್ಯ ವ್ಯಕ್ತಿಗಳು ವಿಕಲಚೇತನರನ್ನು ವಿವಾಹವಾಗಲು ನಿರ್ಲಕ್ಷತೆ ತೋರುತ್ತಿರುವುದನ್ನು ತಡೆಯಬಹುದಾಗಿರುತ್ತದೆ. • ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳು ಮದುವೆಯಾದಲ್ಲಿ ವಿಕಲಚೇತನರು ಸಹ ಸಾಮಾನ್ಯರಂತೆ ವೈವಾಹಿಕ ಜೀವನ	• ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ. • ವಿವಾಹವಾಗುವ ಯುವತಿಯರ ವಯಸ್ಸು ೧೮ ಹಾಗೂ ಯುವಕರ ವಯಸ್ಸು ೨೧ ವರ್ಷಕ್ಕಿಂತ ಮೇಲ್ಪಟ್ಟಿರಬೇಕು. • ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿಕಲಚೇತನ ವ್ಯಕ್ತಿಗಳು/ ಸಾಮಾನ್ಯ ವ್ಯಕ್ತಿಗಳು ೨ನೇ ಮದುವೆ ಮಾಡಿಕೊಂಡಲ್ಲಿ ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ. • ನೀಡಲಾಗುವ ಧನಸಹಾಯವನ್ನು ಐದು ವರ್ಷಗಳ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ ರೂಪದಲ್ಲಿ ಇಡತಕ್ಕದ್ದು. ಹಾಗೂ ಈ ಠೇವಣಿಯಿಂದ ಬಂದ ಬಡ್ಡಿ ಹಣವನ್ನು ಅವರ ಜೀವನ ನಿರ್ವಹಣೆಗೆ ಉಪಯೋಗಿಸ ತಕ್ಕದ್ದು. ೫ ವರ್ಷದ ನಂತರ ಪೂರ್ಣ ಹಣ	ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ಜಂಟಿಯಾಗಿ ರೂ.೫೦,೦೦೦/- ಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ೫ ವರ್ಷಗಳ ಅವಧಿಗೆ ನಿಶ್ಚಿತ ಠೇವಣಿ ಇಡಲಾಗುವುದು. ಅದರಿಂದ ಬರುವ ಬಡ್ಡಿ ಹಣವನ್ನು ಜೀವನ ನಿರ್ವಹಣೆಗೆ ಉಪಯೋಗಿಸುವುದು. ೦೫ ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದು.	• ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ. • ವಿವಾಹವಾಗುವ ಯುವತಿಯರ ವಯಸ್ಸು ೧೮ ಹಾಗೂ ಯುವಕರ ವಯಸ್ಸು ೨೧ ವರ್ಷಕ್ಕಿಂತ ಮೇಲ್ಪಟ್ಟಿರಬೇಕು. • ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿಕಲಚೇತನ ವ್ಯಕ್ತಿಗಳು/ ಸಾಮಾನ್ಯ ವ್ಯಕ್ತಿಗಳು ೨ನೇ ಮದುವೆ ಮಾಡಿಕೊಂಡಲ್ಲಿ ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ. • ನೀಡಲಾಗುವ ಧನಸಹಾಯ ವನ್ನು ಐದು ವರ್ಷಗಳ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ	ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು

		ಸಾಗಿಸಲು ಸಾಧ್ಯವಾಗುತ್ತದೆ.	ಪಡೆಯಬಹುದು ಅಥವಾ ಮುಂದುವರೆಸುವುದು ಫಲಾನುಭವಿಯ ಇಚ್ಛೆಗೆ ಒಳಪಟ್ಟಿದೆ. • ವಿಕಲಚೇತನ ಯುವಕ/ ಯುವತಿಯರ ವಿಕಲ ಚೇತನತೆಯ ಪ್ರಮಾಣ ಶೇ.೪೦%ಕ್ಕಿಂತ ಹೆಚ್ಚಾಗಿರತಕ್ಕದ್ದು. • ವಿವಾಹವಾಗುವ ಯುವಕ/ ಯುವತಿಯರು ಕಡ್ಡಾಯವಾಗಿ ಸಂಬಂಧಪಟ್ಟವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರ ನೀಡತಕ್ಕದ್ದು. • ವಿವಾಹವನ್ನು ವಿವಾಹ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸತಕ್ಕದ್ದು. • ಪ್ರೋತ್ಸಾಹ ಧನವನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿ ರುತ್ತದೆ.		ರೂಪದಲ್ಲಿ ಇಡತಕ್ಕದ್ದು. ಹಾಗೂ ಈ ಠೇವಣಿಯಿಂದ ಬಂದ ಬಡ್ಡಿ ಹಣವನ್ನು ಅವರ ಜೀವನ ನಿರ್ವಹಣೆಗೆ ಉಪಯೋಗಿಸ ತಕ್ಕದ್ದು. ೫ ವರ್ಷದ ನಂತರ ಪೂರ್ಣ ಹಣ ಪಡೆಯಬಹುದು ಅಥವಾ ಮುಂದುವರೆಸುವುದು ಫಲಾನುಭವಿಯ ಇಚ್ಛೆಗೆ ಒಳಪಟ್ಟಿದೆ. • ವಿಕಲಚೇತನ ಯುವಕ/ ಯುವತಿಯರ ವಿಕಲ ಚೇತನತೆಯ ಪ್ರಮಾಣ ಶೇ.೪೦%ಕ್ಕಿಂತ ಹೆಚ್ಚಾಗಿರತಕ್ಕದ್ದು. • ವಿವಾಹವಾಗುವ ಯುವಕ/ ಯುವತಿಯರು ಕಡ್ಡಾಯವಾಗಿ ಸಂಬಂಧಪಟ್ಟವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರ ನೀಡತಕ್ಕದ್ದು. • ವಿವಾಹವನ್ನು ವಿವಾಹ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸತಕ್ಕದ್ದು. • ಪ್ರೋತ್ಸಾಹ ಧನವನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿ	

					ರುತ್ತದೆ.	
೨೭	ಶಿಶುಪಾಲನ ಭತ್ಯೆ	ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರು ಹಾಗೂ ಅವರಿಗೆ ಜನಿಸುವ ಕನಿಷ್ಠ ೨ ಮಕ್ಕಳಿಗೆ ಆರೈಕೆ ಮಾಡಲು ದಾದಿ/ಶೂಶ್ರುಷಕರ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.೨೦೦೦/- ಗಳಂತೆ ೨ ವರ್ಷಗಳ ಅವಧಿಗೆ ಸಹಾಯಧನವನ್ನು ನೀಡುವುದು.	• ವಿಕಲಚೇತನ ಅಂಧ ಮಹಿಳೆಯು ಭಾರತದ ಪ್ರಜೆಯಾಗಿರಬೇಕು. ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಕನಿಷ್ಠ ೬ ವರ್ಷಗಳು ಕರ್ನಾಟಕದಲ್ಲಿ ವಾಸವಾಗಿರಬೇಕು. • ಅಂಧ ಮಹಿಳೆಯ ವಯಸ್ಸು ಕನಿಷ್ಠ ೧೮ ವರ್ಷಕ್ಕಿಂತ ಹೆಚ್ಚಾಗಿರಬೇಕು. • ಕಂದಾಯ ಇಲಾಖೆಯಿಂದ ಪಡೆಯಲಾದ ಆದಾಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅವರುಗಳ ಕುಟುಂಬದ ವಾರ್ಷಿಕ ಆದಾಯ ರೂ.೨.೫೦ ಲಕ್ಷಗಳ ಒಳಗಿರಬೇಕು. • ಶಿಶು ಪಾಲನಾ ಭತ್ಯೆಯು ೨ ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ. • ಸಹಾಯಕ್ಕಾಗಿ ಬರುವ ವ್ಯಕ್ತಿಯಿಂದ ಶಿಶು ಪಾಲನೆ, ಆರೋಗ್ಯ ಹಾಗೂ ಪೌಷ್ಠಿಕ ಆಹಾರ ಒದಗಿಸುವ ಕುರಿತು ಮುಚ್ಚಳಿಕೆ ಪಡೆಯತಕ್ಕದ್ದು. • ಶಿಶು ಪಾಲನಾ ಭತ್ಯೆಯನ್ನು ಮಗುವಿನ ಆರೋಗ್ಯ, ಪೌಷ್ಠಿಕ ಆಹಾರ ಮತ್ತು ಪಾಲನೆಗೆ ಮಾತ್ರ • ಉಪಯೋಗಿಸಲಾಗುವುದೆಂದ ು ದೃಢೀಕರಿಸತಕ್ಕದ್ದು. • ಶಿಶು ಪಾಲನಾ ಭತ್ಯೆಯನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ	ಅಂಧ ಮಹಿಳೆಯರು ಹಾಗೂ ಅವರಿಗೆ ಜನಿಸುವ ಕನಿಷ್ಠ ೨ ಮಕ್ಕಳಿಗೆ ಆರೈಕೆ ಮಾಡಲು ದಾದಿ/ಶೂಶ್ರುಷಕರ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.೨೦೦೦/- ಗಳಂತೆ ೨ ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುವುದು.	• ವಿಕಲಚೇತನ ಅಂಧ ಮಹಿಳೆಯು ಭಾರತದ ಪ್ರಜೆಯಾಗಿರಬೇಕು. ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಕನಿಷ್ಠ ೬ ವರ್ಷಗಳು ಕರ್ನಾಟಕದಲ್ಲಿ ವಾಸವಾಗಿರಬೇಕು. • ಅಂಧ ಮಹಿಳೆಯ ವಯಸ್ಸು ಕನಿಷ್ಠ ೧೮ ವರ್ಷಕ್ಕಿಂತ ಹೆಚ್ಚಾಗಿರಬೇಕು. • ಕಂದಾಯ ಇಲಾಖೆಯಿಂದ ಪಡೆಯಲಾದ ಆದಾಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅವರುಗಳ ಕುಟುಂಬದ ವಾರ್ಷಿಕ ಆದಾಯ ರೂ.೨.೫೦ ಲಕ್ಷಗಳ ಒಳಗಿರಬೇಕು. • ಶಿಶು ಪಾಲನಾ ಭತ್ಯೆಯು ೨ ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ. • ಸಹಾಯಕ್ಕಾಗಿ ಬರುವ ವ್ಯಕ್ತಿಯಿಂದ ಶಿಶು ಪಾಲನೆ, ಆರೋಗ್ಯ ಹಾಗೂ ಪೌಷ್ಠಿಕ ಆಹಾರ ಒದಗಿಸುವ ಕುರಿತು ಮುಚ್ಚಳಿಕೆ ಪಡೆಯತಕ್ಕದ್ದು. • ಶಿಶು ಪಾಲನಾ ಭತ್ಯೆಯನ್ನು ಮಗುವಿನ ಆರೋಗ್ಯ, ಪೌಷ್ಠಿಕ	ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು

			ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗಳದ್ದಾಗಿರುತ್ತದೆ.		ಆಹಾರ ಮತ್ತು ಪಾಲನೆಗೆ ಮಾತ್ರ • ಉಪಯೋಗಿಸಲಾಗುವುದಿ ಂದು ದೃಢೀಕರಿಸತಕ್ಕದ್ದು. • ಶಿಶು ಪಾಲನಾ ಭತ್ಯೆಯನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗಳದ್ದಾಗಿರುತ್ತದೆ.	
೨೮	ನಿರಾಮಯ	ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್-೧೯೯೯ ಅಧಿನಿಯಮದಡಿ ಬರುವ ೦೪ ಬಗೆಯ ವಿಕಲಚೇತನರಿಗೆ (ಬುದ್ಧಿ ಮಾಂದ್ಯರು, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲರು) "ನಿರಾಮಯ" ಆರೋಗ್ಯ ವಿಮಾ ಯೋಜನೆ ಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆ ಯನ್ವಯ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ೦೪ ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಪ್ರಥಮ ಬಾರಿ ಒಂದುಸಲ ವಾರ್ಷಿಕ ರೂ.೨೫೦/-ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿ ಪ್ರತಿ ವರ್ಷ ರೂ.೧.೦೦ ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. • ಈ ಯೋಜನೆಯನ್ನು ರಾಜ್ಯ ದಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್ ಸಹಯೋಗದೊಂದಿಗೆ ಅನುಷ್ಠಾನ ಗೊಳಿಸಲಾಗುತ್ತಿದೆ. • ಕರ್ನಾಟಕ ರಾಜ್ಯಾದ್ಯಾಂತ ನ್ಯಾಷನಲ್ ಟ್ರಸ್ಟ್ ೧೯೯೯ ಅಧಿನಿಯಮದಡಿ ಬರುವ ೦೪ ಬಗೆಯ ವಿಕಲಚೇತನರಿಗೆ (ಬುದ್ಧಿಮಾಂದ್ಯರು, ಸೆರೆಬ್ರಲ್ ಪಾಲ್ಸಿ, ಆಟಿಸಂ, ಮತ್ತು ಬಹುವಿಧ ಅಂಗವಿಕಲರು) ವೈದ್ಯಕೀಯ ಸೌಲಭ್ಯ ಒದಗಿಸಲಾಗುವುದು.	• ವಿಕಲಚೇತನ ವ್ಯಕ್ತಿಗಳು ಭಾರತ ಪ್ರಜೆಯಗಿರಬೇಕು ಹಾಗೂ ಕರ್ನಾಟಕದಲ್ಲಿ ಕನಿಷ್ಠ ೧೦ ವರ್ಷಗಳು ವಾಸವಾಗಿರಬೇಕು. • ಬುದ್ಧಿಮಾಂದ್ಯ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ವಿಕಲಚೇತನರು ಮಾತ್ರ ಸೌಲಭ್ಯ ಪಡೆಯ ಬಹುದಾಗಿದೆ. • ಈ ಯೋಜನೆಗೆ ಒಳಪಡುವವರು ಬಡತನ ರೇಖೆಗಿಂತ ಕೆಳಗಿನವರಾಗಿರಬೇಕು ಹಾಗೂ ಬಿಪಿಎಲ್ ಕಾರ್ಡ್ ದೃಢೀಕೃತ ಪ್ರತಿ ಲಗತ್ತಿಸುವುದು. ಬಿಪಿಎಲ್ ಕಾರ್ಡ್ ಇಲ್ಲದ ಫಲಾನುಭವಿಗಳು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.೧೨೦೦೦/- ಹಾಗೂ	ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ೦೪ ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಪ್ರಥಮ ಬಾರಿ ಒಂದುಸಲ ವಾರ್ಷಿಕ ರೂ.೨೫೦/-ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿ ಪ್ರತಿ ವರ್ಷ ರೂ.೧.೦೦ ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ.	• ವಿಕಲಚೇತನ ವ್ಯಕ್ತಿಗಳು ಭಾರತ ಪ್ರಜೆಯಗಿರಬೇಕು ಹಾಗೂ ಕರ್ನಾಟಕದಲ್ಲಿ ಕನಿಷ್ಠ ೧೦ ವರ್ಷಗಳು ವಾಸವಾಗಿರಬೇಕು. • ಬುದ್ಧಿಮಾಂದ್ಯ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ವಿಕಲಚೇತನರು ಮಾತ್ರ ಸೌಲಭ್ಯ ಪಡೆಯ ಬಹುದಾಗಿದೆ. • ಈ ಯೋಜನೆಗೆ ಒಳಪಡುವವರು ಬಡತನ ರೇಖೆಗಿಂತ ಕೆಳಗಿನವರಾಗಿರಬೇಕು ಹಾಗೂ ಬಿಪಿಎಲ್ ಕಾರ್ಡ್ ದೃಢೀಕೃತ ಪ್ರತಿ ಲಗತ್ತಿಸುವುದು. ಬಿಪಿಎಲ್ ಕಾರ್ಡ್	ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು

		• ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ವಿಕಲಚೇತನ ವ್ಯಕ್ತಿಗಳಿಗೆ ಪ್ರತಿ ವರ್ಷ ಲಕ್ಷದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯಲು ಅವಕಾಶವಿದೆ. • ವಿಕಲಚೇತನ ವ್ಯಕ್ತಿಗಳ ಮಾನಸಿಕ ಮತ್ತು ದೈಹಿಕ ಮಟ್ಟ ಹೆಚ್ಚಿಸಲು ಸಹಕಾರ ಕಲ್ಪಿಸುವುದು. • ಸದರಿ ಯೋಜನೆಯನ್ನು ರಾಜ್ಯದಲ್ಲಿ ನ್ಯಾಷನಲ್ ಟ್ರಸ್ಟ್‌ನ ನೋಡಲ್ ಏಜೆನ್ಸಿಯಾದ ಸೇವಾ ಇನ್ ಆಕ್ಷನ್ ಬೆಂಗಳೂರು ಸಂಸ್ಥೆಯ ಮೂಲಕ ಜಾರಿಗೊಳಿಸಲಾಗುತ್ತಿದೆ.	ನಗರ ಪ್ರದೇಶವಡಿರಾಗಿದ್ದಲ್ಲಿ ರೂ.೧೭,೦೦೦/-ಗಳ ಫಲಾನುಭವಿಗಳು ಪುನರಾವರ್ತನೆ ಆಗದಂತೆ ಕ್ರಮವಹಿಸಬೇಕು. • ವಯಸ್ಸಿನ ಮಿತಿ ಇರುವುದಿಲ್ಲ. • ಯಾವುದೇ ಅರ್ಹ ಫಲಾನುಭವಿಯು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನೇರವಾಗಿ ಅಥವಾ ನ್ಯಾಷನಲ್ ಟ್ರಸ್ಟ್‌ಯಡಿ ನೊಂದಾಯಿಸಿಕೊಮಡ ಸಂಸ್ಥೆಯ ಮೂಲಕ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. • ಅಂಗವಿಕಲತೆಯ ಪ್ರಮಾಣ ಶೇ.೪೦ಕ್ಕಿಂತ ಹೆಚ್ಚಿರಬೇಕು, ಅಂಗವಿಕಲರ ಗುರುತಿನ ಚೀಟಿ ಹೊಂದಿರಬೇಕು		ಇಲ್ಲದ ಫಲಾನುಭವಿಗಳು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.೧೨೦೦೦/- ಹಾಗೂ ನಗರ ಪ್ರದೇಶವಡಿರಾಗಿದ್ದಲ್ಲಿ ರೂ.೧೭,೦೦೦/-ಗಳ ಫಲಾನುಭವಿಗಳು ಪುನರಾವರ್ತನೆ ಆಗದಂತೆ ಕ್ರಮವಹಿಸಬೇಕು. • ವಯಸ್ಸಿನ ಮಿತಿ ಇರುವುದಿಲ್ಲ. • ಯಾವುದೇ ಅರ್ಹ ಫಲಾನುಭವಿಯು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನೇರವಾಗಿ ಅಥವಾ ನ್ಯಾಷನಲ್ ಟ್ರಸ್ಟ್‌ಯಡಿ ನೊಂದಾಯಿಸಿಕೊಮಡ ಸಂಸ್ಥೆಯ ಮೂಲಕ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. • ಅಂಗವಿಕಲತೆಯ ಪ್ರಮಾಣ ಶೇ.೪೦ಕ್ಕಿಂತ ಹೆಚ್ಚಿರಬೇಕು, ಅಂಗವಿಕಲರ ಗುರುತಿನ ಚೀಟಿ ಹೊಂದಿರಬೇಕು	
೨೯	ವಿಕಲಚೇತನರ ಸಹಾಯವಾಣಿ	ವಿಕಲಚೇತನರಿಗೆ ಮಾಹಿತಿ ಮತ್ತು ಸಲಹೆಯನ್ನು ನೀಡಲು ೩೦ ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ ಕೇಂದ್ರವನ್ನು ಜಿಲ್ಲಾ ಅಂಗವಿಕಲರ	-	-	-	ಆಯಾ ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಾಧಿಕಾರಿಗಳು

		ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಪ್ರಾರಂಭಿಸಲಾಗಿರುತ್ತದೆ. ವಿಕಲಚೇತನರಿಗೆ ಉಪಯುಕ್ತವಾದ ಅಗತ್ಯವಿರುವ ಮಾಹಿತಿಯನ್ನು ಸದರಿ ಕೇಂದ್ರದಲ್ಲಿ ನೀಡಲಾಗುತ್ತದೆ.				
೩೦	ಬಡ ಅಂಗವಿಕಲರಿಗೆ ಮಾಸಿಕ ಪೋಷಣಾ ಭತ್ಯೆ	ಗ್ರಾಮೀಣ ಪ್ರದೇಶದಲ್ಲಿ ರೂ.೧೨,೦೦೦/- ಹಾಗೂ ನಗರ ಪ್ರದೇಶದಲ್ಲಿ ರೂ.೧೭,೦೦೦/- ಕ್ಕಿಂತಲೂ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬದಲ್ಲಿರುವ ಶೇ.೪೦ ರಿಂದ ಶೇ. ೭೪ ರಷ್ಟು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆ ಯಾನ ರೂ.೬೦೦/-ಗಳ ಪೋಷಣಾ ಭತ್ಯೆ ಹಾಗೂ ಶೇ.೭೫ ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರಿಗೆ ಮಾಹೆ ಯಾನ ರೂ.೧,೪೦೦/- ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದೆ.	• ವ್ಯಕ್ತಿಯ ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದಲ್ಲಿ ರೂ.೧೨,೦೦೦/- ಹಾಗೂ ನಗರ ಪ್ರದೇಶದಲ್ಲಿ ರೂ.೧೭,೦೦೦/-ಕ್ಕಿಂತಲೂ ಕಡಿಮೆ ಇರಬೇಕು. • ವ್ಯಕ್ತಿಯು ಸತತವಾಗಿ ಕರ್ನಾಟಕ ರಾಜ್ಯದಲ್ಲಿ ೦೫ ವರ್ಷಗಳು ವಾಸಿಸಿರಬೇಕು. • ಸರ್ಕಾರದ ವತಿಯಿಂದ ವೃದ್ಧಾಪ್ಯ ವೇತನ ಒಳಗೊಂಡಂತೆ ಇತರೆ ಯಾವುದೇ ಪಿಂಚಣಿ ಸೌಲಭ್ಯ ಪಡೆಯದ ಅಭ್ಯರ್ಥಿಗಳಾಗಿರಬೇಕು. • ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದ ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ ಒದಗಿಸಬೇಕು. • ವೈದ್ಯಕೀಯ ಪ್ರಾಧಿಕಾರ ದವರು ನಿಗದಿಪಡಿಸಿದಂತೆ ತಜ್ಞ ವೈದ್ಯಾಧಿಕಾರಿಗಳಿಂದ ಪಡೆದ ಅಂಗವಿಕಲತೆ ಪ್ರಮಾಣ ಪತ್ರವನ್ನು ಒದಗಿಸಬೇಕು.	ಶೇ.೪೦ ರಿಂದ ಶೇ. ೭೪ ರಷ್ಟು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆ ಯಾನ ರೂ.೬೦೦/-ಗಳ ಪೋಷಣಾ ಭತ್ಯೆ ಹಾಗೂ ಶೇ.೭೫ ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರಿಗೆ ಮಾಹೆ ಯಾನ ರೂ.೧,೪೦೦/- ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದೆ.	• ವ್ಯಕ್ತಿಯು ಸತತವಾಗಿ ಕರ್ನಾಟಕ ರಾಜ್ಯದಲ್ಲಿ ೦೫ ವರ್ಷಗಳು ವಾಸಿಸಿರಬೇಕು. • ಸರ್ಕಾರದ ವತಿಯಿಂದ ವೃದ್ಧಾಪ್ಯ ವೇತನ ಒಳಗೊಂಡಂತೆ ಇತರೆ ಯಾವುದೇ ಪಿಂಚಣಿ ಸೌಲಭ್ಯ ಪಡೆಯದ ಅಭ್ಯರ್ಥಿಗಳಾಗಿರಬೇಕು. • ವೈದ್ಯಕೀಯ ಪ್ರಾಧಿಕಾರ ದವರು ನಿಗದಿಪಡಿಸಿದಂತೆ ತಜ್ಞ ವೈದ್ಯಾಧಿಕಾರಿಗಳಿಂದ ಪಡೆದ ಅಂಗವಿಕಲತೆ ಪ್ರಮಾಣ ಪತ್ರವನ್ನು ಒದಗಿಸಬೇಕು.	ಸಂಬಂಧ ಪಟ್ಟ ತಾಲ್ಲೂಕಿನ ತಹಶೀಲ್ದಾರರು
೩೧	ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ	ಹಿರಿಯ ನಾಗರಿಕರ ತುರ್ತು ಸಮಸ್ಯೆಗಳಿಗೆ ಸ್ಪಂದಿಸಲು (ಶುಲ್ಕ ರಹಿತ ದೂರವಾಣಿ ಸಂ:೧೦೯೦) ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.	ಹಿರಿಯ ನಾಗರಿಕರಾಗಿರಬೇಕು.	ಸ್ವಯಂ ಸೇವಾ ಸಂಸ್ಥೆಗಳಿಗೆ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ನಡೆಸುವ ಸಹಾಯವಾಣಿ ಕೇಂದ್ರದ ನಿರ್ವಹಣೆಗಾಗಿ ವಾರ್ಷಿಕ ರೂ.೭,೧೫,೦೦೦/-ಗಳ ಸಹಾಯನುದಾನವನ್ನು ನೀಡಲಾಗುತ್ತಿದೆ.	ಸ್ವಯಂ ಸೇವಾ ಸಂಸ್ಥೆಗಳಿಗೆ ಇರಬೇಕಾದ ಅರ್ಹತೆಗಳು: • ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ / ಟ್ರಸ್ಟ್ ಆಕ್ಟ್‌ನಡಿ ನೋಂದಣಿಯಾದ ಸಂಸ್ಥೆಯಾಗಿರಬೇಕು	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

					• ಸಂಸ್ಥೆಯು ನೋಂದಣಿಯಾಗಿ ಕನಿಷ್ಠ ೨ ವರ್ಷಗಳಾಗಿರಬೇಕು. • ಸಹಾಯವಾಣಿ ಕೇಂದ್ರದಲ್ಲಿ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಲಾದ ವಿದ್ಯಾರ್ಹತೆಯುಳ್ಳ ಸೇವಾಮನೋಭಾವದ ಸಿಬ್ಬಂದಿಗಳನ್ನು ಹೊಂದಿರಬೇಕು. • ಹಿರಿಯ ನಾಗರಿಕರ ಅವಶ್ಯಕತೆಗಳನ್ನು ಪೂರೈಸುವ, ಮೂಲಭೂತ ಸೌಕರ್ಯ ಒದಗಿಸುವ • ಮನೋಭಾವ ಹೊಂದಿರುವ ಆಡಳಿತ ಮಂಡಳಿಯನ್ನು ಹೊಂದಿರಬೇಕು. ಸಂಸ್ಥೆಯು ಆಡಳಿತ ಮಂಡಳಿಯ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿರುವ ಉಪನಿಯಮಗಳನ್ನು (ಬೈಲಾ) ಹೊಂದಿರಬೇಕು. • ಸಂಸ್ಥೆಯ ಆರ್ಥಿಕ ಸ್ಥಿತಿಗತಿಯು ಸಧೃಡವಾಗಿರಬೇಕು. • ಯಾವುದೇ ಓರ್ವ ವ್ಯಕ್ತಿ ಹಾಗೂ ಜನಾಂಗದ ಲಾಭಕ್ಕಾಗಿ ಸಂಸ್ಥೆಯನ್ನು ನಡೆಸುತ್ತಿರಬಾರದು.	
೩.೨	ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ	ಹಿರಿಯ ನಾಗರಿಕರ ರಕ್ಷಣೆ, ಆರೋಗ್ಯ ಹಾಗೂ ಇತರೆ ಅಗತ್ಯ ಅವಶ್ಯಕತೆಗಳನ್ನು ಹಾಗೂ ಸಮಾಜದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲು	ಹಿರಿಯ ನಾಗರಿಕರಾಗಿರಬೇಕು	೫೦ ಫಲಾನುಭವಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳಿಗೆ ಹಿರಿಯ ನಾಗರಿಕರ ಹಗಲು ಯೋಗ	ಹಿರಿಯ ನಾಗರಿಕರ ಹಗಲು ಕೇಂದ್ರದಲ್ಲಿ ೫೦ ಫಲಾನುಭವಿಗಳಿಗೆ ಎಲ್ಲಾ	ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

		ಅವಕಾಶ ಕಲ್ಪಿಸುವುದು ಯೋಜನೆಯ ಉದ್ದೇಶವಾಗಿದೆ.		ಕ್ಷೇಮ ಕೇಂದ್ರವನ್ನು ನಡೆಸಲು ನಿರ್ವಹಣೆಗಾಗಿ ವಾರ್ಷಿಕರೂ.೧೧,೨೦,೦೦೦/- ಗಳ ಸಹಾಯನುದಾನವನ್ನು ನೀಡಲಾಗುತ್ತಿದೆ.	ಸೌಕರ್ಯಗಳನ್ನು ಒದಗಿಸಲಾಗುವುದು.	
ಅ	ಕಲಬುರಗಿ ಗ್ರಾಮಾಂತರ ವಿಧಾನ ಸಭಾ ವ್ಯಾಪ್ತಿಗೆ ಹಜ್ ಮತ್ತು ವಕ್ಫ್ ಇಲಾಖೆ ವತಿಯಿಂದ ಮಂಜೂರಾದ ಅನುದಾನವೆಷ್ಟು; (ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ಒದಗಿಸುವುದು).	ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ಕಲಬುರಗಿ ಗ್ರಾಮಾಂತರ ವಿಧಾನ ಸಭಾ ವ್ಯಾಪ್ತಿಗೆ ಬರುವಂತಹ ವಕ್ಫ್ ಆಸ್ತಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ. 59.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ವಿವರ ಈ ಕೆಳಕಂಡಂತಿದೆ. ವರ್ಷ — ಮಂಜೂರಾದ ಅನುದಾನ ರೂ. ಲಕ್ಷಗಳಲ್ಲಿ 2016-17 — 36.00 2017-18 — 23.00 2018-19 — --- ಒಟ್ಟು — 59.00 ಕರ್ನಾಟಕ ರಾಜ್ಯ ಹಜ್ ಸಮಿತಿಯಿಂದ ಕಲಬುರಗಿ ಗ್ರಾಮಾಂತರ ವಿಧಾನ ಸಭಾ ವ್ಯಾಪ್ತಿಗೆ ಯಾವುದೇ ಅನುದಾನ ಮಂಜೂರು ಮಾಡಿರುವುದಿಲ್ಲ.
ಆ	ಮಂಜೂರಾದ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; ಕಾಮಗಾರಿಗಳು ಯಾವ ಹಂತದಲ್ಲಿವೆ? (ಸಂಪೂರ್ಣ ಮಾಹಿತಿ ಒದಗಿಸುವುದು).	ಮಂಜೂರಾದ ಅನುದಾನದಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳು ಹಾಗೂ ಅವುಗಳ ಹಂತದ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಸಂಖ್ಯೆ: ಎಂಡಬ್ಲ್ಯೂಡಿ 56 ಎಲ್.ಎಂ.ಕ್ಯೂ 2020

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್
ಮತ್ತು ವಕ್ಫ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:01/1:ಆರ್‌ಆರ್‌ಸಿ:2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,ಬೆಂಗಳೂರು
ದಿನಾಂಕ:17.03.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

134

LAQ 2044
18. 03. 2020

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ಕೊಠಡಿ ಸಂ:121, ಮೊದಲನೆ ಮಹಡಿ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನಸಭೆ ಸದಸ್ಯರು ರವರ ~~ಚುಕ್ಕೆ ಗುರುತಿನ~~/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2044ಗೆ ಉತ್ತರವನ್ನು ಒದಗಿಸುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ~~ಚುಕ್ಕೆ ಗುರುತಿನ~~/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2044ಗೆ ಉತ್ತರವನ್ನು ಸಿದ್ದಪಡಿಸಿ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

(signature)

ಉಪ ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2044
ಸದಸ್ಯರ ಹೆಸರು	ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ (ಕೊಪ್ಪಳ)
ಉತ್ತರಿಸಬೇಕಾದ ದಿನಾಂಕ	18.03.2020

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಕಳೆದ 2 ವರ್ಷಗಳಲ್ಲಿ ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕಿನಲ್ಲಿ ಬರುವ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿಯಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ವರ್ಷವಾರು ಮಾಹಿತಿ ನೀಡುವುದು)	ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕಿನಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ರೂ.815.56 ಲಕ್ಷ ಮತ್ತು 2019-20ನೇ ಸಾಲಿನಲ್ಲಿ ರೂ.96.98 ಲಕ್ಷ ಬಿಡುಗಡೆಯಾಗಿರುತ್ತದೆ.
ಆ.	ಕಳೆದ 2 ವರ್ಷಗಳಿಂದ ಈ ಯೋಜನೆಯಡಿ ಎಷ್ಟು ಕಿ.ಮೀ. ರಸ್ತೆಗಳನ್ನು ಯಾವ ಯಾವ ಗ್ರಾಮಗಳಲ್ಲಿ ಪೂರ್ಣಗೊಳಿಸಲಾಗಿದೆ?	ಕಳೆದ 2 ವರ್ಷಗಳಿಂದ ಈ ಯೋಜೆಯಡಿ 34.15 ಕಿ.ಮೀ ಉದ್ದದ ರಸ್ತೆಗಳನ್ನು ಪೂರ್ಣಗೊಳಿಸಲಾಗಿದೆ. ವಿವರ **ಅನುಬಂಧ-1**ರಲ್ಲಿ ನೀಡಿದೆ.
ಇ.	ಹಾಗೆಯೇ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಕಿ.ಮೀ. ರಸ್ತೆಗಳ ಕಾಮಗಾರಿಗಳು ಬಾಕಿ ಉಳಿದಿವೆ	ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಬಾಕಿ ಇದ್ದ ಅರಶೀಣಕೇರಿ ಯಿಂದ ವಣಬಳ್ಳಾರಿ ವರೆಗಿನ 4.45 ಕಿ.ಮೀ ಉದ್ದದ ರಸ್ತೆಯಿದ್ದು, ಈ ಪೈಕಿ 1.50ಕಿ.ಮೀ ರಸ್ತೆಯನ್ನು ಪೂರ್ಣಗೊಳಿಸಲಾಗಿದ್ದು, ಉಳಿದ 2.21ಕಿ.ಮೀ ರಸ್ತೆಯು ಅರಣ್ಯ ಪ್ರದೇಶ ವ್ಯಾಪ್ತಿಗೆ ಒಳಪಟ್ಟಿದ್ದು, ಅರಣ್ಯ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಿದ್ದು, ಅನುಮೋದನೆ ದೊರೆತನಂತರ ಕಾಮಗಾರಿಯನ್ನು ಪೂರ್ಣಗೊಳಿಸಬೇಕಿದೆ.
ಈ.	ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೂ ಈ ಯೋಜನೆಯಡಿ ಎಷ್ಟು ಅನುದಾನವನ್ನು ವೆಚ್ಚ ಮಾಡಲಾಗಿದೆ? (ವರ್ಷವಾರು ಅಂಕಿ ಅಂಶ ಸಮೇತ ಮಾಹಿತಿ ನೀಡುವುದು)	ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕಿನ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ರೂ.815.56 ಲಕ್ಷಗಳು ಮತ್ತು 2019-20ನೇ ಸಾಲಿನಲ್ಲಿ ರೂ.96.98 ಲಕ್ಷ ಗಳನ್ನು ವೆಚ್ಚ ಮಾಡಲಾಗಿದೆ.

ಕಡತ ಸಂಖ್ಯೆ: ಗ್ರಾಅಪ:01/72:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ-1

ಕಳೆದ 2 ವರ್ಷಗಳಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಈ ಕೆಳಗಿನ ಗ್ರಾಮಗಳಲ್ಲಿ ರಸ್ತೆಗಳನ್ನು ಪೂರ್ಣಗೊಳಿಸಲಾಗಿದೆ.

ಕ್ರ ಸಂ	ಜಿಲ್ಲೆ	ತಾಲೂಕು	2018-19 & 2019-20 ನಮ್ಮ ಗ್ರಾಮ ನಮ್ಮ ರಸ್ತೆ	
			ಪೂರ್ಣಗೊಳಿಸಿದ ಉದ್ದ	ರಸ್ತೆಗಳು
1	ಕೊಪ್ಪಳ	ಕೊಪ್ಪಳ	2.415	ಲಿಂಗದಳ್ಳಿ ದಿಂದ ಎಸ್.ಹೆಚ್.-23
2	ಕೊಪ್ಪಳ	ಕೊಪ್ಪಳ	5.620	ಗಿಣಿಗೇರಿಯಿಂದ ಎನ್.ಹೆಚ್-13 ವಯಾ ಹಳೇಕನಕಾಪುರ ಬೇವಿನಹಳ್ಳಿ
3	ಕೊಪ್ಪಳ	ಕೊಪ್ಪಳ	6.085	ಬೆಳಗಟ್ಟಿಯಿಂದ ಹೈದರ ನಗರ
4	ಕೊಪ್ಪಳ	ಕೊಪ್ಪಳ	4.180	ಕರ್ಕಿಹಳ್ಳಿ ಯಿಂದ ಲಾಂಚನಕೇರಿ
5	ಕೊಪ್ಪಳ	ಕೊಪ್ಪಳ	5.900	ಭೀಮನೂರ ದಿಂದ ಎಸ್.ಹೆಚ್-36 ವಯಾ ಸಂ[illegible]ಪುರ
6	ಕೊಪ್ಪಳ	ಕೊಪ್ಪಳ	1.500	ಅರಶೀಣಕೇರಿ ದಿಂದ ವಣಬಳ್ಳಾರಿ
7	ಕೊಪ್ಪಳ	ಕೊಪ್ಪಳ	2.810	ಬುಡಶೆಟ್ನಾಳ ದಿಂದ ಕಲಕೇರಿ
8	ಕೊಪ್ಪಳ	ಕೊಪ್ಪಳ	5.640	ತಾಡಕನಕಾಪುರ ದಿಂದ ಕಿನ್ನಾಳ ವಯಾ ಬುಡಶೆಟ್ನಾಳ
	ಒಟ್ಟು		34.150	

Un-Starred
LAQ No. 2371

ಕರ್ನಾಟಕ ಸರ್ಕಾರ

ಸಂಖ್ಯೆ: MWD 58 LMQ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:17.03.2020.

43

ಇವರಿಂದ,
ಸರ್ಕಾರದ ಕಾರ್ಯದರ್ಶಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2374 ಕ್ಕೆ ಉತ್ತರಿಸುವ ಬಗ್ಗೆ.

-o0o-

ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2374 ಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್. ಎಜಾಸ್ ಪಾಷ)
ಶಾಖಾಧಿಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2374
2. ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
3. ಉತ್ತರಿಸಬೇಕಾದ ದಿನಾಂಕ : 18-03-2020
4. ಉತ್ತರಿಸುವವರು : ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಎಷ್ಟು ಅಭ್ಯರ್ಥಿಗಳನ್ನು ಹಜ್ ಯಾತ್ರೆಗೆ ಆಯ್ಕೆ ಮಾಡಲಾಗಿದೆ;</td><td>ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ ಕಳೆದ ಮೂರು ವರ್ಷಗಳಿಂದ ಹಜ್ ಯಾತ್ರೆಗೆ ಆಯ್ಕೆಯಾಗಿ ಪ್ರಯಾಣಮಾಡಿದ ಯಾತ್ರಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ;
<table>
<tr><th>ಕ್ರ ಸಂ</th><th>ವರ್ಷ</th><th>ಯಾತ್ರಿಕರ ಸಂಖ್ಯೆ</th></tr>
<tr><td>1</td><td>2017</td><td>6161</td></tr>
<tr><td>2</td><td>2018</td><td>7092</td></tr>
<tr><td>3</td><td>2019</td><td>8337</td></tr>
</table></td></tr>
<tr><td>ಆ</td><td>ಹಜ್ ಯಾತ್ರೆ ಕೈಗೊಳ್ಳಲು ಒಬ್ಬ ಅಭ್ಯರ್ಥಿಗೆ ವೆಚ್ಚವಾಗುವ ಮೊತ್ತವೆಷ್ಟು; ಅದರಲ್ಲಿ ಸರ್ಕಾರವು ಭರಿಸುವ ಮೊತ್ತವೆಷ್ಟು;</td><td>ಹಜ್ ಯಾತ್ರೆಗೆ ತೆರಳುವವರು ತಮ್ಮ ಸ್ವಂತ ಖರ್ಚಿನಿಂದ ಹಜ್ ಯಾತ್ರೆ ಕೈಗೊಳ್ಳಬೇಕು.

ಹಜ್ 2019ಗಾಗಿ ಒಬ್ಬ ಯಾತ್ರಿಗೆ ಸುಮಾರು ರೂ.2.50 ಲಕ್ಷಗಳು (ಮೆಕ್ಕಾದ ಅಜೀಜಿಯಾದಲ್ಲಿ ವಸತಿಯ ಸೌಲಭ್ಯದ ಅನ್ವಯ) ಹಾಗೂ ರೂ.2.86 ಲಕ್ಷಗಳು (ಮೆಕ್ಕಾ ನಗರದ ವಸತಿ ಸೌಲಭ್ಯದ ಅನ್ವಯ) ವೆಚ್ಚವಾಗುತ್ತಿದ್ದು, ಸರ್ಕಾರವು ಹಜ್ ಯಾತ್ರಿಕರಿಗೆ ಯಾವುದೇ ಸಹಾಯಧನ ನೀಡುವುದಿಲ್ಲ.</td></tr>
<tr><td>ಇ</td><td>ಹಜ್ ಯಾತ್ರೆಗೆ ಸರ್ಕಾರವು ಭರಿಸುವ ಮೊತ್ತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು;</td><td>ಸರ್ಕಾರವು ಹಜ್ ಯಾತ್ರಾರ್ಥಿಗಳಿಗೆ ಯಾವುದೇ ಸಹಾಯಧನ ನೀಡುವುದಿಲ್ಲ.</td></tr>
<tr><td></td><td>ಹಜ್ ಯಾತ್ರೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು; ಕಳೆದ ಐದು ವರ್ಷಗಳಿಂದ ಹಜ್ ಯಾತ್ರೆಯಲ್ಲಿ ಪಾಲ್ಗೊಳ್ಳಲು ಸ್ವೀಕೃತಿಯಾಗಿರುವ ಹಾಗೂ ವಿಲೇವಾರಿಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು;</td><td>ಹಜ್ ಯಾತ್ರೆಗೆ ಪ್ರಯಾಣಿಸುವ ಯಾತ್ರಿಕರಿಗೆ ಮುಂಬೈನ ಭಾರತೀಯ ಹಜ್ ಸಮಿತಿಯು ಹಜ್‌ಗಾಗಿ ಅರ್ಜಿಗಳನ್ನು ಅಹ್ವಾನಿಸುತ್ತದೆ ಹಾಗೂ ಮಾರ್ಗಸೂಚಿಯನ್ನು ಹೊರಡಿಸುತ್ತದೆ. ಇದರಲ್ಲಿ ಕೆಲವು ಮುಖ್ಯವಾದುವುಗಳು ಈ ಕೆಳಕಂಡಂತಿವೆ;

1. ಅರ್ಜಿದಾರನು ಭಾರತೀಯ ಮುಸ್ಲಿಂನಾಗಿದ್ದು, ಭಾರತೀಯ ಪಾಸ್‌ಪೋರ್ಟ್‌ನ್ನು ಹೊಂದಿರಬೇಕು.
2. ಅರ್ಜಿದಾರರು ಆರ್ಥಿಕವಾಗಿ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಡನಾಗಿರಬೇಕು.
3. ಮಹಿಳಾ ಅರ್ಜಿದಾರರು ಇಸ್ಲಾಂ ಧರ್ಮಕ್ಕೆ ಅನುಗುಣವಾಗಿ ಮೆಹ್ರಮ್ (ನಿರ್ದಿಷ್ಟ ಪುರುಷ ಜೊತೆಗಾರ ಅಂದರೆ ಪತಿಯನ್ನು ಹೊರತುಪಡಿಸಿ ಯಾವ ವ್ಯಕ್ತಿಯಿಂದ ಒಬ್ಬ ಮಹಿಳೆ ಮದುವೆಗೆ ಅರ್ಹಳಿಲ್ಲವೂ)ನೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.</td></tr>
</table>

ಹಜ್ ಯಾತ್ರೆಗಾಗಿ ಅರ್ಜಿಗಳು ಸ್ವೀಕೃತವಾದ ನಂತರ ಮುಂಬೈನ ಭಾರತೀಯ ಹಜ್ ಸಮಿತಿಯವರು, ಕೇಂದ್ರ ಸರ್ಕಾರದ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವಾಲಯದ ಸಹಮತಿಯೊಂದಿಗೆ ಎಲ್ಲಾ ರಾಜ್ಯಗಳಿಗೂ ಕೋಟಾವನ್ನು ನಿಗದಿಪಡಿಸುತ್ತಿದ್ದು, 2011ನ ಜನಗಣತಿಯ ವರದಿಯ ಅಧಾರದ ಮೇರೆಗೆ ಜಿಲ್ಲಾವಾರು ಯಾತ್ರಿಕರನ್ನು ಆನ್ ಲೈನ್ ಕಂಪ್ಯೂಟರ್‌ಲಾಟರಿ (ಕೇಂದ್ರಿಕೃತ ಸರ್ವರ್) ಮೂಲಕ ಆಯ್ಕೆ ಮಾಡಲಾಗುತ್ತದೆ. ಕಳೆದ ಐದು ವರ್ಷಗಳಿಂದ ಹಜ್ ಯಾತ್ರೆಗಾಗಿ ಪ್ರಯಾಣ ಮಾಡಿದವರ ಸಂಖ್ಯೆ ಈ ಕೆಳಕಂಡಂತಿವೆ.

	ವರ್ಷ	ಸ್ವೀಕೃತವಾದ ಅರ್ಜಿಗಳ ಸಂಖ್ಯೆ	ಯಾತ್ರೆಗೆ ಪ್ರಯಾಣ ಮಾಡಿದವರ ಸಂಖ್ಯೆ
1	2015	21082	4963
2	2016	20625	4654
3	2017	23486	6161
4	2018	18422	7092
5	2019	13983	8337

ಕಡತ ಸಂಖ್ಯೆ: MWD 58 LMQ 2020

(ಪ್ರಭು ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್
ಮತ್ತು ವಕ್ಫ್ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:01/1:ಆರ್‌ಆರ್‌ಸಿ:2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,ಬೆಂಗಳೂರು
ದಿನಾಂಕ:17.03.2020.

119

LAN 2332
18.03.2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ಕೊಠಡಿ ಸಂ:121, ಮೊದಲನೆ ಮಹಡಿ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನಸಭೆ ಸದಸ್ಯರು ರವರ ~~ಚುಕ್ಕೆ~~ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2332 ಗೆ ಉತ್ತರವನ್ನು ಒದಗಿಸುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ~~ಚುಕ್ಕೆ~~ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2332ಗೆ ಉತ್ತರವನ್ನು ಸಿದ್ಧಪಡಿಸಿ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2332
ಸದಸ್ಯರ ಹೆಸರು	ಶ್ರೀ ನಾಗನಗೌಡ ಕಂದ್‌ಕೂರ್ (ಗುರುಮಿಠಕಲ್)
ಉತ್ತರಿಸಬೇಕಾದ ದಿನಾಂಕ	18.03.2020

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಗುರುಮಿಠಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತ್ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ.	ಹಾಗಿದ್ದಲ್ಲಿ, ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಗ್ರಾಮೀಣ ರಸ್ತೆಗಳನ್ನು ನಬಾರ್ಡ್, 3054-ಸಿಎಂಜಿಎಸ್‌ವೈ, 3054-ಲಂಸಮ್ ಯೋಜನೆ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಗಳಡಿ ಅನುದಾನದ ಲಭ್ಯತೆಯನ್ನಾಧರಿಸಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ.	2018-19 ಮತ್ತು 2019-20ನೇ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)	• 2018-19 ನೇ ಸಾಲಿನಲ್ಲಿ ಗುರುಮಿಠಕಲ್ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳ ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. • ನಮ್ಮ ಗ್ರಾಮ ನಮ್ಮ ರಸ್ತೆ ಹಂತ-4 ರಡಿ 2018-19 ನೇ ಸಾಲಿನಲ್ಲಿ ರೂ.300.00 ಲಕ್ಷಗಳು 2019-20 ನೇ ಸಾಲಿನಲ್ಲಿ ರೂ.420.00 ಲಕ್ಷಗಳು ಮಂಜೂರಾಗಿರುತ್ತವೆ.
ಈ.	ಹಾಗಿದ್ದಲ್ಲಿ, ಮಂಜೂರಾಗಿರುವ ಅನುದಾನದಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; ತಡೆಹಿಡಿದಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ರೂ.10.00 ಕೋಟಿ ಮೊತ್ತದ ಕಾಮಗಾರಿಗಳ ಪೈಕಿ ಪ್ರಥಮ ಹಂತದಲ್ಲಿ ರೂ.3.00 ಕೋಟಿ ಮೊತ್ತದ ಕಾಮಗಾರಿಗಳನ್ನು ಮುಂದುವರೆಸಿದೆ.
		ನಮ್ಮ ಗ್ರಾಮ ನಮ್ಮ ರಸ್ತೆ ಹಂತ-4 ರಡಿ ಮಂಜೂರಾದ ರೂ.3.00 ಕೋಟಿಗಳ ಪೈಕಿ ರೂ.1.65 ಕೋಟಿಗಳನ್ನು ಬಿಡುಗಡೆ ಮಾಡಿದೆ. ಹಾಗೂ ರೂ.4.20 ಕೋಟಿಗಳ ಪೈಕಿ ರೂ.2.81 ಕೋಟಿ ಬಿಡುಗಡೆಯಾಗಿರುತ್ತದೆ.
ಉ.	ಅನುದಾನವನ್ನು ತಡೆಹಿಡಿದಿರುವುದರಿಂದ ಕ್ಷೇತ್ರದ ಅಭಿವೃದ್ಧಿ ಕುಂಠಿತ	ಇನ್ನು ತಡೆಹಿಡಿದ ರೂ.7.00 ಕೋಟಿ ಮೊತ್ತದ ಕಾಮಗಾರಿಗಳನ್ನು ಆರ್ಥಿಕ ಲಭ್ಯತೆಯ

	ವಾಗುವುದಿಲ್ಲವೇ; ತಡೆಹಿಡಿದಿರುವ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು? (ಪೂರ್ಣ ಮಾಹಿತಿ ನೀಡುವುದು)	ನ್ನಾಧರಿಸಿ ಮುಂದುವರೆಸಲು ಕ್ರಮ ಕೈಗೊಳ್ಳಬೇಕಿದೆ.

ಕಡತ ಸಂಖ್ಯೆ: ಗ್ರಾಅಪ:01/78:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

Un-Starred
LAQ No. 465

ಕರ್ನಾಟಕ ಸರ್ಕಾರ

ಸಂಖ್ಯೆ: MWD 59 LMQ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:17.03.2020.

188

ಇವರಿಂದ,
ಸರ್ಕಾರದ ಕಾರ್ಯದರ್ಶಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ಶಿವಶಂಕರ್ ರೆಡ್ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:465 ಕ್ಕೆ ಉತ್ತರಿಸುವ ಬಗ್ಗೆ.

-oOo-

ಶ್ರೀ ಶಿವಶಂಕರ್ ರೆಡ್ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:465 ಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎಜಾಸ್ ಪಾಷ)
ಶಾಖಾಧಿಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	: 465
2. ಸದಸ್ಯರ ಹೆಸರು	: ಶ್ರೀ ಶಿವಶಂಕರ ರೆಡ್ಡಿ N.H. (ಗೌರಿಬಿದನೂರು)
3. ಉತ್ತರಿಸಬೇಕಾದ ದಿನಾಂಕ	: 18-03-2020
4. ಉತ್ತರಿಸುವವರು	: ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಗೌರಿಬಿದನೂರು ತಾಲ್ಲೂಕು ಅಲಿಪುರ ಗ್ರಾಮದಲ್ಲಿ ಅತೀ ಹೆಚ್ಚು ಮುಸ್ಲಿಂ ಜನಸಂಖ್ಯೆ (10,000 ಸಾವಿರ ಜನಸಂಖ್ಯೆ) ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಹಾಗಿದ್ದಲ್ಲಿ, ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ನಿರ್ಮಾಣ ಮಾಡಲು ಸರ್ಕಾರದ ಪರಿಶೀಲನೇ ಹಂತದಲ್ಲಿದೆಯೇ;	ಇಲ್ಲ
ಇ	ಈ ಶೈಕ್ಷಣಿಕ ವರ್ಷದಲ್ಲಿಯೇ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭಿಸಲು ಅವಕಾಶವಿದೆಯೇ?	ಅನ್ವಯಿಸುವುದಿಲ್ಲ

ಕಡತ ಸಂಖ್ಯೆ: MWD 59 LMQ 2020

(ಶ್ರೀಮಂತ ಬಾಳಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ
ಹಾಗೂ ಅಲ್ಪಸಂಖ್ಯಾತರ ಕಲ್ಯಾಣ
ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 77 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

25 18/3

ಇವರಿಗೆ;
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:467ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭಾ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.467/2020, ದಿ:19.02.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:467ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M. Rajanna

(ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 467
ಸದಸ್ಯರ ಹೆಸರು : ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಪ್ರತಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗೆ ಪ್ರಸ್ತುತ ನೀಡುತ್ತಿರುವ ಗೌರವ ಧನ ತೀರಾ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯಾದ್ಯಂತ ಪ್ರತಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನ ತೀರಾ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗೆ ಪ್ರಸ್ತುತ ನೀಡಲಾಗುತ್ತಿರುವ ಗೌರವಧನ ಎಷ್ಟು; ಮತ್ತು	ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ನಗರ ಪುನರ್ವಸತಿ ಕಾರ್ಯಕರ್ತರುಗಳಿಗೆ ಮಾಸಿಕ ರೂ.3,000/- ಹಾಗೂ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳಿಗೆ ಮಾಸಿಕ ರೂ.6,000/- ಗೌರವಧನ ನೀಡಲಾಗುತ್ತಿತ್ತು. ಸರ್ಕಾರದ ಆದೇಶ ಸಂಖ್ಯೆ:ಮಮಇ/41/ಪಿಹೆಚ್‌ಪಿ/2019, ಬೆಂಗಳೂರು, ದಿನಾಂಕ:07.02.2020 ರಲ್ಲಿ 2019-20ನೇ ಸಾಲಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/-ಗಳಿಂದ ರೂ.6000/-ಗಳಿಗೆ ಹಾಗೂ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.6000/-ಗಳಿಂದ ರೂ.12,000/-ಗಳಿಗೆ ಹೆಚ್ಚಿಸಲಾಗಿರುತ್ತದೆ.
ಇ)	ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗೆ ಗೌರವಧನ ಹೆಚ್ಚಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನೊದಗಿಸುವುದು)	

ಸಂಖ್ಯೆ: ಮಮಇ 77 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಟಿಓಆರ್ 10 ಟಿಡಿವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ:17/03/2020

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಕಾಶೆಂಪೂರ್ ಬೀದರ್ ದಕ್ಷಿಣರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2370 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2370 ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2370
ಮಾನ್ಯ ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ವಿಷಯ	:	ಹೆರಟೇಜ್ ಸಿಟಿ
ಉತ್ತರಿಸುವ ದಿನಾಂಕ	:	18.03.2020
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

******

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು;	ರಾಜ್ಯದಲ್ಲಿ ಬೀದರ್ ಜಿಲ್ಲೆಯೂ ಒಳಗೊಂಡಂತೆ ಪ್ರವಾಸೋದ್ಯಮವನ್ನು ಉತ್ತೇಜಿಸಲು ಇಲಾಖೆಯಿಂದ ಈ ಕೆಳಕಂಡ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 1. ವಿವಿಧ ಸ್ಥಳೀಯ ಮತ್ತು ರಾಷ್ಟ್ರೀಯ ಟಿ.ವಿ. ಚಾನಲ್‌ಗಳಲ್ಲಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. 2. ಸ್ಥಳೀಯ ಮತ್ತು ರಾಷ್ಟ್ರೀಯ ದಿನಪತ್ರಿಕೆಗಳು ಹಾಗೂ ಮ್ಯಾಗಜೀನ್‌ಗಳಲ್ಲಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. 3. ಬ್ರ್ಯಾಂಡ್ ಕ್ಯಾಂಪೇನ್ ಅಡಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣಗಳಲ್ಲಿನ ಎಲ್.ಇ.ಡಿ. ಬೋರ್ಡ್‌ಗಳ ಮೂಲಕ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. 4. ಚಿತ್ರಮಂದಿರ ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. 5. ಅಂತರ್‌ಜಾಲತಾಣಗಳಲ್ಲಿ ಮತ್ತು ಸೋಷಿಯಲ್ ಮೀಡಿಯಾಗಳಲ್ಲಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. 6. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮೇಳಗಳಲ್ಲಿ ಮತ್ತು ರೋಡ್‌ಶೋಗಳಲ್ಲಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. 7. ಬೀದರ್ ಜಿಲ್ಲೆಯಲ್ಲಿ ಜಿಲ್ಲಾಡಳಿತ ವತಿಯಿಂದ 2018-19ನೇ ಸಾಲಿನಲ್ಲಿ ಆಯೋಜಿಸಿದ ಹಕ್ಕಿ ಹಬ್ಬ ಉತ್ಸವಕ್ಕೆ ಇಲಾಖೆಯಿಂದ ರೂ.2.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. 8. ಬೀದರ್ ಜಿಲ್ಲೆಯಲ್ಲಿರುವ ಪ್ರಮುಖ ಪ್ರವಾಸಿ ತಾಣಗಳನ್ನು ಗುರುತಿಸಿ, ಪ್ರವಾಸಿ ಮಡಿಕೆಗಳನ್ನು ಮುದ್ರಿಸಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಕ್ರ. ಸಂ	ಪ್ರಶ್ನೆ	ಉತ್ತರ
ಆ)	ಬೀದರ್ ಜಿಲ್ಲೆಯನ್ನು ಹೆರಿಟೇಜ್ ಸಿಟಿ ಎಂದು ಘೋಷಿಸಲಾಗಿದೆಯೇ;	2004-05ನೇ ಸಾಲಿನ ಆಯವ್ಯಯದ ಘೋಷಣೆಯಂತೆ ಸರ್ಕಾರಿ ಆದೇಶ ಸಂಖ್ಯೆ: ಸಂಕ ಇ 12 ಕೆವಿಎಂಯು 2004 ಬೆಂಗಳೂರು, ದಿನಾಂಕ: 25.03.2004ರ ಪ್ರಕಾರ ಮೈಸೂರು, ಶ್ರೀರಂಗಪಟ್ಟಣ, ಗುಲ್ಬರ್ಗಾ, ಬೀದರ್, ಬಿಜಾಪುರ ಮತ್ತು ಕಿತ್ತೂರು ನಗರಗಳನ್ನು ಪಾರಂಪರಿಕ ಪ್ರದೇಶವೆಂದು ಗುರುತಿಸಲಾಗಿದೆ:
ಇ)	ಹೆರಿಟೇಜ್ ಸಿಟಿ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯವರು ಕೈಗೊಳ್ಳುತ್ತಿರುವ ಕಾರ್ಯಕ್ರಮಗಳ ರೂಪರೇಷೆಗಳೇನು;	ಹೆರಿಟೇಜ್ ಸಿಟಿ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವುದಿಲ್ಲ.
ಈ)	ಈ ಯೋಜನೆಯಡಿ ಬೀದರ್ ಜಿಲ್ಲೆಗೆ ಮಂಜೂರಾದ ಅನುದಾನವೆಷ್ಟು ಹಾಗೂ ಇದುವರೆವಿಗೂ ಖರ್ಚು ಮಾಡಲಾಗಿರುವ ಮೊತ್ತವೆಷ್ಟು;	ಅನ್ವಯಿಸುವುದಿಲ್ಲ.
ಉ)	ಸದರಿ ಯೋಜನೆಗೆ ಮಂಜೂರಾಗಿರುವ ಅನುದಾನದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು (ವಿವರಗಳನ್ನು ಒದಗಿಸುವುದು)?	ಅನ್ವಯಿಸುವುದಿಲ್ಲ.

ಕಡತ ಸಂಖ್ಯೆ: ಟಿಓಆರ್ 101 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/53/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:17.03.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ರಂಗನಾಥ್ ಹೆಚ್. ಡಿ. ಡಾ|| (ಕುಣಿಗಲ್)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2038ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ರಂಗನಾಥ್ ಹೆಚ್. ಡಿ. ಡಾ|| (ಕುಣಿಗಲ್)** ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2038ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

B.S. Prashant Kumar
17/03/2020

(ಬಿ. ಎಸ್. ಪ್ರಶಾಂತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2038

ಉತ್ತರಿಸಬೇಕಾದ ದಿನಾಂಕ : 18.03.2020

ಸದಸ್ಯರ ಹೆಸರು : ಶ್ರೀ ರಂಗನಾಥ್ ಹೆಚ್. ಡಿ. ಡಾ|| (ಕುಣಿಗಲ್)

ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕುಣಿಗಲ್ ಪಟ್ಟಣಕ್ಕೆ ಈಗಾಗಲೇ ಹಿಂದಿನ ಸರ್ಕಾರವು ಒಂದು ಸುಸಜ್ಜಿತವಾದ ಕ್ರೀಡಾಂಗಣವನ್ನು ಮಂಜೂರು ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯು ಸರ್ಕಾರದಲ್ಲಿ ಯಾವ ಹಂತದಲ್ಲಿದೆ; (ಕಡತ ಸಂಖ್ಯೆಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರಿ ಆದೇಶ ಸಂ: ಯುಸೇಇ 279 ಯುಸೇಕ್ರೀ 2017 ದಿನಾಂಕ: 30.01.2018ರಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣದಲ್ಲಿ ರೂ 500.00 ಲಕ್ಷಗಳ ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಅನುಷ್ಠಾನ ಸಂಸ್ಥೆಯನ್ನು ನಿಗದಿಪಡಿಸಿ ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಆ)	ಈವರೆವಿಗೂ ಕಾಮಗಾರಿಯ ಟೆಂಡರ್ ಕರೆಯದಿದ್ದಲ್ಲಿ, ಇದಕ್ಕೆ ಕಾರಣವೇನು; ಯಾವಾಗ ಕಾಮಗಾರಿ ಚಾಲ್ತಿಯಾಗುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು)	ಅನುಷ್ಠಾನ ಸಂಸ್ಥೆ ನಿಗದಿಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಅನುಷ್ಠಾನ ಸಂಸ್ಥೆಯನ್ನು ನಿಗದಿಪಡಿಸಿದ ನಂತರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುವುದು.
ಇ)	ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ಇರುವ ಕಾರ್ಯಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆವತಿಯಿಂದ ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮವನ್ನು ಹೋಬಳಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಮತ್ತು ಗ್ರಾಮೀಣ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಗ್ರಾಮೀಣ ಗರಡಿ ಮನೆ ನಿರ್ಮಾಣ/ದುರಸ್ಥಿಗೆ ಅನುದಾನ ನೀಡಲಾಗುತ್ತಿದೆ.

ವೈಎಸ್ ಡಿ-/ಇಬಿಬಿ/53/2020

(ಸಿ. ಟಿ. ರವಿ)

ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 132 ಸಲೆವಿ 2020

27

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:17.03.2020

18/3

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ **ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2043 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ **ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2043 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

17/03/2020
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2043

ಉತ್ತರಿಸಬೇಕಾದ ದಿನಾಂಕ : 18.03.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು

ಕ್ರಸಂ	ಪ್ರಶ್ನೆಗಳು	ಉತ್ತರಗಳು
ಅ.	ಮರಣ ಹೊಂದಿದ ಜಾನುವಾರುಗಳಿಗೆ ವಿಮೆ ಯೋಜನೆಯು ಈಗಲೂ ಚಾಲ್ತಿಯಲ್ಲಿದೆಯೇ;ಇಲ್ಲದಿದ್ದಲ್ಲಿ ಯಾವ ಕಾರಣಕ್ಕೆ ನಿಲ್ಲಿಸಲಾಗಿದೆ;	ಚಾಲ್ತಿಯಲ್ಲಿದೆ
ಆ	ಈಗಾಗಲೇ ಮರಣ ಹೊಂದಿದ ಜಾನುವಾರುಗಳಿಗೆ ವಿಮೆ ಪಡೆಯಲು ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಲಾಗಿದೆಯೇ; ಹಾಗಾದರೆ, ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ಮತ್ತು ಎಷ್ಟು ಮೊತ್ತ ಬಾಕಿ ಇದೆ; ಯಾವಾಗ ಇದನ್ನು ನೀಡಲಾಗುವುದು ?	ಹೌದು ಜಾನುವಾರು ವಿಮಾ ಯೋಜನೆಯನ್ನು ವಿಮಾ ಕಂಪನಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಮರಣ ಹೊಂದಿದ ಜಾನುವಾರುಗಳ ವಿಮಾ ಕ್ಲೇಮುಗಳನ್ನು ವಿಮಾ ಕಂಪನಿಗಳು ತೀರುವಳಿ ಮಾಡುತ್ತಿವೆ. 2019–20 ನೇ ಸಾಲಿನ ವಿವರಗಳು ಕೆಳಕಂಡಂತಿವೆ. (ಕೆಳಗಿನ ಕೋಷ್ಟಕ ನೋಡಿ) ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ವಹಿಸಲಾಗಿದೆ.

ಕ್ರಸಂ.	ವಿವರಗಳು	ಸಂಖ್ಯೆ/ ಮೊತ್ತ (ರೂ.ಗಳಲ್ಲಿ)
1.	ಸ್ವೀಕರಿಸಿದ ಕ್ಲೇಮುಗಳ ಸಂಖ್ಯೆ	1033
2.	ತೀರುವಳಿ ಮಾಡಿದ ಕ್ಲೇಮುಗಳ ಸಂಖ್ಯೆ	918
3.	ಬಾಕಿ ಇರುವ ಕ್ಲೇಮುಗಳ ಸಂಖ್ಯೆ	115
3.	ರೈತರಿಗೆ ಪಾವತಿಸಿದ ಮೊತ್ತ	
	ರೂ.3,68,23,500/–	

ಪಸಂಮೀ 132 ಸಲೆವಿ 2020

ಪ್ರಭು ಬಿ. ಚವ್ಹಾಣ್

ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,

ಕರ್ನಾಟಕ ಸರ್ಕಾರ

ಸಂ: ಟಿಡಿ 118 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

18/3

102

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಲಿಂಗೇಶ್ ಕೆ. ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1478 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಲಿಂಗೇಶ್ ಕೆ. ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1478 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1478

ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 18-03-2020

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ಹಾಸನ ನಗರದಲ್ಲಿ ಸುಮಾರು 100 ವರ್ಷಗಳ ಹಳೆಯದಾದ ಕರ್ನಾಟಕ ಇಂಪ್ಲಿಮೆಂಟೇಶನ್ ಫ್ಯಾಕ್ಟರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಾದೇಶಿಕ ಕಾರ್ಯಾಗಾರವಾಗಿ (ಬಸ್ಸುಗಳ ಬಾಡಿ ನಿರ್ಮಾಣ ಮಾಡುವ) ರೀಜನಲ್ ವರ್ಕ್‌ಶಾಪ್ ನವೀಕರಣ ಕಾಮಗಾರಿಗೆ ಅಂದಾಜು ಮೊತ್ತ ರೂ.42.00 ಕೋಟಿಗಳ ಅನುದಾನ ಮಂಜೂರಾಗಿದ್ದು, ರೂ.31.00 ಕೋಟಿಗಳಿಗೆ ಟೆಂಡರ್ ಕರೆದಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದಲ್ಲಿರುವ ಪ್ರಾದೇಶಿಕ ಕಾರ್ಯಾಗಾರವನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಕೆಲಸಗಳನ್ನು ಮತ್ತು ನೂತನ ಯಂತ್ರೋಪಕರಣಗಳನ್ನು ಅಳವಡಿಸುವ ಯೋಜನೆಗೆ ರೂ.42.00 ಕೋಟಿಗಳ ಯೋಜನಾ ವೆಚ್ಚದಲ್ಲಿ ಹಂತ ಹಂತವಾಗಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಕಾಮಗಾರಿ ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಯೋಜನೆಗೆ ರೂ.10.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.
ಆ)	ಹಾಸನ ಜಿಲ್ಲೆಯ ಹಾಸನ ನಗರದಲ್ಲಿ ಸುಮಾರು 100 ವರ್ಷಗಳ ಹಳೆಯದಾದ ಕರ್ನಾಟಕ ಇಂಪ್ಲಿಮೆಂಟೇಶನ್ ಫ್ಯಾಕ್ಟರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಾದೇಶಿಕ ಕಾರ್ಯಾಗಾರವಾಗಿ (ಬಸ್ಸುಗಳ ಬಾಡಿ ನಿರ್ಮಾಣ ಮಾಡುವ) ರೀಜನಲ್ ವರ್ಕ್‌ಶಾಪ್ ನವೀಕರಣ ಕಾಮಗಾರಿಯನ್ನು ಇ-ಪ್ರೊಕ್ಯೂರ್‌ಮೆಂಟ್‌ಗಳ ಮೂಲಕ ರೂ.31.00 ಕೋಟಿಗಳಿಗೆ ಟೆಂಡರ್ ಕರೆದಿರುವುದು ನಿಜವೇ; [illegible] ಭಾಗವಹಿಸಿದ್ದರು, ಟೆಂಡರ್ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದಲ್ಲಿರುವ ಪ್ರಾದೇಶಿಕ ಕಾರ್ಯಾಗಾರವನ್ನು ಅಭಿವೃದ್ಧಿಪಡಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕಟಣೆ ಸಂಖ್ಯೆ: 25/2019-20 ದಿನಾಂಕ: 19.11.2019 ರಂದು ರೂ.31.00 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಮುಕ್ತ ಟೆಂಡರ್‌ನಲ್ಲಿ 06 ಜನ ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ [illegible] ಪ್ರಗತಿಯಲ್ಲಿರುತ್ತದೆ. ತಾಂತ್ರಿಕ ಬಿಡ್‌ಗಳ ಪರಿಶೀಲನಾ ಕಾರ್ಯ ಪೂರ್ಣಗೊಂಡ ನಂತರವಷ್ಟೇ ತಾಂತ್ರಿಕವಾಗಿ ಅರ್ಹರಾಗಿರುವ ಗುತ್ತಿಗೆದಾರರ ವಿವರ ತಿಳಿಯುತ್ತದೆ.

ಇ)	ಕೆಲವು ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಸರಿಯಾಗಿ ದಾಖಲಾತಿಗಳನ್ನು ಸಲ್ಲಿಸದೆ ಮತ್ತು ಅರ್ಹತೆ ಇಲ್ಲದಿದ್ದರೂ ಸಹ ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿರುವುದು ನಿಜವೇ;	ಸದರಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಎಲ್ಲಾ ಗುತ್ತಿಗೆದಾರರು ಮುಕ್ತ ಅವಕಾಶ ಹೊಂದಿರುತ್ತಾರೆ. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರವೇ ಎಲ್ಲಾ ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ದಾಖಲಾತಿಗಳು ಟೆಂಡರ್ ನಿಬಂಧನೆಗಳ ಪ್ರಕಾರ ಕ್ರಮಬದ್ಧವಾಗಿದ್ದಲ್ಲಿ ಮಾತ್ರ ತಾಂತ್ರಿಕವಾಗಿ ಅರ್ಹಗೊಳಿಸಲಾಗುತ್ತದೆ. ಅರ್ಹಗೊಂಡ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುತ್ತದೆ.
ಈ)	ಹಾಗಿದ್ದಲ್ಲಿ, ಈಗಾಗಲೇ ಪ್ರಾರಂಭಿಸಿರುವ ಟೆಂಡರ್ ಪ್ರಕ್ರಿಯೆಗಳನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ಆಹ್ವಾನಿಸಲಾಗಿರುವ ಟೆಂಡರ್‌ನಲ್ಲಿ ಯಾವುದೇ ಲೋಪಗಳಿರುವುದಿಲ್ಲ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ಗಳನ್ನು ಪರಿಶೀಲಿಸಲಾಗುತ್ತಿದ್ದು, ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು. ಮುಂದುವರೆದು, ಸದರಿ ಯೋಜನೆಗೆ ಸರ್ಕಾರದಿಂದ ರೂ.10.00 ಕೋಟಿಗಳ ಅನುದಾನ ಮಾತ್ರ ಬಿಡುಗಡೆಯಾಗಿದ್ದು, ಉಳಿಕೆ ಮೊತ್ತವಾದ ರೂ.32.00 ಕೋಟಿಗಳ ಅನುದಾನದ ಅವಶ್ಯಕತೆಯಿರುತ್ತದೆ. ಸದರಿ ಯೋಜನೆಗೆ ಅನುದಾನದ ಕೊರತೆ ಇರುವುದರಿಂದ ಹಾಗೂ ನಿಗಮವು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಯೋಜನೆಯ ಹೆಚ್ಚುವರಿ ಮೊತ್ತವನ್ನು ಭರಿಸಲು ಕಷ್ಟಸಾಧ್ಯವಾಗುವುದರಿಂದ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳುವ ಬಗ್ಗೆ ಮರು ಪರಿಶೀಲಿಸಿ, ಆರ್ಥಿಕ ಸ್ಥಿತಿಗತಿ ಆಧಾರದ ಮೇಲೆ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಸಂಖ್ಯೆ: ಟಿಡಿ 118 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 117 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

u 18/3

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಭಯ್ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1473 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಭಯ್ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1473 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala.S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1473

ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 18-03-2020

ಕ್ರಸ	ಪ್ರಶ್ನೆ	ಉತ್ತರ
ಅ	ಬೆಳಗಾವಿ ನೂತನ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿ ಯಾವಾಗ ಆರಂಭವಾಗಿದೆ; ಎಷ್ಟು ಮೊತ್ತದ ಕಾಮಗಾರಿಯು ಇದಾಗಿದೆ; ಗುತ್ತಿಗೆ ನಿಯಮಗಳಂತೆ ಯಾವಾಗ ಮುಗಿಯಬೇಕಾಗಿತ್ತು; ಇನ್ನೂ ಮುಗಿಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ವಿಳಂಬ ಮಾಡಿರುವವರ ಮೇಲೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆಯೇ;	➢ ಬೆಳಗಾವಿ ನೂತನ ಬಸ್ ನಿಲ್ದಾಣದ ಕಾಮಗಾರಿಯು ದಿನಾಂಕ: 27-02-2017ರಂದು ಪ್ರಾರಂಭಗೊಂಡಿದ್ದು, ಕಾಮಗಾರಿಯ ಅಂದಾಜು ಮೊತ್ತ ರೂ.30.00 ಕೋಟಿಗಳಾಗಿರುತ್ತದೆ. ➢ ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಹೊರತುಪಡಿಸಿ 24 ತಿಂಗಳುಗಳಾಗಿದ್ದು, ದಿನಾಂಕ: 26-11-2019ರಂದು ಪೂರ್ಣಗೊಳ್ಳಬೇಕಿತ್ತು. ➢ ಬೆಳಗಾವಿ ಕೇಂದ್ರ ಬಸ್ ನಿಲ್ದಾಣವನ್ನು ನಿರ್ಮಿಸುವ ಕಾಮಗಾರಿ ಸ್ಥಳದಲ್ಲಿ ಹಾಲಿ ಬಸ್ ನಿಲ್ದಾಣವು ಕಾರ್ಯಾಚರಣೆಯಲ್ಲಿದ್ದು, ಹಂತ ಹಂತವಾಗಿ ನೂತನ ಬಸ್ ನಿಲ್ದಾಣಕ್ಕೆ ನಿವೇಶನವನ್ನು ಬಿಟ್ಟು ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಹಾಗೂ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ನೂತನ ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಚಾಲ್ತಿಯಲ್ಲಿದ್ದು, ನಗರ ಸಾರಿಗೆ ಕಾರ್ಯಾಚರಣೆಯನ್ನೂ ಸಹ ಕೇಂದ್ರ ಬಸ್ ನಿಲ್ದಾಣದ ಭಾಗಶಃ ಆವರಣದಲ್ಲಿಯೇ ಸ್ಥಳಾಂತರಿಸಲಾಗಿದೆ. ಪ್ರಯಾಣಿಕರ ಹಿತದೃಷ್ಟಿಯಿಂದ ಬಸ್ ನಿಲ್ದಾಣದ ನಿವೇಶನವನ್ನು ಗುತ್ತಿಗೆದಾರರಿಗೆ ಹಂತ ಹಂತವಾಗಿ ಬಿಟ್ಟುಕೊಡಬೇಕಿದ್ದು, ಸದರಿ ಕಾರಣಗಳಿಂದ ಕಾಮಗಾರಿ ವಿಳಂಬವಾಗಿರುತ್ತದೆ. ಈ ಕಾಮಗಾರಿಯನ್ನು ಜುಲೈ-2020ರ ತಿಂಗಳಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
		[illegible] ಕಾಮಗಾರಿ ವಿಳಂಬವಾಗಿದ್ದು, ಟೆಂಡರ್ ನಿಯಮಾವಳಿಯಂತೆ ಕ್ರಮ ಜರುಗಿಸಲಾಗುತ್ತದೆ.

ಆ	ಬೆಳಗಾವಿ ನಗರದಿಂದ ಚೆನ್ನೈ, ತಿರುಪತಿ, ನಾಸಿಕ್, ಮುಂಬೈ, ಬೆಂಗಳೂರು, ಹೈದ್ರಾಬಾದ್ ಮುಂತಾದ ದೂರದ ನಗರಗಳಿಗೆ ಸಂಚರಿಸುತ್ತಿರುವ ರಾಜಹಂಸ, ಕ್ಲಬ್‌ಕ್ಲಾಸ್, ಗೋಲ್ಡ್‌ಕ್ಲಾಸ್, ಕರೋನಾ ಸ್ಲೀಪರ್ ಸಾರಿಗೆಗಳೆಷ್ಟು; ಅಂತಹ ಸಾರಿಗೆಗಳಿಗೆ ಬಳಸುತ್ತಿರುವ ವಾಹನಗಳು ಎಷ್ಟು ಅವು ಯಾವುವು; ಅವು ಕ್ರಮಿಸಿದ ಕಿ.ಮೀಗಳು ಎಷ್ಟು; ಅವು ನಿಷ್ಕ್ರಿಯ ಹಂತವನ್ನು ತಲುಪಿವೆಯೇ; (ವಿವರ ನೀಡುವುದು)	ಬೆಳಗಾವಿ ನಗರದಿಂದ ಚೆನ್ನೈ, ತಿರುಪತಿ, ನಾಸಿಕ್, ಮುಂಬೈ, ಬೆಂಗಳೂರು, ಹೈದ್ರಾಬಾದ್ ಮುಂತಾದ ದೂರದ ನಗರಗಳಿಗೆ ಸಂಚರಿಸುತ್ತಿರುವ ರಾಜಹಂಸ, ಕ್ಲಬ್‌ಕ್ಲಾಸ್, ಗೋಲ್ಡ್‌ಕ್ಲಾಸ್, ಕರೋನಾ ಸ್ಲೀಪರ್ ಒಟ್ಟು 32 ವಾಹನಗಳು ಕಾರ್ಯಾಚರಣೆಯಲ್ಲಿದೆ. ವಾಹನ ಸಂಖ್ಯೆ ಹಾಗೂ ಕ್ರಮಿಸಿದ ಕಿ.ಮೀ.ಗಳು ವಿವರವನ್ನು **"ಅನುಬಂಧದಲ್ಲಿ"** ಇರಿಸಲಾಗಿದೆ.
ಇ	ಇಂತಹ ಮಾರ್ಗಗಳ ಮೇಲೆ ಅದೇ ಹಳೆಯ ವಾಹನಗಳನ್ನು ಬಳಸುತ್ತಿರುವುದರಿಂದ ಪ್ರಯಾಣಿಕರಿಗೆ ಹಾಗೂ ಸಾರಿಗೆ ಸಿಬ್ಬಂದಿಗಳು ಅನುಭವಿಸುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ವಾಹನಗಳ ಬದಲಾವಣೆಗೆ ಕೈಗೊಂಡಿರುವ ಕ್ರಮಗಳು ಏನು;	ಒಟ್ಟು 32 ವಾಹನಗಳಲ್ಲಿ 06 ವಾಹನಗಳು ನಿಗದಿತ ಕಿ.ಮೀ. ಕ್ರಮಿಸಿದ್ದು, ಮುಂದಿನ ದಿನಗಳಲ್ಲಿ ಸಂಸ್ಥೆಯ ಕಾರ್ಯಯೋಜನೆಯನ್ವಯ ಸದರಿ ವಾಹನಗಳನ್ನು ಬದಲಾಯಿಸಿ, ಹೊಸ ವಾಹನಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತದೆ.
ಈ	ಬೆಳಗಾವಿ ವಿಭಾಗಕ್ಕೆ ಮೇಲೆ ವಿವರಿಸಿದ ಸಾರಿಗೆ ಮಾರ್ಗಗಳಿಗೆ ಹೊಸ ವಾಹನಗಳನ್ನು ಒದಗಿಸುವ ಉದ್ದೇಶವು ಸರಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವಾಗ ಮತ್ತು ಎಷ್ಟು ವಾಹನಗಳನ್ನು ಒದಗಿಸುವುದು?	ಪ್ರಸಕ್ತ ಸಾಲಿನಲ್ಲಿ ಬೆಳಗಾವಿ ವಿಭಾಗಕ್ಕೆ 06 ವೋಲ್ವೋ ಮಲ್ಟಿ ಎಕ್ಸೆಲ್ ಮಾದರಿ ಹೊಸ ವಾಹನಗಳನ್ನು ಪೂರೈಸಲಾಗಿದೆ; 1. ಬೆಳಗಾವಿ–ಹೈದ್ರಾಬಾದ (02). 2. ಬೆಳಗಾವಿ–ತಿರುಪತಿ (02). 3. ಬೆಳಗಾವಿ–ನಾಸಿಕ್ (02) ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಂಸ್ಥೆಯ ಕಾರ್ಯ ಯೋಜನೆಯನ್ವಯ ಹೊಸ ವಾಹನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ: ಟಿಡಿ 117 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ

Sl. No	Depot	Vehicle No	DOC	Schd No	Route	Schd Kms	Night or Day Service	Prog Kms (As on Feb-20)	Remarks
1	BGV-I	KA42F1389	6/20/2012	13/14	Banglore	1082	Day service	1462948	Multi Axle Volvo
2	BGV-I	KA42F1390	6/20/2012	13/14	Banglore	1082	Day service	1541237	Multi Axle Volvo
3	BGV-I	KA22F2036	9/27/2014	1-Feb	Banglore	1074	Night service	1045345	A/C Sleeper Coach
4	BGV-I	KA22F2037	9/27/2014	1-Feb	Banglore	1074	Night service	1009148	A/C Sleeper Coach
5	BGV-I	KA22F2069	7/24/2015	3-Apr	Banglore	1082	Night service	843787	A/C Sleeper Coach
6	BGV-I	KA22F2077	9/15/2015	3-Apr	Banglore	1082	Night service	780454	A/C Sleeper Coach
7	BLH	KA25F3403	1/12/2018	1-Feb	Banglore	1056	Night service	391664	Non A/C SL Coach
8	BLH	KA25F3404	1/12/2018	1-Feb	Banglore	1056	Night service	392401	Non A/C SL Coach
9	RMD	KA22F2208	12/18/2017	5-Jun	Banglore	1058	Night service	448908	Non A/C SL Coach
10	RMD	KA22F2209	12/18/2017	5-Jun	Banglore	1058	Night service	449786	Non A/C SL Coach
11	BGV-I	KA22F1995	2/25/2014	5-Jun	Banglore	1070	Night service	1212305	Rajahamsa
12	BGV-I	KA22F1996	2/25/2014	5-Jun	Banglore	1070	Night service	1242001	Rajahamsa
13	BGV-I	KA22F2221	1/6/2018	27/28	Chennai	1768	Day service	639425	Multi Axle Volvo
14	BGV-I	KA22F2222	1/6/2018	27/28	Chennai	1768	Day service	650055	Multi Axle Volvo
15	BGV-I	KA22F2275	12/31/2019	33/34	Hydrabad	1222	Night service	31980	Multi Axle Volvo
16	BGV-I	KA22F2276	12/31/2019	33/34	Hydrabad	1222	Night service	28806	Multi Axle Volvo
17	BGV-I	KA22F2079	12/10/2015	39/40	Hydrabad	1200	Night service	886702	A/C Sleeper Coach
18	BGV-I	KA22F2080	12/10/2015	39/40	Hydrabad	1200	Night service	848277	A/C Sleeper Coach
19	BGV-I	KA22F2277	1/1/2020	29/30	Tirupati	1568	Night service	33552	Multi Axle Volvo
20	BGV-I	KA22F2278	1/9/2020	29/30	Tirupati	1568	Night service	31520	Multi Axle Volvo
21	BGV-I	KA22F2285	1/24/2020	41/42	Nasik	1142	Night service	16484	Multi Axle Volvo
22	BGV-I	KA22F2286	1/24/2020	41/42	Nasik	1142	Night service	15220	Multi Axle Volvo
23	BGV-I	KA22F2078	9/15/2015	45/46	Borivili	1078	Night service	842236	A/C Sleeper Coach
24	BGV-I	KA31F1372	12/28/2015	45/46	Borivili	1078	Night service	732120	A/C Sleeper Coach
25	BGV-I	KA22F2083	2/20/2016	17/18	Mysore	1132	Night service	817584	A/C Sleeper Coach
26	BGV-I	KA22F2084	2/20/2016	17/18	Mysore	1132	Night service	799082	A/C Sleeper Coach
27	BGV-I	KA22F2202	12/12/2017	19/20	Mysore	1142	Night service	459016	Non A/C SL Coach
28	BGV-I	KA22F2203	12/12/2017	19/20	Mysore	1142	Night service	451402	Non A/C SL Coach
29	BGV-I	KA22F2214	12/29/2017	35/36	Bidar	1010	Night service	394477	Non A/C SL Coach
30	BGV-I	KA22F2215	12/29/2017	35/36	Bidar	1010	Night service	384427	Non A/C SL Coach
31	BGV-I	KA25F3119	3/26/2014	23/24	Ballary	676	Night service	801023	Non A/C SL Coach
32	BGV-I	KA25F3120	3/26/2014	23/24	Ballary	676	Night service	879952	Non A/C SL Coach

ಕರ್ನಾಟಕ ಸರ್ಕಾರ

ಸಂ: ಟಿಡಿ 91 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 17.03.2020.

18/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯ ವಿಠ್ಠಲಗೌಡ ಪಾಟೀಲ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1786 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯ ವಿಠ್ಠಲಗೌಡ ಪಾಟೀಲ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1786 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1786

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 18-03-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು, ಸುಮಾರು 50 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಹಾಗೂ ಜಿಲ್ಲೆಯಲ್ಲಿಯೇ 2ನೇ ಅತಿದೊಡ್ಡ ನಗರವಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಹೌದು
ಆ	ಈ ನಗರ ಪ್ರದೇಶವು ಭೌಗೋಳಿಕವಾಗಿ ಅತ್ಯಂತ ವೇಗವಾಗಿ ವಿಸ್ತಾರವನ್ನು ಹೊಂದುತ್ತಿದ್ದು ಸಾರ್ವಜನಿಕರು ವಿದ್ಯಾರ್ಥಿಗಳು ಮಹಿಳೆಯರು, ವೃದ್ಧರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸಲು ದುಬಾರಿ ಹಣ ಪಾವತಿಸಿ ಖಾಸಗಿ ವಾಹನಗಳಲ್ಲಿ ಸಂಚರಿಸುವುದು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಇಂಡಿ ಘಟಕದಿಂದ ಒಟ್ಟು 104 ಅನುಸೂಚಿಗಳಿಂದ ಒಟ್ಟು 572 ಸಾರಿಗೆ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸಾರಿಗೆಗಳ ಪೈಕಿ 74 ಸಾಮಾನ್ಯ ಅನುಸೂಚಿಗಳು ಕಾರ್ಯಾಚರಣೆಯಲ್ಲಿರುತ್ತವೆ. ಸದರಿ ಸಾರಿಗೆಗಳು ಇಂಡಿ ಪಟ್ಟಣದ ಮೂಲಕ ಕಾರ್ಯಾಚರಿಸುತ್ತಿವೆ. ಸಾಮಾನ್ಯ ಸಾರಿಗೆಗಳಿಗೆ ಉಪಹಂತಕ್ಕೆ ರೂ.5.00 ಪ್ರಯಾಣ ದರ ನಿಗದಿಪಡಿಸಲಾಗಿದೆ. ಇಂಡಿ ಪಟ್ಟಣದ ಪ್ರಯಾಣಿಕರು ಸದರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.
ಇ	ಹಾಗಾದರೆ, ಇಂಡಿ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ನಗರ ಸಾರಿಗೆ ಬಸ್ಸುಗಳನ್ನು ಸಂಚರಿಸಲು ಮಂಜೂರಾತಿ ನೀಡಲು ಆಸಕ್ತಿ ಹೊಂದಿದೆಯೇ;	ಪ್ರಥಮ ಹಂತದಲ್ಲಿ ಆಯ್ದ ನಗರಗಳಲ್ಲಿ ನಗರ ಭೂ ಸಾರಿಗೆ ನಿರ್ದೇಶನಾಲಯವು ಕೈಗೊಂಡ CTTP/CMP ಅಧ್ಯಯನ ವರದಿ ಹಾಗೂ ಈ.ಕ.ರ.ಸಾ.ಸಂಸ್ಥೆಯ ವತಿಯಿಂದ ಕೈಗೊಂಡಿರುವ ಸಮೀಕ್ಷೆಗಳ ಆಧಾರದ ಮೇಲೆ ನಗರ ಸಾರಿಗೆ ಸೇವೆಗಳ ಕಾರ್ಯಾಚರಣೆ ಮಾಡಲಾಗುತ್ತಿದೆ. ಇನ್ನುಳಿದ ನಗರಗಳಲ್ಲಿ ಸಮೀಕ್ಷೆ ಕೈಗೊಂಡು ಸಮೀಕ್ಷೆಗಳ ಫಲಿತಾಂಶಗಳ ಆಧಾರದ ಮೇಲೆ ಹಾಗೂ ಅನುದಾನದ ಲಭ್ಯತೆಗನುಸಾರ ನಗರ ಸಾರಿಗೆ ಸೇವೆಗಳನ್ನು
ಈ	ಹೊಂದಿದ್ದರೆ, ಇಂಡಿ ಪಟ್ಟಣದಲ್ಲಿ ಯಾವಾಗಿನಿಂದ ನಗರ ಸಾರಿಗೆ ಬಸ್ಸುಗಳನ್ನು ಸಂಚಾರಕ್ಕೆ ಬಿಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	

ಸಂಖ್ಯೆ: ಟಿಡಿ 91 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪಂರಾ 167 ಜಿಪಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17-03-2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಲಾಲಾಜಿ ಆರ್.ಮೆಂಡನ್(ಕಾಪು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1917ಕ್ಕೆ ಉತ್ತರಿಸುವ ಬಗ್ಗೆ.

*****

ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಲಾಲಾಜಿ ಆರ್.ಮೆಂಡನ್(ಕಾಪು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1917ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,
17/03/2020
(ಸಿ. ಮಂಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ) ಗ್ರಾಅಪ ಇಲಾಖೆ.

ಕರ್ನಾಟಕ ವಿಧಾನ ಸಭೆ

15ನೇ ವಿಧಾನ ಸಭೆ

6ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1917
ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)
ಉತ್ತರಿಸುವ ದಿನಾಂಕ	:	18-03-2020
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟ ಉಡುಪಿ ಜಿಲ್ಲೆ ಕಾಪು ತಾಲ್ಲೂಕು ಸೇರಿದಂತೆ ರಾಜ್ಯದಲ್ಲಿ ಹೊಸ ತಾಲ್ಲೂಕುಗಳು ಕಾರ್ಯಾರಂಭ ಆಗಿದ್ದರೂ ತಾಲ್ಲೂಕು ಪಂಚಾಯತ್ ರಚನೆ ಆಗಿರುವುದಿಲ್ಲ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;	ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 215 ಜಿಪಸ 2018(33), ದಿನಾಂಕ:14-10-2019ರಲ್ಲಿ ಕಾಪು ತಾಲ್ಲೂಕು ಪಂಚಾಯತಿಯನ್ನು ರಚಿಸಿ ಆದೇಶ ಹೊರಡಿಸಿದೆ.
(ಆ)	ಹೊಸ ತಾಲ್ಲೂಕು ಪಂಚಾಯತ್ ಕಟ್ಟಡ ಹಾಗೂ ಸಿಬ್ಬಂದಿ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?	ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 215 ಜಿಪಸ 2018(ಪಿ-3), ದಿನಾಂಕ:01-01-2020ರಲ್ಲಿ ಹೊಸದಾಗಿ ರಚಿಸಲಾಗಿರುವ ತಾಲ್ಲೂಕು ಪಂಚಾಯಿತಿಗಳನ್ನು ಕಾರ್ಯಾಚರಣೆಗೊಳಿಸುವ ಕುರಿತು ಈ ಕೆಳಕಂಡ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ವಹಿಸಲು ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. 1. ಹೊಸದಾಗಿ ರಚನೆಗೊಂಡ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕರ ಹುದ್ದೆಗೆ ಸರ್ಕಾರದಿಂದ ನೇಮಿಸದಿದ್ದರೆ ಸಮಾನಾಂತರ ಹುದ್ದೆಗಳನ್ನು ಹೊಂದಿರುವಂತಹ ಅಧಿಕಾರಿಯನ್ನು ಹೆಚ್ಚುವರಿ ಪ್ರಭಾರದಲ್ಲಿರಿಸುವುದು.

		2. ಮೂಲ ತಾಲ್ಲೂಕು ಪಂಚಾಯಿತಿಯಲ್ಲಿರುವ ಅಧಿಕಾರಿ/ ಸಿಬ್ಬಂದಿಯನ್ನು ಅಥವಾ ಹೊಸದಾಗಿ ರಚನೆಯಾಗಿರುವಂತಹ ತಾಲ್ಲೂಕು ಪಂಚಾಯಿತಿಯ ಕೇಂದ್ರಸ್ಥಾನದಲ್ಲಿ ಇರುವ ಜಿಲ್ಲಾ ಪಂಚಾಯಿತಿಯ ಅಧೀನ ಕಛೇರಿಯ ಸಮಾನಾಂತರ ಅಧಿಕಾರಿ/ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೇಮಿಸಿ ಆದೇಶಿಸುವಂತೆ ಸೂಚಿಸಿದೆ. 3. ಹೊಸ ತಾಲ್ಲೂಕು ಪಂಚಾಯಿತಿಯ ಕೇಂದ್ರಸ್ಥಾನವು ಗ್ರಾಮ ಪಂಚಾಯಿತಿಯಾಗಿದ್ದರೆ, ಆ ಕೇಂದ್ರಸ್ಥಾನದ ಗ್ರಾಮ ಪಂಚಾಯಿತಿ ಕಟ್ಟಡದಲ್ಲಿಯೇ ತಾಲ್ಲೂಕು ಪಂಚಾಯಿತಿಯನ್ನು ತೆರೆಯುವುದು. ಒಂದು ವೇಳೆ ಪಟ್ಟಣ ಪಂಚಾಯಿತಿ ಯಾಗಿದ್ದರೆ, ಮೊದಲನೇ ಆದ್ಯತೆಯಾಗಿ ಇತರೆ ಸರ್ಕಾರಿ ಕಛೇರಿಗಳಲ್ಲಿ ಸ್ಥಳ ಗುರುತಿಸಿ, ಇಲ್ಲದಿದ್ದರೆ ಸೌಲಭ್ಯಗಳನ್ನು ಹೊಂದಿರುವಂತಹ ಬಾಡಿಗೆ ಕಟ್ಟಡವನ್ನು ಗುರುತಿಸಿ ತಾತ್ಕಾಲಿಕವಾಗಿ ತಾಲ್ಲೂಕು ಪಂಚಾಯಿತಿ ಕಟ್ಟಡವನ್ನು ತೆರೆಯುವಂತೆ ತಿಳಿಸಿದೆ. 4. ಹೊಸ ತಾಲ್ಲೂಕು ಪಂಚಾಯಿತಿ ಕಟ್ಟಡವನ್ನು ನಿರ್ಮಿಸಲು ಅಗತ್ಯವಾದಂತಹ ವಿಸ್ತೀರ್ಣದ ನಿವೇಶನವನ್ನು ಗುರುತಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ತಿಳಿಸಿದೆ. 5. ತಾತ್ಕಾಲಿಕವಾಗಿ ಕಛೇರಿ ತೆರೆಯಲು ಗುರುತಿಸಿರುವ ಸರ್ಕಾರಿ ಕಟ್ಟಡಗಳಿಗೆ ದುರಸ್ಥಿ ಅಥವಾ ವಿಸ್ತೀರ್ಣಕ್ಕೆ ಮತ್ತು ಕಛೇರಿಗೆ ಅಗತ್ಯವಿರುವ ಪೀಠೋಪಕರಣಗಳಿಗೆ ಬೇಕಾಗುವಂತಹ ಅನುದಾನದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.
		6. ಮೂಲ ತಾಲ್ಲೂಕು ಪಂಚಾಯಿತಿಯಲ್ಲಿ ಉಳಿದಿರುವಂತಹ ಆವರ್ತಕ ಮತ್ತು ಅನಾವರ್ತಕ ಅನುದಾನವನ್ನು ಹೊಸ ತಾಲ್ಲೂಕು ಪಂಚಾಯಿತಿ ಮತ್ತು ಹಳೆ ತಾಲ್ಲೂಕು ಪಂಚಾಯಿತಿಗಳ ನಡುವೆ ವಿಭಜಿಸಿ ನೀಡುವಂತೆ ತಿಳಿಸಿದೆ.

		7. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:RDC-EGS/29/2020, ದಿನಾಂಕ: 05-03-2020ರಲ್ಲಿ ಪ್ರತಿ ಹೊಸ ತಾಲ್ಲೂಕಿಗೆ ತಾಲ್ಲೂಕ್ MIS ಸಂಯೋಜಕರು, ತಾಲ್ಲೂಕು IEC ಸಂಯೋಜಕರು, ತಾಲ್ಲೂಕು ತಾಂತ್ರಿಕ ಸಂಯೋಜಕರು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಸೃಷ್ಟಿಸಲಾಗಿದೆ. ಇವರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಇವರಿಗೆ ನೀಡಿದೆ.

ಸಂಖ್ಯೆ:ಗ್ರಾಅಪಂರಾ 167 ಜಿಪಸ 2020

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪಂರಾ 168 ಜಿಪಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17-03-2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಭೀಮಾ ನಾಯ್ಕ ಎಲ್.ಬಿ.ಪಿ(ಹಗರಿಬೊಮ್ಮನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2233ಕ್ಕೆ ಉತ್ತರಿಸುವ ಬಗ್ಗೆ.

*****

ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಭೀಮಾ ನಾಯ್ಕ ಎಲ್.ಬಿ.ಪಿ (ಹಗರಿಬೊಮ್ಮನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2233ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,
17/03/2020
(ಸಿ. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ) ಗ್ರಾಅಪ ಇಲಾಖೆ.

ಕರ್ನಾಟಕ ವಿಧಾನ ಸಭೆ

15ನೇ ವಿಧಾನ ಸಭೆ

6ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2233

ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಭೀಮಾ ನಾಯ್ಕ ಎಲ್.ಬಿ.ಪಿ.(ಹಗರಿಬೊಮ್ಮನಹಳ್ಳಿ)

ಉತ್ತರಿಸುವ ದಿನಾಂಕ : 18-03-2020

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರ
(ಅ)	ರಾಜ್ಯದಲ್ಲಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ಸರ್ಕಾರಿ ವಾಹನ ಸೌಲಭ್ಯ ಇಲ್ಲದಿರುವ ಕಾರಣ ಆಯಾ ತಾಲ್ಲೂಕಿನ ಸಮಸ್ಯೆಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
(ಆ)	ಹಾಗಿದ್ದಲ್ಲಿ, ಸರ್ಕಾರಿ ವಾಹನ ಸೌಲಭ್ಯ ಒದಗಿಸುವ ಯೋಜನೆ ಯಾವ ಹಂತದಲ್ಲಿದೆ; ಸರ್ಕಾರ ಕೈಗೊಂಡಿರುವ ಕ್ರಮವೇನು;	ಹೊಸ ಸರ್ಕಾರಿ ವಾಹನಗಳನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಖರೀದಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.
(ಇ)	ಯಾವಾಗ ಸರ್ಕಾರಿ ವಾಹನ ಸೌಲಭ್ಯ ಒದಗಿಸಲಾಗುವುದು?(ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ:ಗ್ರಾಅಪಂರಾ 168 ಜಿಪಸ 2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 134 ಸಲೆವಿ 2020

166

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:17.03.2020

18/3

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ ಎಸ್.ಎನ್ ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1262 ಕ್ಕೆ ಉತ್ತರ ಕಳುಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಎಸ್.ಎನ್ ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1262 ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

17/03/2020
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಎಸ್.ಎನ್ ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ)
ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1262
ಉತ್ತರಿಸಬೇಕಾದ ದಿನಾಂಕ	:	18.03.2020.
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯದ ರೈತರ ಆರ್ಥಿಕತೆಯ ಪರ್ಯಾಯವಾದ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಯಾವುವು (ವಿವರ ನೀಡುವುದು);	ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಲು ರೈತರಿಗೆ ಅನುಕೂಲವಾಗುವಂತೆ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ 1. ಹಾಲು ಉತ್ಪಾದಕರಿಗೆ ಉತ್ತೇಜನ ಯೋಜನೆಯಲ್ಲಿ ಹಾಲು ಉತ್ಪಾದನೆಗೆ ಉತ್ತೇಜನ ನೀಡಲು ಕರ್ನಾಟಕ ಹಾಲು ಮಹಾ ಮಂಡಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್‌ಗೆ ರೂ.5/- ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 2. ಕೃತಕ ಗರ್ಭಧಾರಣೆ ಮುಖಾಂತರ ತಳಿ ಉನ್ನತೀಕರಣಗೊಳಿಸಲಾಗುತ್ತಿದೆ. 3. ಪಶು ಚಿಕಿತ್ಸಾ ಶಿಬಿರಗಳ ಮೂಲಕ ಜಾನುವಾರುಗಳ ಆರೋಗ್ಯ ರಕ್ಷಣೆ 4. ಖನಿಜ ಮಿಶ್ರಣ ವಿತರಣೆ ಮೂಲಕ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವುದು. 5. ಹೆಚ್ಚು ಇಳುವರಿ ನೀಡುವ ಮೇವಿನ ಬೀಜಗಳ ವಿತರಣೆ ಮುಖಾಂತರ ಉತ್ಪಾದನೆಗೆ ಒತ್ತು ಕೊಡುವುದು. 6. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತದಲ್ಲಿ ಹೈನು ಘಟಕಗಳನ್ನು ವಿತರಿಸುವುದು. 7. ಮಹಿಳೆಯರಿಗಾಗಿ ಪಶುಸಂಗೋಪನೆ ಕಾರ್ಯಕ್ರಮ.

ಕ್ರ.ಸಂ	ಘಟಕದ ವಿವರ	ಘಟಕದ ಮೊತ್ತ	ಸಹಾಯಧನ	
			ಪ.ಜಾ/ಪ.ಪಂ	ಸಾಮಾನ್ಯ
1	ಹೈನುಗಾರಿಕೆ ಘಟಕ (ಒಂದು ಮಿಶ್ರ ತಳಿ ಹಸು ಅಥವಾ ಸುಧಾರಿತ ಎಮ್ಮೆ)	60000	54000	30000

ಆ	ಕಾಲುಬಾಯಿ ಜ್ವರ ಮತ್ತಿತರ ರೋಗಗಳಿಂದ ಪಶುಗಳನ್ನು ಸಂರಕ್ಷಿಸಲು ಮತ್ತು ರೋಗಗಳು ಹರಡುವ ಮುಂಚೆ ರೋಗ ಪ್ರತಿಬಂಧಕ ಕ್ರಮಗಳನ್ನು ಅನುಸರಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಯಾವ ರೀತಿಯ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗಿದೆ.	ಹೌದು, ಕಾಲುಬಾಯಿ ಜ್ವರ ಮತ್ತಿತರ ರೋಗಗಳಿಂದ ಜಾನುವಾರುಗಳನ್ನು ಸಂರಕ್ಷಿಸಲು ಮತ್ತು ರೋಗ ಹರಡದಂತೆ ತಡೆಗಟ್ಟಲು, ವರ್ಷಕ್ಕೆ ಎರಡು ಬಾರಿ ಲಸಿಕೆ ಕಾರ್ಯಕ್ರಮದ ಮೂಲಕ ರೋಗ ಪ್ರತಿಬಂಧಕ ಕ್ರಮಗಳನ್ನು ಕೈಗೊಳಲಾಗುತ್ತಿದೆ. ಡಿಸೆಂಬರ್ 2019ರ ಅಂತ್ಯಕ್ಕೆ 108.73ಲಕ್ಷ ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆ ಹಾಕಲಾಗಿದೆ. ಲಸಿಕೆ ವೇಳಾಪಟ್ಟಿ ಅನುಬಂಧ-1 ರಲ್ಲಿ ಲಗತ್ತಿಸಿದೆ.
ಇ	ರೋಗ ಬಾಧೆಯಿಂದ ಮೃತಪಟ್ಟ ರಾಸು (ಹಸು, ಎತ್ತು, ಕೋಳಿ, ಕುರಿ) ಇತ್ಯಾದಿಗಳಿಗೆ ಸರ್ಕಾರ ನೀಡುವ ಪರಿಹಾರದ ಮೊತ್ತ ಎಷ್ಟು;	ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ ಜಾನುವಾರುಗಳ ಸಾವಿನಿಂದ ನಷ್ಟ ಅನುಭವಿಸಿದ ರೈತರಿಗೆ ಸಂಕಷ್ಟ ನಿವಾರಣೆಗಾಗಿ ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ ಅಡಿ ಪ್ರತಿ ರಾಸುವಿಗೆ ರೂ.10000/- ಪರಿಹಾರಧನ ನೀಡಲಾಗುತಿದೆ. 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ / ಮೇಕೆಗೆ ರೂ.5000/- ಪರಿಹಾರಧನ ಹಾಗೂ 6 ತಿಂಗಳ ಒಳಗಿನ ಕುರಿ ಮತ್ತು ಮೇಕೆಗಳ ಆಕಸ್ಮಿಕ ಮರಣಕ್ಕೆ ರೂ.2500/- ಪರಿಹಾರ ಧನ ನೀಡಲಾಗುತ್ತಿದೆ.
ಈ	ಈ ಕೋಲಾರ ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ; ಇವುಗಳಿಗೆ ಪರಿಹಾರದ ಮೊತ್ತವೆಷ್ಟು (ವಿವರ ನೀಡುವುದು)?	ಕೋಲಾರ ಜಿಲ್ಲೆಯಲ್ಲಿ 2019-20 ನ ಸಾಲಿನಲ್ಲಿ 237 ರಾಸುಗಳು (ಹಸು, ಎಮ್ಮೆ) ಮೃತಪಟ್ಟಿದ್ದು, ಇದರಲ್ಲಿ 135 ಹಸು ಎಮ್ಮೆಗಳಿಗೆ ಪರಿಹಾರ ಧನವಾಗಿ 13.50 ಲಕ್ಷ ರೂ.ಗಳು ಹಾಗೂ 2535 ಕುರಿ/ಮೇಕೆಗಳಿಗೆ 126.75 ಲಕ್ಷ ರೂ.ಗಳನ್ನು ಪರಿಹಾರ ಧನವನ್ನಾಗಿ ವಿತರಿಸಲಾಗಿದೆ.

ಪಸಂಮೀ 134 ಸಲೆವಿ 2020

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,

ಅನುಬಂಧ–1

ಲಸಿಕಾ ವೇಳಾಪಟ್ಟಿ

(ಸರ್ಕಾರದ ಆದೇಶ ಸಂಖ್ಯೆ:ಪಸಂಮೀ/173/ಪಹಾಯೋ/2016 ದಿನಾಂಕ:24.02.2016 ಮತ್ತು 21.02.2017ರ ಪ್ರಕಾರ)

ಕ್ರ ಸಂ	ರೋಗದ ಹೆಸರು	ಜಾನುವಾರುಗಳು	ಲಸಿಕೆ ಮಾಡಬೇಕಾದ ಮಾಹೆ	ಲಸಿಕೆ ಮಾಡಬೇಕಾಗಿರುವ ವ್ಯಾಪ್ತಿ
1	ನೆರಡಿ ರೋಗ	ಎಲ್ಲಾ ದನ, ಎಮ್ಮೆ ಕುರಿ ಮತ್ತು ಮೇಕೆಗಳು	ಜನವರಿ	ರೋಗ ಪ್ರಕರಣಗಳಿರುವ (Endemic) ಜಿಲ್ಲೆಗಳಲ್ಲಿರುವ ಗುಂಪು ಹಳ್ಳಿಗಳು (Cluster Villages)
2	ಪಿ.ಪಿ.ಆರ್	ಎಲ್ಲಾ ಕುರಿ ಮತ್ತು ಮೇಕೆಗಳು	ಒಂದನೆ ಸುತ್ತು : ಜನವರಿ ಮತ್ತು ಫೆಬ್ರವರಿ ಎರಡನೆ ಸುತ್ತು: ಜುಲೈ ಮತ್ತು ಆಗಸ್ಟ್	ರಾಜ್ಯದ ಎಲ್ಲಾ ಹಳ್ಳಿಗಳಲ್ಲಿನ ಈ ಹಿಂದೆ ಲಸಿಕೆ ಮಾಡದಿರುವ ಮತ್ತು ಹೊಸದಾಗಿ ಜನಿಸಿದ ಕುರಿ ಮತ್ತು ಮೇಕೆಗಳು (ಅಂದಾಜು ಶೇ30)
3	ಕಾಲು ಮತ್ತು ಬಾಯಿ ಜ್ವರ	ಎಲ್ಲಾ ದನ, ಎಮ್ಮೆ ಮತ್ತು ಹಂದಿಗಳು	ಒಂದನೆ ಸುತ್ತು : ಫೆಬ್ರವರಿ ಮತ್ತು ಮಾರ್ಚ್ ಎರಡನೆ ಸುತ್ತು : ಆಗಸ್ಟ್ ಮತ್ತು ಸಪ್ಟೆಂಬರ್	ಎಲ್ಲಾ ಹಳ್ಳಿಗಳು
4	ಚಪ್ಪೆರೋಗ	ಎಲ್ಲಾ ದನ ಮತ್ತು ಎಮ್ಮೆ	ಏಪ್ರಿಲ್	ರೋಗ ಪ್ರಕರಣಗಳಿರುವ (Endemic) ಜಿಲ್ಲೆಗಳಲ್ಲಿರುವ ಗುಂಪು ಹಳ್ಳಿಗಳು (Cluster Villages)
5	ಕಂದು ರೋಗ	ಎಲ್ಲಾ ದನ ಮತ್ತು ಎಮ್ಮೆಗಳ 6–8 ತಿಂಗಳುಗಳ ಹೆಣ್ಣು ಕರುಗಳು	ಪ್ರತಿ ಮಾಹೆಯ ಮೊದಲನೆಯ ವಾರ	ಎಲ್ಲಾ ಹಳ್ಳಿಗಳು
6	ಗಳಲೆ ರೋಗ	ಎಲ್ಲಾ ದನ, ಎಮ್ಮೆ ಕುರಿ ಮತ್ತು ಮೇಕೆಗಳು	ಒಂದನೆ ಸುತ್ತು : ಮೇ ಮತ್ತು ಜೂನ್ ಎರಡನೆ ಸುತ್ತು: ನವೆಂಬರ್ ಮತ್ತು ಡಿಸೆಂಬರ್	ರೋಗ ಪ್ರಕರಣಗಳಿರುವ (Endemic) ಜಿಲ್ಲೆಗಳಲ್ಲಿರುವ ಗುಂಪು ಹಳ್ಳಿಗಳು (Cluster Villages)
7	ಕರುಳು ಬೇನೆ	ಎಲ್ಲಾ ಕುರಿ ಮತ್ತು ಮೇಕೆಗಳು	ಒಂದನೆ ಸುತ್ತು : ಜೂನ್ ಎರಡನೆ ಸುತ್ತು : ಡಿಸೆಂಬರ್	ಎಲ್ಲಾ ಹಳ್ಳಿಗಳು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ: 37:ಸ್ತ್ರೀಮರ:2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು. ದಿನಾಂಕ:17.03.2020

48
18/3/20

ಇವರಿಂದ :

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಸನಗೌಡ್ ಆರ. ಪಾಟೀಲ್ (ಯತ್ನಾಳ್)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2041 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಸನಗೌಡ್ ಆರ್. ಪಾಟೀಲ್ (ಯತ್ನಾಳ್)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2041 ಸಂಬಂಧಿಸಿದಂತೆ ಉತ್ತರದ ಕನ್ನಡ ಭಾಷೆಯ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

Vanalakshmi CB 17/3/2020
(ವನಲಕ್ಷ್ಮಿ ಸಿ.ಬಿ)
ಶಾಖಾಧಿಕಾರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2041
ಮಾನ್ಯ ಸದಸ್ಯರ ಹೆಸರು : ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ವಿಜಯಪುರ ನಗರ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ : 18-03-2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ವಾಹನ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಿಂದ ಸದರಿ ವಾಹನಗಳಲ್ಲಿ ಜಖಂಗೊಂಡಿರುವ ವಾಹನಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** ಜಿಲ್ಲಾ ಉಪನಿರ್ದೇಶಕರ ಕಛೇರಿ ಮತ್ತು ತಾಲ್ಲೂಕು ಶಿಶುಅಭಿವೃದ್ಧಿಯೋಜನಾಧಿಕಾರಿಗಳ ಕಛೇರಿಗಳಲ್ಲಿ ಒಟ್ಟು 193 ವಾಹನಗಳು ಮತ್ತು ನಿರ್ದೇಶನಾಲಯದಲ್ಲಿ 17 ವಾಹನಗಳಿದ್ದು 30 ಜಿಲ್ಲೆಗಳ ವಾಹನಗಳ ಪೈಕಿ 100 ವಾಹನಗಳು ಜಖಂಗೊಂಡಿರುತ್ತವೆ. ನಿರ್ದೇಶನಾಲಯದ 05 ವಾಹನಗಳು ಚಾಲನೆಯಲ್ಲಿರುವುದಿಲ್ಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪಡೆದು ಅನುಪಯುಕ್ತಗೊಳಿಸಲು ಕ್ರಮ ಕೈಗೊಳ್ಳಲಾಗುವುದು **ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ** 04 ವಾಹನಗಳಿದ್ದು, ಆ ಪೈಕಿ ವಾಹನ ಸಂಖ್ಯೆ: ಕೆಎ01 ಜಿ-2122 ವಾಹನವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಅನುಪಯುಕ್ತಗೊಳಿಸಿ ಹರಾಜಿನ ಮುಖಾಂತರ ವಿಲೇವಾರಿ ಮಾಡಲಾಗಿದೆ. ವಾಹನ ಸಂಖ್ಯೆ: ಕೆಎ01, ಜಿ-3520 ವಾಹನವು ಹರಾಜಿನ ಪ್ರಕ್ರಿಯೆಯಲ್ಲಿದ್ದು, ಪ್ರಸ್ತುತ 02 ವಾಹನಗಳು ಮಾತ್ರ ಸುಸ್ಥಿತಿಯಲ್ಲಿದ್ದು, ಚಾಲನೆಯಲ್ಲಿರುತ್ತದೆ. **ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ** ಬಳಸುತ್ತಿರುವ ವಾಹನಗಳ ಸಂಖ್ಯೆ: 3, ಜಖಂಗೊಂಡ ವಾಹನಗಳು ಯಾವುದೂ ಇರುವುದಿಲ್ಲ.
ಆ	ಸದರಿ ಜಖಂಗೊಂಡಿರುವ ವಾಹನಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಛೇರಿಗಳ ಬಳಿ ದುರಸ್ಥಿಗಾಗಿ ನಿಂತಲ್ಲೇ ನಿಂತಿರುವ ಬಗ್ಗೆ ಆರೋಪಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಅವುಗಳನ್ನು ದುರಸ್ಥಿಪಡಿಸುವಲ್ಲಿ ಅಥವಾ ಗುಜರಿಗೆ ಹಾಕುವಲ್ಲಿ ಸರ್ಕಾರವು ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೇ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು)	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** 100 ವಾಹನಗಳು ಜಖಂಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ 3 ವರ್ಷಗಳಲ್ಲಿ 12 ವಾಹನಗಳನ್ನು ವಿಲೇವಾರಿ ಮಾಡಲಾಗಿದೆ. ಉಳಿದ ವಾಹನಗಳನ್ನು ನಿಯಮಾನುಸಾರ ಆರ್.ಟಿ.ಒ. ರವರಿಂದ ಧೃಡೀಕರಣ ಪಡೆದು ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. ನಿರ್ದೇಶನಾಲಯದ ಅನುಪಯುಕ್ತ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪಡೆದು ಅನುಪಯುಕ್ತಗೊಳಿಸಲು ಕ್ರಮ ಕೈಗೊಳ್ಳಲಾಗುವುದು. **ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ** ವಾಹನ ಸಂಖ್ಯೆ: ಕೆಎ01, ಜಿ-3520 ವಾಹನವು ಹರಾಜಿನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.
ಇ	ಸದರಿ ಜಖಂಗೊಂಡಿರುವ ವಾಹನಗಳನ್ನು ದುರಸ್ಥಿಗೊಳಿಸಿ, ಕಛೇರಿಗೆ ಉಪಯೋಗಿಸುವುದು ಅಥವಾ ಹರಾಜು ಹಾಕಿದಲ್ಲಿ ಅದರಿಂದ ಸರ್ಕಾರಕ್ಕೆ ಆಗುವ ವೆಚ್ಚ ಮತ್ತು ಆದಾಯ ಎಷ್ಟು; (ಮಾಹಿತಿ ನೀಡುವುದು)	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** ವಿಲೇವಾರಿ ಮಾಡಲಾದ ವಾಹನಗಳ ಬಾಬ್ತು ರೂ.471982.000. ಉಳಿದ ವಾಹನಗಳನ್ನು ಆರ್.ಟಿ.ಒ. ರವರಿಂದ ಧೃಡೀಕರಣ ಪಡೆದು ವಿಲೇವಾರಿ ಮಾಡಿದ ನಂತರ ಅವುಗಳಿಗೆ ದೊರೆಯುವ ಆದಾಯ/ಮೊತ್ತದ ಮಾಹಿತಿ ಲಭ್ಯವಾಗುತ್ತದೆ. ನಿರ್ದೇಶನಾಲಯದ 05 ಅನುಪಯುಕ್ತ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ನಿಗದಿಗೊಳಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು **ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ** ವಾಹನ ಹರಾಜಿನ ನಂತರ ಅದರಿಂದ ಬರುವ ಮೊಬಲಗಿನ ಮಾಹಿತಿ ಲಭ್ಯವಾಗುತ್ತದೆ.
ಈ	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಪ್ರತಿ ವರ್ಷ ವಾಹನಗಳು ದುರಸ್ಥಿಗಾಗಿ ಮೀಸಲಾಗಿಟ್ಟಿರುವ ಅನುದಾನ ಎಷ್ಟು; ಅದರಲ್ಲಿ ಬಳಕೆ	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** ವಾಹನಗಳ ದುರಸ್ತಿಗೆ ಪ್ರತ್ಯೇಕ ಅನುದಾನ ಮೀಸಲಿಡಲಾಗುವುದಿಲ್ಲ. ಆಡಳಿತ ವೆಚ್ಚದಲ್ಲಿ ಅನುದಾನ ಭರಿಸಲಾಗುತ್ತದೆ. ಕಳೆದ ಎರಡು ವರ್ಷ ಮತ್ತು ಪ್ರಸಕ್ತ ಸಾಲಿನಲ್ಲಿ ವಾಹನಗಳ ದುರಸ್ತಿಗಾಗಿ ಮಾಡಿರುವ ವೆಚ್ಚದ ವಿವರ ಕೆಳಕಂಡಂತಿದೆ.

ಮಾಡಿಕೊಳ್ಳಲಾಗುತ್ತಿರುವ ಮೊತ್ತ ಎಷ್ಟು ಮತ್ತು ಉಳಿಕೆ ಹಣ ಎಷ್ಟು? (ವರ್ಷವಾರು ಮಾಹಿತಿ ನೀಡುವುದು)

ವರ್ಷ	ಜಿಲ್ಲೆಗಳ ಮಾಹಿತಿ	ನಿರ್ದೇಶನಾಲಯದ ಮಾಹಿತಿ
2016–17	–	3,61,353.00
2017–18	29,73,361.00	7,59,157.00
2018–19	40,08,041.00	4,62,416.00
2019–20	27,49,032.00	–

(ಇಂಧನ, ದುರಸ್ತಿ ಹಾಗೂ ಸರ್ವೀಸ್ ವೆಚ್ಚಗಳಿಗಾಗಿ ಒಟ್ಟಾಗಿ ಅನುದಾನ ಬಿಡುಗಡೆಯಾಗುತ್ತಿದ್ದು, ದುರಸ್ತಿಗಾಗಿ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತಿರುವುದಿಲ್ಲ.)

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವಾಹನಗಳ ದುರಸ್ಥಿಗಾಗಿ ಪ್ರತ್ಯೇಕವಾಗಿ ಆಯವ್ಯಯವನ್ನು ಒದಗಿಸಿರುವುದಿಲ್ಲ. ಇಂಧನಕ್ಕಾಗಿ ಒದಗಿಸಿರುವ ಆಯವ್ಯಯದಡಿ ವಾಹನಕ್ಕೆ ಅಗತ್ಯವಾದ ಸಮಯದಲ್ಲಿ ದುರಸ್ಥಿಯ ವೆಚ್ಚಗಳನ್ನು ಈ ಕೆಳಕಂಡಂತೆ ಭರಿಸಲಾಗಿದೆ.

ಕ್ರ ಸಂ.	ಅವಧಿ	ದುರಸ್ಥಿಗಾಗಿ ಭರಿಸಿದ ವೆಚ್ಚ
1	2017–18	ರೂ.1,62,092/–
2	2018–19	ರೂ.96,177/–

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ವಾಹನಗಳ ದುರಸ್ಥಿಗಾಗಿ ಪ್ರತ್ಯೇಕವಾದ ಅನುದಾನ ಮೀಸಲಿಟ್ಟಿರುವುದಿಲ್ಲ. ಆದರೆ, ಆಡಳಿತ ವೆಚ್ಚಕ್ಕಾಗಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ವಾಹನಗಳು ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದು.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಬಳಕೆ
1	2017–18	4.58
2	2018–19	0.25
3	2019–20	1.67

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ವಾಹನದ ದುರಸ್ತಿ ಮತ್ತು ಇಂಧನಕ್ಕಾಗಿ ಪ್ರತಿ ವರ್ಷ ಬಳಕೆ ಮಾಡುವ ಮೊತ್ತ ರೂ.10.00 ಲಕ್ಷಗಳು, ಇಂಧನ ಸರ್ವಿಸ್, ರಿಪೇರಿಗಳಿಗೆ ವೆಚ್ಚ ಮಾಡಲಾಗುತ್ತದೆ. ಯಾವುದೇ ಮೊತ್ತ ಉಳಿಕೆಯಾಗಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಬಳಕೆಯಾದ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ಬಳಕೆ (ರೂ. ಲಕ್ಷಗಳಲ್ಲಿ)
1	2017–18	10.03
2	2018–19	9.75
3	2019–20	9.80

ಸಂ:ಮಮಇ 37 ಸ್ಥಿಮರ 2020

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2041
ಮಾನ್ಯ ಸದಸ್ಯರ ಹೆಸರು : ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ವಿಜಯಪುರ ನಗರ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ : 18–03–2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ವಾಹನ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಿಂದ ಸದರಿ ವಾಹನಗಳಲ್ಲಿ ಜಖಂಗೊಂಡಿರುವ ವಾಹನಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** ಜಿಲ್ಲಾ ಉಪನಿರ್ದೇಶಕರ ಕಛೇರಿ ಮತ್ತು ತಾಲ್ಲೂಕು ಶಿಶುಅಭಿವೃದ್ಧಿಯೋಜನಾಧಿಕಾರಿಗಳ ಕಛೇರಿಗಳಲ್ಲಿ ಒಟ್ಟು 193 ವಾಹನಗಳು ಮತ್ತು ನಿರ್ದೇಶನಾಲಯದಲ್ಲಿ 17 ವಾಹನಗಳಿದ್ದು 30 ಜಿಲ್ಲೆಗಳ ವಾಹನಗಳ ಪೈಕಿ 100 ವಾಹನಗಳು ಜಖಂಗೊಂಡಿರುತವೆ. ನಿರ್ದೇಶನ್ನಾಲಯದ 05 ವಾಹನಗಳು ಚಾಲನೆಯಲ್ಲಿರುವುದಿಲ್ಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪಡೆದು ಅನುಪಯುಕ್ತಗೊಳಿಸಲು ಕ್ರಮ ಕೈಗೊಳ್ಳಲಾಗುವುದು **ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ** 04 ವಾಹನಗಳಿದ್ದು, ಆ ಪೈಕಿ ವಾಹನ ಸಂಖ್ಯೆ: ಕೆಎ01 ಜಿ–2122 ವಾಹನವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಅನುಪಯುಕ್ತಗೊಳಿಸಿ ಹರಾಜಿನ ಮುಖಾಂತರ ವಿಲೇವಾರಿ ಮಾಡಲಾಗಿದೆ, ವಾಹನ ಸಂಖ್ಯೆ: ಕೆಎ01, ಜಿ–3520 ವಾಹನವು ಹರಾಜಿನ ಪ್ರಕ್ರಿಯೆಯಲ್ಲಿದ್ದು, ಪ್ರಸ್ತುತ 02 ವಾಹನಗಳು ಮಾತ್ರ ಸುಸ್ಥಿತಿಯಲ್ಲಿದ್ದು, ಚಾಲನೆಯಲ್ಲಿರುತ್ತದೆ. **ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ** ಬಳಸುತ್ತಿರುವ ವಾಹನಗಳ ಸಂಖ್ಯೆ: 3, ಜಖಂಗೊಂಡ ವಾಹನಗಳು ಯಾವುದೂ ಇರುವುದಿಲ್ಲ.
ಆ	ಸದರಿ ಜಖಂಗೊಂಡಿರುವ ವಾಹನಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಛೇರಿಗಳ ಬಳಿ ದುರಸ್ಥಿಗಾಗಿ ನಿಂತಲ್ಲೇ ನಿಂತಿರುವ ಬಗ್ಗೆ ಆರೋಪಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಅವುಗಳನ್ನು ದುರಸ್ಥಿಪಡಿಸುವಲ್ಲಿ ಅಥವಾ ಗುಜರಿಗೆ ಹಾಕುವಲ್ಲಿ ಸರ್ಕಾರವು ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೇ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು)	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** 100 ವಾಹನಗಳು ಜಖಂಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ 3 ವರ್ಷಗಳಲ್ಲಿ 12 ವಾಹನಗಳನ್ನು ವಿಲೇವಾರಿ ಮಾಡಲಾಗಿದೆ, ಉಳಿದ ವಾಹನಗಳನ್ನು ನಿಯಮಾನುಸಾರ ಆರ್.ಟಿ.ಒ. ರವರಿಂದ ಧೃಡೀಕರಣ ಪಡೆದು ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. ನಿರ್ದೇಶನಾಲಯದ ಅನುಪಯುಕ್ತ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪಡೆದು ಅನುಪಯುಕ್ತಗೊಳಿಸಲು ಕ್ರಮ ಕೈಗೊಳ್ಳಲಾಗುವುದು. **ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ** ವಾಹನ ಸಂಖ್ಯೆ: ಕೆಎ01, ಜಿ–3520 ವಾಹನವು ಹರಾಜಿನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.
ಇ	ಸದರಿ ಜಖಂಗೊಂಡಿರುವ ವಾಹನಗಳನ್ನು ದುರಸ್ಥಿಗೊಳಿಸಿ, ಕಛೇರಿಗೆ ಉಪಯೋಗಿಸುವುದು ಅಥವಾ ಹರಾಜು ಹಾಕಿದಲ್ಲಿ ಅದರಿಂದ ಸರ್ಕಾರಕ್ಕೆ ಆಗುವ ವೆಚ್ಚ ಮತ್ತು ಆದಾಯ ಎಷ್ಟು; (ಮಾಹಿತಿ ನೀಡುವುದು)	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** ವಿಲೇವಾರಿ ಮಾಡಲಾದ ವಾಹನಗಳ ಬಾಬ್ತು ರೂ.471982.000. ಉಳಿದ ವಾಹನಗಳನ್ನು ಆರ್.ಟಿ.ಒ. ರವರಿಂದ ಧೃಡೀಕರಣ ಪಡೆದು ವಿಲೇವಾರಿ ಮಾಡಿದ ನಂತರ ಅವುಗಳಿಗೆ ದೊರೆಯುವ ಆದಾಯ/ಮೊತ್ತದ ಮಾಹಿತಿ ಲಭ್ಯವಾಗುತ್ತದೆ. ನಿರ್ದೇಶನಾಲಯದ 05 ಅನುಪಯುಕ್ತ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ನಿಗದಿಗೊಳಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು **ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ** ವಾಹನ ಹರಾಜಿನ ನಂತರ ಅದರಿಂದ ಬರುವ ಮೊಬಲಗಿನ ಮಾಹಿತಿ ಲಭ್ಯವಾಗುತ್ತದೆ.
ಈ	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಪ್ರತಿ ವರ್ಷ ವಾಹನಗಳು ದುರಸ್ಥಿಗಾಗಿ ಮೀಸಲಾಗಿಟ್ಟಿರುವ ಅನುದಾನ ಎಷ್ಟು; ಅದರಲ್ಲಿ ಬಳಕೆ	**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ** ವಾಹನಗಳ ದುರಸ್ತಿಗೆ ಪ್ರತ್ಯೇಕ ಅನುದಾನ ಮೀಸಲಿಡಲಾಗುವುದಿಲ್ಲ. ಆಡಳಿತ ವೆಚ್ಚದಲ್ಲಿ ಅನುದಾನ ಭರಿಸಲಾಗುತ್ತದೆ. ಕಳೆದ ಎರಡು ವರ್ಷ ಮತ್ತು ಪ್ರಸಕ್ತ ಸಾಲಿನಲ್ಲಿ ವಾಹನಗಳ ದುರಸ್ತಿಗಾಗಿ ಮಾಡಿರುವ ವೆಚ್ಚದ ವಿವರ ಕೆಳಕಂಡಂತಿದೆ.

ಮಾಡಿಕೊಳ್ಳಲಾಗುತ್ತಿರುವ ಮೊತ್ತ ಎಷ್ಟು ಮತ್ತು ಉಳಿಕೆ ಹಣ ಎಷ್ಟು? (ವರ್ಷವಾರು ಮಾಹಿತಿ ನೀಡುವುದು)

ವರ್ಷ	ಜಿಲ್ಲೆಗಳ ಮಾಹಿತಿ	ನಿರ್ದೇಶನಾಲಯದ ಮಾಹಿತಿ
2016–17	–	3,61,353.00
2017–18	29,73,361.00	7,59,157.00
2018–19	40,08,041.00	4,62,416.00
2019–20	27,49,032.00	–

(ಇಂಧನ, ದುರಸ್ತಿ ಹಾಗೂ ಸರ್ವೀಸ್ ವೆಚ್ಚಗಳಿಗಾಗಿ ಒಟ್ಟಾಗಿ ಅನುದಾನ ಬಿಡುಗಡೆಯಾಗುತ್ತಿದ್ದು, ದುರಸ್ತಿಗಾಗಿ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತಿರುವುದಿಲ್ಲ.)

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವಾಹನಗಳ ದುರಸ್ಥಿಗಾಗಿ ಪ್ರತ್ಯೇಕವಾಗಿ ಆಯವ್ಯಯವನ್ನು ಒದಗಿಸಿರುವುದಿಲ್ಲ. ಇಂಧನಕ್ಕಾಗಿ ಒದಗಿಸಿರುವ ಆಯವ್ಯಯದಡಿ ವಾಹನಕ್ಕೆ ಅಗತ್ಯವಾದ ಸಮಯದಲ್ಲಿ ದುರಸ್ಥಿಯ ವೆಚ್ಚಗಳನ್ನು ಈ ಕೆಳಕಂಡಂತೆ ಭರಿಸಲಾಗಿದೆ.

ಕ್ರ ಸಂ.	ಅವಧಿ	ದುರಸ್ಥಿಗಾಗಿ ಭರಿಸಿದ ವೆಚ್ಚ
1	2017–18	ರೂ.1,62,092/-
2	2018–19	ರೂ.96,177/-

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ವಾಹನಗಳ ದುರಸ್ಥಿಗಾಗಿ ಪ್ರತ್ಯೇಕವಾದ ಅನುದಾನ ಮೀಸಲಿಟ್ಟಿರುವುದಿಲ್ಲ. ಆದರೆ, ಆಡಳಿತ ವೆಚ್ಚಕ್ಕಾಗಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ವಾಹನಗಳು ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದು.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಬಳಕೆ
1	2017–18	4.58
2	2018–19	0.25
3	2019–20	1.67

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ವಾಹನದ ದುರಸ್ತಿ ಮತ್ತು ಇಂಧನಕ್ಕಾಗಿ ಪ್ರತಿ ವರ್ಷ ಬಳಕೆ ಮಾಡುವ ಮೊತ್ತ ರೂ.10.00 ಲಕ್ಷಗಳು, ಇಂಧನ ಸರ್ವಿಸ್, ರಿಪೇರಿಗಳಿಗೆ ವೆಚ್ಚ ಮಾಡಲಾಗುತ್ತದೆ. ಯಾವುದೇ ಮೊತ್ತ ಉಳಿಕೆಯಾಗಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಬಳಕೆಯಾದ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ಬಳಕೆ (ರೂ. ಲಕ್ಷಗಳಲ್ಲಿ)
1	2017–18	10.03
2	2018–19	9.75
3	2019–20	9.80

ಸಂ:ಮಮಇ 37 ಸ್ತ್ರೀಮರ 2020

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ಸರ್ಕಾರ

ಸಂ: ಟಿಡಿ 119 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

(10) 18/3

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಿಳ್ಳೂರ್ ಬಿ. ಮಹಾಲಿಂಗಪ್ಪ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1487 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಿಳ್ಳೂರ್ ಬಿ. ಮಹಾಲಿಂಗಪ್ಪ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1487 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1487

ಸದಸ್ಯರ ಹೆಸರು : ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಬಾಗ)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 18-03-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಕೆ.ಎಸ್.ಆರ್.ಟಿ.ಸಿ. ಘಟಕಕ್ಕೆ ಎಸ್.ಯು.ಟಿ.ಎಫ್ ನಿಧಿಯಿಂದ ಎಷ್ಟು ಬಸ್ಸುಗಳನ್ನು ಪೂರೈಸಲಾಗಿದೆ; (ಸಂಪೂರ್ಣ ವಿವರ ನೀಡುವುದು) ಇಲ್ಲದಿದ್ದಲ್ಲಿ, ಯಾವಾಗ ಹೊಸ ಬಸ್ಸುಗಳನ್ನು ಒದಗಿಸಲಾಗುವುದು;	ಬೆಳಗಾವಿ ಜಿಲ್ಲೆ ರಾಯಬಾಗ ಘಟಕಕ್ಕೆ ಎಸ್.ಯು.ಟಿ.ಎಫ್. ಯೋಜನೆಯಡಿ ಯಾವುದೇ ಬಸ್ಸುಗಳನ್ನು ಪೂರೈಸಲಾಗಿರುವುದಿಲ್ಲ.
ಆ	ಸದರಿ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಸ್ಸುಗಳು ಬಹಳ ಹಳೆಯದವುಗಳಾಗಿದ್ದು, ಪದೇ ಪದೇ ರಿಪೇರಿಗೆ ಬರುತ್ತಿರುವುದರಿಂದ ಪ್ರಯಾಣಿಕರು ತೊಂದರೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ರಾಯಬಾಗ ಘಟಕದಲ್ಲಿ ವಾಹನಗಳನ್ನು ಉತ್ತಮ ರೀತಿಯಲ್ಲಿ ತಾಂತ್ರಿಕ ನಿರ್ವಹಣೆ ಮಾಡಲಾಗುತ್ತಿದ್ದು, ಯಾವುದೇ ಅವಘಡವಾಗದೇ ತೃಪ್ತಿಕರವಾಗಿ ಕಾರ್ಯಾಚರಣೆಗೊಳಿಸಿ ಸಾರ್ವಜನಿಕ ಪ್ರಯಾಣಿಕರಿಗೆ ಸಮರ್ಪಕ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
ಇ	ಬಂದಿದ್ದಲ್ಲಿ, ಈ ಹಳೆಯ ಬಸ್ಸುಗಳ ಬದಲಾಗಿ ಹೊಸ ಬಸ್ಸುಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು;	ಪ್ರಸಕ್ತ ಸಾಲಿನಲ್ಲಿ ರಾಯಬಾಗ ಘಟಕದಲ್ಲಿ ನಿಗದಿತ ಕಿ.ಮೀ. ಕ್ರಮಿಸಿದ 08 ಹಳೆಯ ವಾಹನಗಳನ್ನು ನಿರುಪಯುಕ್ತಗೊಳಿಸಿ, ಅವುಗಳ ಬದಲಿಗೆ 08 ಹೊಸ ವಾಹನಗಳನ್ನು ಒದಗಿಸಲಾಗಿದೆ.
ಈ	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ: ಟಿಡಿ 119 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 35 ಟಿಡಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18-03-2020

45 u5

18/3/2020

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪುರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2373 ಕ್ಕೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2373/2020, ದಿನಾಂಕ: 05-03-2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಲಾದ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪುರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2373 ಕ್ಕೆ ಸಂಬಂಧಿಸಿದ 100 ಉತ್ತರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಬಿ.ನಂದಕುಮಾರ್)
ಶಾಖಾಧಿಕಾರಿ,
ಸಾರಿಗೆ ಇಲಾಖೆ-2.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2373

ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18-03-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಆಟೋರಿಕ್ಷಾಗಳಿಗೆ ಸಾರಿಗೆ ಇಲಾಖೆಯು ಪರವಾನಿಗೆಯನ್ನು ನೀಡಿದೆ (ಜಿಲ್ಲಾವಾರು ಮಾಹಿತಿ ನೀಡುವುದು).	ರಾಜ್ಯದಲ್ಲಿ ಪರವಾನಿಗೆಯನ್ನು ನೀಡಿರುವ ಆಟೋರಿಕ್ಷಾಗಳ ಜಿಲ್ಲಾವಾರು ವಿವರ ಈ ಕೆಳಕಂಡಂತೆ ಇರುತ್ತದೆ:

ಕ್ರ. ಸಂ.	ಜಿಲ್ಲೆಯ ಹೆಸರು	ಆಟೋರಿಕ್ಷಾ ವಾಹನಗಳಿಗೆ ನೀಡಿರುವ ಪರವಾನಿಗೆಗಳ ಸಂಖ್ಯೆ
1	ಬೆಂಗಳೂರು ನಗರ	130000
2	ಬೆಂಗಳೂರು ಗ್ರಾಮಾಂತರ	1928
3	ತುಮಕೂರು	13839
4	ಕೋಲಾರ	7734
5	ಚಿಕ್ಕಬಳ್ಳಾಪುರ	2923
6	ರಾಮನಗರ	5260
7	ಮೈಸೂರು	28589
8	ಮಂಡ್ಯ	4656
9	ಮಡಿಕೇರಿ	5522
10	ಚಾಮರಾಜನಗರ	1982
11	ಹಾಸನ	11300
12	ಶಿವಮೊಗ್ಗ	7990
13	ಚಿತ್ರದುರ್ಗ	8486
14	ದಾವಣಗೆರೆ	11557
15	ಚಿಕ್ಕಮಗಳೂರು	7149
16	ಮಂಗಳೂರು	36958
17	ಉಡುಪಿ	16895
18	ಬೆಳಗಾವಿ	12715
19	ಗದಗ	5533
20	ಧಾರವಾಡ	10277
21	ಹಾವೇರಿ	4085
22	ವಿಜಯಪುರ	8978
23	ಬಾಗಲಕೋಟೆ	10079
24	ಕಾರವಾರ	9203
25	ಕಲಬುರಗಿ	9612
26	ಯಾದಗಿರಿ	3756
27	ರಾಯಚೂರು	3418
28	ಬಳ್ಳಾರಿ	9110
29	ಕೊಪ್ಪಳ	2130
30	ಬೀದರ್	7066

ಆ)	ಹೊಸ ಪರವಾನಿಗೆ ಪಡೆಯಲು ಮತ್ತು ಪ್ರಸುತ್ತ ಚಾಲ್ತಿಯಲ್ಲಿರುವ ಪರವಾನಗಿಯನ್ನು ನವೀಕರಿಸಲು ಸರ್ಕಾರಕ್ಕೆ ಪಾವತಿಸಬೇಕಾಗಿರುವ ಶುಲ್ಕವೆಷ್ಟು?	1989ನೇ ಮೋಟಾರು ವಾಹನ ನಿಯಮಾವಳಿಗಳ ನಿಯಮ 67ರ ಅಡಿಯಲ್ಲಿ ಹೊಸ ಪರವಾನಗಿ ಪಡೆಯಲು ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಪರವಾನಗಿಯನ್ನು ನವೀಕರಿಸಲು ಸರ್ಕಾರಕ್ಕೆ ರೂ.400/- ಮತ್ತು ಹಿಂಬರಹ ರೂ.100/- ಒಳಗೊಂಡಂತೆ ಒಟ್ಟು ರೂ.500/- ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.
ಇ)	ಹೊಸ ಆಟೋರಿಕ್ಷಾವನ್ನು ಖರೀದಿಸಲು ಸರ್ಕಾರವು ವಿವಿಧ ಇಲಾಖೆಗಳಡಿ ಚಾಲ್ತಿಯಲ್ಲಿರುವ ಯೋಜನೆಗಳು ಯಾವುದು, ಸದರಿ ಯೋಜನೆಗಳಡಿ ಎಷ್ಟು ಅಭ್ಯರ್ಥಿಗಳಿಗೆ ರಿಯಾಯಿತಿ ನೀಡಲಾಗುತ್ತಿದೆ. (ಇಲಾಖಾವಾರು, ಯೋಜನಾವಾರು ವಿವರವಾದ ಮಾಹಿತಿಯನ್ನು ಒದಗಿಸುವುದು):	ಹೊಸ ಆಟೋರಿಕ್ಷಾವನ್ನು ಖರೀದಿಸುವ ಬಗ್ಗೆ ಸಾರಿಗೆ ಇಲಾಖೆಯಿಂದ ಯಾವುದೇ ಯೋಜನೆಯು ಚಾಲ್ತಿಯಲ್ಲಿರುವುದಿಲ್ಲ.
ಈ)	ಆಟೋರಿಕ್ಷಾ ಚಾಲಕರು ಹಾಗೂ ಅವರ ಕುಟುಂಬ ಸದಸ್ಯರಿಗೆ ಸರ್ಕಾರವು ವಿಮಾ ಸೌಲಭ್ಯವನ್ನು ಒದಗಿಸುತ್ತಿದೆಯೇ: ?	ಆಟೋರಿಕ್ಷಾ ಚಾಲಕರು ಹಾಗೂ ಅವರ ಕುಟುಂಬ ಸದಸ್ಯರಿಗೆ ಸಾರಿಗೆ ಇಲಾಖೆಯಲ್ಲಿ "ಆಟೋರಿಕ್ಷಾ ಚಾಲಕರ ಅಪಘಾತ ಪರಿಹಾರ ನಿಧಿ ಯೋಜನೆ" ಚಾಲ್ತಿಯಲ್ಲಿದ್ದು, ಸಾರಿಗೆ ಇಲಾಖೆಯಿಂದ ಯಾವುದೇ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿಲ್ಲ.

ಟಿಡಿ 35 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಿಒ 30 ಪಿಎಂಸಿ 2020(ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:18.03.2020.

73 u-8
18/3/2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1792ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/6ಅ/ಪ್ರಸಂ.1792/2020, ದಿ:04-03-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1792ಕ್ಕೆ ಮಾನ್ಯ ಸಹಕಾರ ಸಚಿವರು ದಿ:18-03-2020ರಂದು ಉತ್ತರಿಸಬೇಕಾಗಿರುವುದರಿಂದ ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಉತ್ತರವನ್ನು ಸಿದ್ಧಪಡಿಸಿ 120 ಉತ್ತರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ,

18/3/2020
(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1792 (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ)
ಉತ್ತರಿಸಬೇಕಾದ ದಿನಾಂಕ : 18.03.2020.
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸಹಕಾರಿ ಸಂಘಗಳಲ್ಲಿ ವಿದ್ಯಾರ್ಹತೆ ಹೊಂದಿದ ಅರ್ಹ ಅಂಗವಿಕಲ ಅಭ್ಯರ್ಥಿಗಳಿಗೆ ನೌಕರಿಯಲ್ಲಿ ಕಡ್ಡಾಯವಾಗಿ ಮೀಸಲಾತಿ ನೀಡಿ ಉದ್ಯೋಗ ಕಲ್ಪಿಸುವ ಆದೇಶ ಮಾಡುವಲ್ಲಿ ಸರ್ಕಾರದ ನಿಲುವೇನು?	ರಾಜ್ಯ ಸಹಕಾರ ಸಂಘಗಳಲ್ಲಿ ವಿದ್ಯಾರ್ಹತೆ ಹೊಂದಿದ ಅರ್ಹ ಅಂಗವಿಕಲ ಅಭ್ಯರ್ಥಿಗಳಿಗೆ ನೌಕರಿಯಲ್ಲಿ ಕಡ್ಡಾಯವಾಗಿ ಮೀಸಲಾತಿಯನ್ನು ಒದಗಿಸಲಾಗುತ್ತಿದೆ.

ಸಿಒ 30 ಪಿಎಂಸಿ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 36 ಟಿಡಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18-03-2020

137
U-S
18/3/2020

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಘುಪತಿ ಭಟ್ ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2289 ಕ್ಕೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2289/2020, ದಿನಾಂಕ: 05-03-2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಲಾದ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಘುಪತಿ ಭಟ್ ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2289 ಕ್ಕೆ ಸಂಬಂಧಿಸಿದ 100 ಉತ್ತರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಬಿ.ನಂದಕುಮಾರ್)
ಶಾಖಾಧಿಕಾರಿ,
ಸಾರಿಗೆ ಇಲಾಖೆ-2.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2289

ಸದಸ್ಯರ ಹೆಸರು : ಶ್ರೀ. ರಘುಪತಿ ಭಟ್.ಕೆ

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18-03-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯದಲ್ಲಿ ಮ್ಯಾಕ್ಸಿಕ್ಯಾಬ್‌ನ 12+1 ಸೀಟುಗಳ ಪರವಾನಿಗೆಯವರು 12+1 ಪರ್ಮಿಟ್ ಹೊಂದಿದ್ದು, ರಾಜ್ಯಾದ್ಯಂತ 20 ಸೀಟುಗಳು ಹಾಕಿ ಬಾಡಿಗೆಗೆ ವಾಹನಗಳನ್ನು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ	ಇದನ್ನು ಸಕ್ರಮಗೊಳಿಸುವ ದೃಷ್ಟಿಯಿಂದ ಹೆಚ್ಚುವರಿ ಪ್ರತಿ ಸೀಟಿನ ಮೇಲೆ ತೆರಿಗೆ ವಿಧಿಸುವ ಬಗ್ಗೆ ಸರ್ಕಾರದ ನಿಲುವೇನು;	2020-21 ನೇ ಆಯವ್ಯಯದಲ್ಲಿ "2020-21ನೇ ಸಾಲಿನಿಂದ ಆಸನ ಸಾಮರ್ಥ್ಯ 12ಕ್ಕಿಂತ ಹೆಚ್ಚು ಹಾಗೂ 20 ಆಸನಗಳನ್ನು ಮೀರದ ಪ್ರಯಾಣಿಕರನ್ನು ಕೊಂಡೊಯ್ಯುವ ಒಪ್ಪಂದ ವಾಹನಗಳಿಗೆ ಮೋಟಾರು ವಾಹನ ತೆರಿಗೆಯಲ್ಲಿ ತ್ರೈಮಾಸಿಕ ಪ್ರತಿ ಆಸನಕ್ಕೆ ರೂ.900/- ಗಳನ್ನು ನಿಗಧಿಗೊಳಿಸಲು ಉದ್ದೇಶಿಸಲಾಗಿದೆ" ಎಂದು ಘೋಷಿಸಲಾಗಿದೆ.
ಇ	ಪ್ರತಿ ಸೀಟಿನ ಮೇಲೆ ಎಷ್ಟು ತೆರಿಗೆ ವಿಧಿಸಲಾಗುತ್ತಿದೆ;	
ಈ	ನೆರೆಯ ರಾಜ್ಯವಾದ ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ 19+1 ಸೀಟುಗಳ ಪರವಾನಿಗೆಯಿರುವ ಮ್ಯಾಕ್ಸಿ ಕ್ಯಾಬ್‌ಗಳಿಗೆ ವಿಧಿಸುವ ತೆರಿಗೆ ಎಷ್ಟು (ಸಂಕ್ಷಿಪ್ತ ವಿವರಗಳನ್ನು ನೀಡುವುದು);	ನೆರೆಯ ರಾಜ್ಯವಾದ ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ 19+1 ಸೀಟುಗಳ ಪರವಾನಿಗೆಯಿರುವ ಮ್ಯಾಕ್ಸಿಕ್ಯಾಬ್‌ಗಳಿಗೆ ಈ ಕೆಳಕಂಡಂತೆ ತೆರಿಗೆ ದರಗಳನ್ನು ವಿಧಿಸಲಾಗುತ್ತಿದೆ:- **ಕೇರಳ ರಾಜ್ಯ:** 12 ಪ್ರಯಾಣಿಕರಿಂದ 20 ಪ್ರಯಾಣಿಕರವರೆಗೆ ಒಪ್ಪಂದ ವಾಹನ/ ಸಾಮಾನ್ಯ ವಾಹನ ವರ್ಗ ಪ್ರತಿ ಪ್ರಯಾಣಿಕರಿಗೆ ರೂ. 530/-ಗಳ ತೆರಿಗೆ ದರ ಹಾಗೂ ಸುಖಾಸೀನ ಪುಶ್‌ಬ್ಯಾಕ್ ಸೀಟಿಗಳಿಗೆ ಪ್ರತಿ ಪ್ರಯಾಣಿಕರಿಗೆ ರೂ.750/-ಗಳ ತೆರಿಗೆ ದರಗಳನ್ನು ನಿಗಧಿಪಡಿಸಿದೆ. **ಗೋವಾ ರಾಜ್ಯ:** ಪ್ರಯಾಣಿಕರ ವಾಹನಗಳಿಗೆ 18 ಪ್ರಯಾಣಿಕರವರೆಗೆ ಪ್ರತಿ ವಾಹನಕ್ಕೆ ರೂ.2000/-ಗಳ ಹಾಗೂ 18 ಪ್ರಯಾಣಿಕರ ನಂತರದ ಪ್ರತಿ ಪ್ರಯಾಣಿಕರಿಗೆ ಹೆಚ್ಚುವರಿಯಾಗಿ ರೂ.110/-ಗಳ ತೆರಿಗೆ ದರಗಳನ್ನು ನಿಗಧಿಪಡಿಸಿದೆ.

ಟಿಡಿ 36 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 113 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18.03.2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1915 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1915 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S
(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1915

ಸದಸ್ಯರ ಹೆಸರು : ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 18-03-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಧಾರವಾಡ ಶಹರದ ಹೊಸ ಬಸ್ ನಿಲ್ದಾಣದ ಆವರಣದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾರಣ ನೀಡುವುದು;	ಧಾರವಾಡ ಶಹರದ ಹೊಸ ಬಸ್ ನಿಲ್ದಾಣದ ಆವರಣವು 5 ಎಕರೆ ಕ್ಷೇತ್ರದಲ್ಲಿ ನಿರ್ಮಿಸಿದ್ದು, ವಾಹನ ನಿಲುಗಡೆ ಆವರಣವು 9700.00 ಚದರ ಮೀಟರ್ ಇರುತ್ತದೆ. ಈ ಪೈಕಿ 2018-19ನೇ ಸಾಲಿನಲ್ಲಿ 6375.00 ಚದರ ಮೀಟರ್ ವಿಸ್ತೀರ್ಣಕ್ಕೆ ಸಿಮೆಂಟ್ ಕಾಂಕ್ರೀಟ್ ಅಳವಡಿಸಲಾಗಿರುತ್ತದೆ. ಬಾಕಿ ಉಳಿದ ಆವರಣವನ್ನು ಮುಂಬರುವ ದಿನಗಳಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಸಿಮೆಂಟ್ ಕಾಂಕ್ರೀಟ್ ಅಳವಡಿಸಲು ಯೋಜನೆ ರೂಪಿಸಿಕೊಳ್ಳಲಾಗಿದೆ.
ಆ)	ಬಸ್ ನಿಲ್ದಾಣದ ಸುತ್ತ ಕಂಪೌಂಡು ಗೋಡೆ ಹಾಗೂ ಇತರೆ ಕಾಮಗಾರಿಗಳನ್ನು ಯಾವಾಗ ಕೈಗೊಳ್ಳಲಾಗುವುದು; (ವಿವರ ನೀಡುವುದು)	ಬಸ್ ನಿಲ್ದಾಣದ ಆವರಣದ ಪೂರ್ವೋತ್ತರ ದಿಕ್ಕಿನಲ್ಲಿ ಮಾತ್ರ ಕಾಂಪೌಂಡ್ ಗೋಡೆ ಇರುವುದಿಲ್ಲ. ಸದರಿ ಕಾಂಪೌಂಡ ಗೋಡೆ ಹಾಗೂ ಇತರೆ ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲು ಯೋಜನೆ ರೂಪಿಸಿಕೊಳ್ಳಲಾಗಿದೆ.
ಇ)	ಹೊಸ ಬಸ್ ನಿಲ್ದಾಣವನ್ನು ಆಧುನಿಕ ರೀತಿಯಲ್ಲಿ ಉನ್ನತೀಕರಿಸಲಾಗುವುದೇ; ಹಾಗಿದ್ದಲ್ಲಿ, ಯಾವಾಗ ಕಾಮಗಾರಿ ಕೈಗೊಳ್ಳಲಾಗುವುದು?	ಪ್ರಸ್ತುತ ಹೊಸ ಬಸ್ ನಿಲ್ದಾಣವನ್ನು ಆಧುನಿಕ ರೀತಿಯಲ್ಲಿ ಉನ್ನತೀಕರಿಸುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಟಿಡಿ 113 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/324/ಗ್ರಾಪಂಅ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:20-03-2020.

187 u-s
18/3/2020

ಇಂದ,

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ ಸದಸ್ಯರಾದ ಮಾನ್ಯ ಶ್ರೀ ಶಿವಣ್ಣ ಬಿ. (ಆನೇಕಲ್) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2377 ಕ್ಕೆ ಉತ್ತರ.

ಉಲ್ಲೇಖ: ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ, ರವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2377/2020, ದಿ:05-03-2020.

*****

ಕರ್ನಾಟಕ ವಿಧಾನ ಸಭೆ ಸದಸ್ಯರಾದ ಮಾನ್ಯ ಶ್ರೀ ಶಿವಣ್ಣ ಬಿ. (ಆನೇಕಲ್) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **2377 ಕ್ಕೆ** ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Narayan bg.

(ಡಿ.ಜಿ. ನಾರಾಯಣ)
ಪೀಠಾಧಿಕಾರಿ (ಗ್ರಾಮ ಪಂಚಾಯಿತಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ) ಗ್ರಾಅಪ ಇಲಾಖೆ. (5 ಪ್ರತಿಗಳು)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2377
ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ. (ಆನೇಕಲ್)
ಉತ್ತರಿಸುವ ದಿನಾಂಕ : 18-03-2020.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ್ಲಾನ್ ಅನುಮೋದನೆ ಮಾಡದೇ ಇರುವ ಹಾಗೂ ಖಾತೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಪ್ಲಾನ್ ಅನುಮೋದನೆ ನೀಡಿದ ಆಸ್ತಿಗಳಿಗೆ ತೆರಿಗೆ ನಿರ್ಧರಣೆ ಪಟ್ಟಿ ನೀಡಲಾಗುತ್ತಿದೆ.
(ಆ)	ಪ್ಲಾನ್ ಅನುಮೋದನೆ ನೀಡದೇ ಹಾಗೂ ಖಾತೆ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗಿರುವುದಿಲ್ಲ.
(ಇ)	ಪ್ಲಾನ್ ಅನುಮೋದನೆ ಹಾಗೂ ಖಾತೆ ಮಾಡಲು ನಿರ್ದೇಶನ ನೀಡುವ ಸಂಬಂಧ ಸರ್ಕಾರದ ತೀರ್ಮಾನವೇನು? (ವಿವರ ಒದಗಿಸುವುದು)	ಅನ್ವಯಿಸುವುದಿಲ್ಲ.

ಸಂ. ಗ್ರಾಅಪ 324 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕರ್ನಾಟಕ ಸರ್ಕಾರ

18/3/2020
18/3

ಸಂ: ಟಿಡಿ 22 ಟಿಡಿಕ್ಯೂ 2020

23

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18-03-2020

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಶ್ವಿನ್ ಕುಮಾರ್ ಎಂ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1347 ಕ್ಕೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ:
1. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1347/2020, ದಿನಾಂಕ: 29-02-2020.
2. ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರ ಪತ್ರ ಸಂಖ್ಯೆ: ಉಮು/ಸಾರಿಗೆ/ಟಿಡಿ 22/ 2020-21, ದಿ:11-03-2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ಪತ್ರದಲ್ಲಿ ಕೋರಲಾದ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಶ್ವಿನ್ ಕುಮಾರ್ ಎಂ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1347ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗದಿಂದ ಉತ್ತರವನ್ನು ಪಡೆದು ಕ್ರೋಢೀಕರಿಸಿ ನೀಡಬೇಕಾಗಿದ್ದರಿಂದ ಉಲ್ಲೇಖಿತ (2)ರನ್ವಯ 10 ದಿನಗಳ ಕಾಲಾವಕಾಶವನ್ನು ಪಡೆಯಲಾಗಿತ್ತು. ಅದರಂತೆ ಸದರಿ ಪಶ್ನೆಗೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
(ಎಂ. ಸತ್ಯವತಿ) 18/3/2020
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1347

ಸದಸ್ಯರ ಹೆಸರು : ಶ್ರೀ ಅಶ್ವಿನ್ ಕುಮಾರ್ .ಎಂ

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2020

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಲೋಕಸೇವಾ ಆಯೋಗದ ಮುಖೇನ ಆಯ್ಕೆ ಮಾಡಲು ಸರ್ಕಾರವು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;	ಹೌದು, 150 ಮೋಟಾರು ವಾಹನ ನಿರೀಕ್ಷಕರ ನೇರನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
(ಆ)	ರಾಜ್ಯದ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಲೋಕಸೇವಾ ಆಯೋಗದಲ್ಲಿ ನೇಮಕಾತಿ ಮಾಡಲು ಲೋಕಸೇವಾ ಆಯೋಗದ ಕೆಲವು ಅಧಿಕಾರಿಗಳು ಪ್ರಭಾವಕ್ಕೊಳಗಾಗಿ ನಕಲಿ ಅಂಕಪಟ್ಟಿಗಳನ್ನು ಹೊಂದಿರುವ ಅಭ್ಯರ್ಥಿಗಳು ಮತ್ತು ಅರ್ಹತಾ ಪತ್ರಗಳನ್ನು ಪರಿಗಣಿಸಿ ಆಯ್ಕೆ ಮಾಡಲು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸಮಗ್ರವಾಗಿ ತನಿಖೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು);	ಆ ರೀತಿಯ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ.
(ಇ)	ರಾಜ್ಯದ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಲೋಕಸೇವಾ ಆಯೋಗದಲ್ಲಿ ನೇಮಕಾತಿ ಮಾಡಲು ಲೋಕಸೇವಾ ಆಯೋಗದ ಕೆಲವು ಅಧಿಕಾರಿಗಳು ಪ್ರಭಾವಕ್ಕೊಳಗಾಗಿ ಬೇರೆ ರಾಜ್ಯದ ವಿಶ್ವವಿದ್ಯಾನಿಲಯಗಳಿಂದ ನಕಲಿ ಅಂಕಪಟ್ಟಿಗಳನ್ನು ಹಾಗೂ ಅರ್ಹತಾ ಪತ್ರಗಳನ್ನು ತಂದು ಸಂದರ್ಶನಕ್ಕೆ ಹಾಜರುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು);	
(ಈ)	ರಾಜ್ಯದ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಲೋಕಸೇವಾ ಆಯೋಗದಲ್ಲಿ ನೇಮಕಾತಿ ಮಾಡಲು ಲೋಕಸೇವಾ ಆಯೋಗದ ಕೆಲವು ಅಧಿಕಾರಿಗಳು ಪ್ರಭಾವಕ್ಕೊಳಗಾಗಿ ಬೇರೆ ರಾಜ್ಯದ ವಿಶ್ವವಿದ್ಯಾನಿಲಯಗಳಿಂದ ನಕಲಿ ಅಂಕಪಟ್ಟಿಗಳನ್ನು ಹಾಗೂ ಅರ್ಹತಾ ಪತ್ರಗಳನ್ನು ತಂದು ಸಂದರ್ಶನಕ್ಕೆ ಹಾಜರುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು);	

ಟಿಡಿ 22 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 24 ಎಸ್.ಟಿ.ಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:18.03.2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನ ಸಭೆ
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಬೆಳ್ಳಿ ಪ್ರಕಾಶ್ (ಕಡೂರು) ಮಾನ್ಯ ವಿಧಾನ ಸಭಾ ಸದಸ್ಯರು ಇವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2224 ಕ್ಕೆ ಉತ್ತರಿಸುವ ಬಗ್ಗೆ.

-*-*-*-

ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಬೆಳ್ಳಿ ಪ್ರಕಾಶ್ (ಕಡೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2224ಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

18/03/2020

(ಹೆಚ್.ಸಿ.ಹರ್ಷರಾಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕುಟುಂಬ ಕಲ್ಯಾಣ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2224 (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ)
ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀಮತಿ ಬೆಳ್ಳಿ ಪ್ರಕಾಶ್ (ಕಡೂರು)
ಉತ್ತರಿಸಬೇಕಾದ ದಿನಾಂಕ	:	18.3.2020
ಉತ್ತರಿಸುವ ಸಚಿವರು	:	**ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಅಪೌಷ್ಠಿಕತೆ ನಿವಾರಣಾ ಆರೈಕೆ ಕೇಂದ್ರ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕೇಂದ್ರಕ್ಕೆ ಅಗತ್ಯ ಸಿಬ್ಬಂದಿ ನೇಮಕ ಮಾಡಿ ಮೂಲಭೂತ ಸೌಲಭ್ಯ ಒದಗಿಸಲಾಗಿದೆಯೇ;	ಹೌದು. ಕಡೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದಲೇ ಪೌಷ್ಠಿಕ ಪುನಶ್ಚೇತನ ಕೇಂದ್ರದ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಈ ಪೌಷ್ಠಿಕ ಪುನಶ್ಚೇತನ ಕೇಂದ್ರಕ್ಕೆ ಬೇಕಾದ ಮೂಲಭೂತ ಸೌಕರ್ಯಗಳಾದ ವಾರ್ಡ್, ಅಡಿಗೆ ಮನೆ, ಸಲಕರಣೆಗಳ ನಿರ್ವಹಣೆ, ಲಿನನ್, ಸ್ವಚ್ಛಮಾಡಲು ಬೇಕಾದ ಪದಾರ್ಥಗಳು, ಸದರಿ ಕೇಂದ್ರಕ್ಕೆ ಬೇಕಾದ ಉಪಕರಣಗಳು ಮತ್ತು ಅಡಿಗೆ ಮಾಡಲು ಬೇಕಾದ ಪಾತ್ರೆ ಮತ್ತು ಪದಾರ್ಥಗಳಿಗಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ **ವರ್ಷ** — **ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)** 2018–19 — 4.69 2019–20 — 1.76
ಆ	ಈ ಕ್ಷೇತ್ರದ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಮೇಲ್ವಿಚಾರಕಿ ಹುದ್ದೆಗಳನ್ನು ಭರ್ತಿ ಮಾಡಲು ಕೋರಿರುವುದು ನಿಜವೇ; ಹಾಗಿದ್ದಲ್ಲಿ ಭರ್ತಿ ಮಾಡದಿರಲು ಕಾರಣವೇನು; ಯಾವಾಗ ಭರ್ತಿ ಮಾಡಲಾಗುವುದು;	ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಒಟ್ಟು 13 ಮೇಲ್ವಿಚಾರಕಿಯರ ಹುದ್ದೆಗಳು ಮತ್ತು 03 ಹಿರಿಯ ಮೇಲ್ವಿಚಾರಕಿಯರ ಹುದ್ದೆಗಳು ಮಂಜೂರಾಗಿರುತ್ತವೆ. ಮೇಲ್ವಿಚಾರಕಿಯರ ಎಲ್ಲಾ ಹುದ್ದೆಗಳು ಭರ್ತಿಯಾಗಿರುತ್ತವೆ. ಖಾಲಿಯಿರುವ 03 ಹಿರಿಯ ಮೇಲ್ವಿಚಾರಕಿ ಹುದ್ದೆಗಳಿಗೆ, ಮೇಲ್ವಿಚಾರಕಿ ವೃಂದದಿಂದ ಹಿರಿಯ ಮೇಲ್ವಿಚಾರಕಿ ವೃಂದಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
ಇ	ಈ ಕ್ಷೇತ್ರದ ಸ್ವಂತ ಕಟ್ಟಡ ಹೊಂದಿದ ಅಂಗನವಾಡಿ ಕೇಂದ್ರಗಳು ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳು–350, ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳು–20.
ಈ	ಈ ಕ್ಷೇತ್ರದ ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆಯೇ; ಹಾಗಿದ್ದರೆ ಯಾವಾಗ ಮಂಜೂರು ಮಾಡಲಾಗುವುದು; (ಮಾಹಿತಿ ನೀಡುವುದು).	ಹೌದು. ಸ್ವಂತ ಕಟ್ಟಡಗಳಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ಅನುದಾನ ಹಾಗೂ ನಿವೇಶನ ಲಭ್ಯತೆಗನುಗುಣವಾಗಿ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ನಬಾರ್ಡ್‌ನಿಂದ, ವಿಶೇಷ ಅಭಿವೃದ್ಧಿ ಯೋಜನೆಯಡಿ, ಇಲಾಖಾ ವಂತಿಗೆಯಡಿ ಹಾಗೂ ನರೇಗಾ ಒಗ್ಗೂಡಿಸುವಿಕೆ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಇನ್ನಿತರೆ ಯೋಜನೆಗಳಡಿಯಲ್ಲಿ ಹಂತ ಹಂತವಾಗಿ ನಿರ್ಮಾಣ ಮಾಡಲಾಗುವುದು. 2019–20ನೇ ಸಾಲಿನಲ್ಲಿ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ 01 ಕಟ್ಟಡ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ 03 ಕಟ್ಟಡ, ಒಟ್ಟು 04 ಕಟ್ಟಡಗಳನ್ನು ಮಂಜೂರು ಮಾಡಲಾಗಿದೆ.

ಉ	ಈ ಕ್ಷೇತ್ರದಲ್ಲಿ 456 ಅಂಗನವಾಡಿ ಕೇಂದ್ರಗಳಿದ್ದು, ಕೇವಲ ಒಂದು ಎಫ್.ಡಿ.ಎ ಮಂಜೂರು ಮಾಡಿದ್ದು, ಕೇವಲ ಒಂದೇ ಎಫ್.ಡಿ.ಎ. ಹುದ್ದೆಯಿಂದ 456 ಕೇಂದ್ರಗಳಿಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ ಸಾಧ್ಯವೇ; ಹೆಚ್ಚು ಹುದ್ದೆಗಳನ್ನು ಯಾವಾಗ ಮಂಜೂರು ಮಾಡಲಾಗುತ್ತದೆ?	ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದಿಂದ ಕಡೂರು ಶಿಶು ಅಭಿವೃದ್ಧಿ ಯೋಜನೆಗೆ ಒಂದು ಎಫ್.ಡಿ.ಎ. ಮತ್ತು ಒಂದು ಎಸ್.ಡಿ.ಎ. ಹುದ್ದೆ ಮಂಜೂರಾಗಿರುತ್ತದೆ. ಈ ಎರಡು ಹುದ್ದೆಯಿಂದ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಹೆಚ್ಚುವರಿ ಹುದ್ದೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಬೇಕಾಗಿರುತ್ತದೆ.

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು,

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 82 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

143

Time 4-45 18/3

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಇವರಿಗೆ;

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀ ರಾಜೀವ್ ಪಿ., ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2317ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2317/2020, ದಿ:05.03.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ರಾಜೀವ್ ಪಿ., ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2317ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M. Rajan

(ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2317
ಸದಸ್ಯರ ಹೆಸರು : ಶ್ರೀ ರಾಜೀವ್ ಪಿ.
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ಸೌಲಭ್ಯ ಪಡೆದವರ ಸಂಖ್ಯೆ ಎಷ್ಟು; (ಕ್ಷೇತ್ರವಾರು ವಿವರ ನೀಡುವುದು)	ಕಳೆದ 3 ವರ್ಷಗಳಲ್ಲಿ ಜಿಲ್ಲೆಯಲ್ಲಿ ಇಲಾಖೆಯಿಂದ ಸೌಲಭ್ಯ ಪಡೆದವರ ಒಟ್ಟು ಸಂಖ್ಯೆ:4543 ಅಂಕಿ ಅಂಶಗಳ ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.
ಆ)	ಈ ಮತಕ್ಷೇತ್ರದಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು; (ಗ್ರಾಮವಾರು ವಿವರ ಒದಗಿಸುವುದು)	ಅಂಗವಿಕಲರ ಒಟ್ಟು ಸಂಖ್ಯೆ: 1973 ಗ್ರಾಮವಾರು ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.
ಇ)	ಈ ಕ್ಷೇತ್ರದಲ್ಲಿ ಎಷ್ಟು ಜನ ಅಂಗವಿಕಲರಿಗೆ ತ್ರಿಚಕ್ರವಾಹನ ವಿತರಿಸಲಾಗಿದೆ; ಇನ್ನೂ ವಿತರಿಸಬೇಕಾಗಿರುವ ಸಂಖ್ಯೆ ಎಷ್ಟು; ವಿತರಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;	• ತ್ರಿಚಕ್ರ ವಾಹನ ವಿತರಿಸಿದ ಸಂಖ್ಯೆ: 18 • 2018-19 ಹಾಗೂ 2019-20 ನೇ ಸಾಲಿನಲ್ಲಿ ಸ್ವೀಕರಿಸಿದ ಅರ್ಹ ಅರ್ಜಿಗಳ (ಯಂತ್ರಚಾಲಿತ ದ್ವಿಚಕ್ರವಾಹನ) ಸಂಖ್ಯೆ: 32 2019-20ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ನಿಗಧಿಗೊಳಿಸಿದ ಗುರಿಯನುಸಾರ ಈ ಮತಕ್ಷೇತ್ರಕ್ಕೆ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗುವುದು.
ಈ)	ಅಂಗವಿಕಲರಿಗೆ ಅಂಗವಿಕಲ ತ್ರಿಚಕ್ರವಾಹನ ತ್ವರಿತವಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ?	2019-20ನೇ ಸಾಲಿನಲ್ಲಿ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಖರೀದಿಸಲು ಕೈಗೊಳ್ಳಲಾದ ಟೆಂಡರ್ ಪ್ರಕ್ರಿಯೆಯು ಈಗಾಗಲೇ ಮುಕ್ತಾಯಗೊಂಡಿದ್ದು, L1 ಬಿಡ್‌ದಾರರಿಗೆ ಕಾರ್ಯಾದೇಶ ನೀಡುವ ಹಂತದಲ್ಲಿದ್ದು, ಯಂತ್ರಚಾಲಿತ ದ್ವಿಚಕ್ರವಾಹನಗಳು ಸರಬರಾಜು ಆದ ಕೂಡಲೇ ಎಲ್ಲಾ ಜಿಲ್ಲೆಗಳಿಗೆ ನಿಗದಿಪಡಿಸಲಾಗಿರುವ ಗುರಿಗನುಗುಣವಾಗಿ ವಾಹನಗಳನ್ನು ವಿತರಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಮಮಇ 82 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರಾಜೀವ್ ಪಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 2317ಕ್ಕೆ ಅನುಬಂಧ-1

ಇಲಾಖೆಯ ಫಲಾನುಭವಿ ಆಧಾರಿತ ಯೋಜನೆಗಳಡಿ ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದ ಮತಕ್ಷೇತ್ರವಾರು ಫಲಾನುಭವಿಗಳ ಮಾಹಿತಿ.

ಕ್ರ.ಸಂ.	ಯೋಜನೆಗಳ ವಿವರ	2016-17 ನೇ ಸಾಲಿನ ಮತಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ																		
		ಅಥಣಿ	ಕಾಗವಾಡ	ಚಿಕ್ಕೋಡಿ-ಸದಲಗಾ	ನಿಪ್ಪಾಣಿ	ರಾಯ ಬಾಗ	ಕುಡಚಿ	ಹುಕ್ಕೇರಿ	ಯಮಕನ ಮರ್ಡಿ	ಗೋಕಾಕ	ಅರಭಾವಿ	ಬೈಲಹೊಂಗಲ	ಕಿತ್ತೂರು	ಸವದತ್ತಿ	ರಾಮ ದುರ್ಗ	ಬೆಳಗಾವಿ ಗ್ರಾಮೀಣ	ಬೆಳಗಾವಿ ಉತ್ತರ	ಬೆಳಗಾವಿ ದಕ್ಷಿಣ	ಖಾನಾ ಪೂರ	ಒಟ್ಟು
		1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14**	**15**	**16**	**17**	**18**	**19**
1	ವಿದ್ಯಾರ್ಥಿವೇತನ	88	49	80	47	63	44	76	44	65	60	75	50	79	55	65	72	43	75	1130
2	ಸಾಧನ ಸಲಕರಣೆಗಳು	5	5	6	4	6	3	6	4	5	4	6	4	8	5	6	6	6	7	96
3	ಯಂತ್ರಚಾಲಿತ ದ್ವಿಚಕ್ರ ವಾಹನ	8	8	8	8	8	8	8	8	8	8	8	8	8	8	8	8	8	8	144
4	ಆಧಾರ	8	2	2	1	4	6	2	2	11	6	4	2	10	15	7	2	1	5	90
5	ವೈದ್ಯಕೀಯ ಪರಿಹಾರ ನಿಧಿ	–	–	–	–	–	–	–	–	1	–	–	–	–	–	–	1	1	–	3
6	ಶುಲ್ಕ ಮರುಪಾವತಿ	7	3	6	2	6	4	6	4	6	5	7	4	8	5	5	8	5	6	97
7	ವಿವಾಹ ಪ್ರೋತ್ಸಾಹ ಧನ	8	–	6	–	2	1	8	4	8	5	8	2	7	7	8	–	2	5	81
8	ಶಿಶು ಪಾಲನಾ ಭತ್ಯೆ	–	–	1	–	–	–	2	–	1	–	–	–	1	1	–	–	–	–	6
9	ನಿರಾಮಯ	25	20	25	20	25	20	25	25	30	25	25	20	25	20	23	20	20	25	418
	ಒಟ್ಟು	**149**	**87**	**134**	**82**	**114**	**86**	**133**	**91**	**135**	**113**	**133**	**90**	**146**	**116**	**122**	**117**	**86**	**131**	**2065**

ಕ್ರ.ಸಂ.	ಯೋಜನೆಗಳ ವಿವರ	2017–18 ನೇ ಸಾಲಿನ ಮತಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ																		
		ಅಥಣಿ	ಕಾಗವಾಡ	ಚಿಕ್ಕೋಡಿ–ಸದಲಗಾ	ನಿಪ್ಪಾಣಿ	ರಾಯ ಬಾಗ	ಕುಡಚಿ	ಹುಕ್ಕೇರಿ	ಯಮಕನ ಮರ್ಡಿ	ಗೋಕಾಕ	ಅರಭಾವಿ	ಬೈಲಹೊಂಗಲ	ಕಿತ್ತೂರು	ಸವದತ್ತಿ	ರಾಮ ದುರ್ಗ	ಬೆಳಗಾವಿ ಗ್ರಾಮೀಣ	ಬೆಳಗಾವಿ ಉತ್ತರ	ಬೆಳಗಾವಿ ದಕ್ಷಿಣ	ಖಾನಾ ಪೂರ	ಒಟ್ಟು
		1	2	3	4	5	6	7	8	9	10	11	12	13	14	15	16	17	18	19
1	ವಿದ್ಯಾರ್ಥಿವೇತನ	50	43	38	40	42	38	42	48	33	27	52	32	46	30	30	23	20	36	670
2	ಸಾಧನ ಸಲಕರಣೆಗಳು	3	0	3	2	0	3	2	0	2	1	2	1	3	2	3	1	1	3	32
3	ಯಂತ್ರಚಾಲಿತ ದ್ವಿಚಕ್ರ ವಾಹನ	16	17	20	15	20	18	18	17	66	23	22	21	27	40	17	5	13	20	395
4	ಆಧಾರ	5	5	5	5	5	5	5	5	5	5	5	5	6	5	5	4	5	5	90
5	ಟಾಕಿಂಗ್ ಲ್ಯಾಪ್‌ಟಾಪ	–	–	–	–	–	–	–	–	–	–	–	–	–	–	–	15	–	–	15
5	ಸಾಧನೆ/ಪ್ರತಿಭೆ	–	–	–	–	–	–	–	–	–	–	1	–	–	–	–	1	–	–	2
6	ವೈದ್ಯಕೀಯ ಪರಿಹಾರ ನಿಧಿ	–	–	1	–	–	–	–	–	–	–	–	–	–	–	–	–	1	–	2
7	ಶುಲ್ಕ ಮರುಪಾವತಿ	4	3	4	4	3	3	5	4	5	3	5	2	5	4	8	12	10	5	89
8	ವಿವಾಹ ಪ್ರೋತ್ಸಾಹ ಧನ	2	–	2	1	2	–	2	1	3	–	3	1	4	2	3	2	2	3	33
9	ಶಿಶು ಪಾಲನಾ ಭತ್ಯೆ	–	–	–	–	–	–	2	–	–	–	–	–	–	2	–	–	–	–	4
10	ನಿರಾಮಯ	10	8	12	7	8	7	9	10	8	8	10	8	12	8	10	8	9	8	160
11	ನಿರುದ್ಯೋಗ ಭತ್ಯೆ	–	–	–	–	–	–	–	–	–	–	1	–	–	–	–	1	–	–	2
	ಒಟ್ಟು	90	76	85	74	80	74	85	85	122	67	101	70	103	93	76	72	61	80	1494

ಕ್ರ.ಸಂ.	ಯೋಜನೆಗಳ ವಿವರ	2018-19 ನೇ ಸಾಲಿನ ಮತಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ																		
		ಅಥಣಿ	ಕಾಗವಾಡ	ಚಿಕ್ಕೋಡಿ-ಸದಲಗಾ	ನಿಪ್ಪಾಣಿ	ರಾಯ ಬಾಗ	ಕುಡಚಿ	ಹುಕ್ಕೇರಿ	ಯಮಕನ ಮರ್ಡಿ	ಗೋಕಾಕ	ಅರಭಾವಿ	ಬೈಲಹೊಂ ಗಲ	ಕಿತ್ತೂರು	ಸವದತ್ತಿ	ರಾಮ ದುರ್ಗ	ಬೆಳಗಾವಿ ಗ್ರಾಮೀಣ	ಬೆಳಗಾವಿ ಉತ್ತರ	ಬೆಳಗಾವಿ ದಕ್ಷಿಣ	ಖಾನಾ ಪೂರ	ಒಟ್ಟು
		1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14**	**15**	**16**	**17**	**18**	**19**
1	ವಿದ್ಯಾರ್ಥಿವೇತನ	68	40	52	35	51	40	38	30	52	43	50	40	52	37	35	22	22	54	761
2	ಸಾಧನ ಸಲಕರಣೆಗಳು	6	4	6	5	5	5	5	5	6	5	6	4	5	5	6	4	4	4	90
3	ಯಂತ್ರಚಾಲಿತ ದ್ವಿಚಕ್ರ ವಾಹನ	–	–	–	–	–	–	–	–	–	–	–	–	–	–	–	–	–	–	0
4	ಆಧಾರ	–	–	–	–	–	–	–	–	–	–	–	–	–	–	–	–	–	–	0
5	ಟಾಕಿಂಗ್ ಲ್ಯಾಪ್‌ಟಾಪ	–	–	–	–	–	–	–	–	–	–	–	–	–	–	–	12	–	–	12
5	ಸಾಧನೆ/ಪ್ರತಿಭೆ	–	–	–	–	–	–	–	–	–	–	1	–	–	–	–	1	–	–	2
6	ವೈದ್ಯಕೀಯ ಪರಿಹಾರ ನಿಧಿ	–	–	–	–	–	–	–	–	–	–	–	–	–	–	–	–	–	–	0
7	ಶುಲ್ಕ ಮರುಪಾವತಿ	3	2	4	2	3	2	4	2	4	2	4	2	5	2	4	5	4	4	58
8	ವಿವಾಹ ಪ್ರೋತ್ಸಾಹ ಧನ	2	–	1	–	1	–	2	–	1	–	–	–	1	2	1	–	2	2	15
9	ಶಿಶು ಪಾಲನಾ ಭತ್ಯೆ	–	–	–	–	–	–	2	–	–	–	–	–	–	2	–	–	–	–	4
10	ನಿರಾಮಯ	4	-	2	1	4	1	5	2	4	2	2	1	3	-	4	1	1	3	40
11	ನಿರುದ್ಯೋಗ ಭತ್ಯೆ	–	–	–	–	–	–	–	–	–	–	1	–	–	–	–	1	–	–	2
	ಒಟ್ಟು	83	46	65	43	64	48	56	39	67	52	64	47	66	48	50	46	33	67	984

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರಾಜೀವ್ ಪಿ. ಇವರ ಚುಕ್ಕೆ ಗುರುತಿಲ್ಲದ
ಪ್ರಶ್ನೆಸಂಖ್ಯೆ: 2317ಕ್ಕೆ ಅನುಬಂಧ-2

ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದ ಗ್ರಾಮ ಪಂಚಾಯತವಾರು ವಿಕಲಚೇತನರ ಅಂಕಿ ಸಂಖ್ಯೆಗಳ ಮಾಹಿತಿ.

ಕ್ರ.ಸಂ.	ಗ್ರಾಮ ಪಂಚಾಯತಿ ಹೆಸರು	ವಿಕಲಚೇತನರ ಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
1	ಬೆಕ್ಕೇರಿ	42	20	62
2	ಕಟಕಭಾವಿ	66	35	101
3	ನಿಡಗುಂದಿ	70	40	110
4	ಸಪಸುದ್ದಿ	47	32	79
5	ಇಟ್ನಾಳ	33	22	55
6	ಕುಡಚಿ	92	48	140
7	ಕಪ್ಪಲಗುದ್ದಿ	86	55	141
8	ಮುಗಳಖೋಡ	96	48	144
9	ಪಾಲಭಾಂವಿ	42	19	61
10	ಹಿಡಕಲ್	73	56	129
11	ಖೆಮಲಾಪೂರ	55	17	72
12	ನಿಲಜಿ	51	26	77
13	ಮೊರಬ	43	39	82
14	ಹಾರೂಗೇರಿ	94	52	146
15	ಪರಮಾನಂದವಾಡಿ	45	17	62
16	ಕೋಳಿಗುಡ್ಡ	47	35	82
17	ಶಿರಗುರ	32	23	55
18	ಅಲಖನೂರ	62	25	87
19	ಹಂದಿಗುಂದ	46	44	90
20	ಅಳಗವಾಡಿ	69	16	85
21	ಖನದಾಳ	15	12	27
22	ಸುಟ್ಟಟ್ಟಿ	32	16	48
23	ಸಿದ್ದಾಪೂರ	9	7	16
24	ಯಲ್ಪಾರಟ್ಟಿ	13	9	22
	ಒಟ್ಟು	**1260**	**713**	**1973**

ಕರ್ನಾಟಕ ಸರ್ಕಾರ

ಸಂ: ಟಿಡಿ 103ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18 .03.2020.

129 u/s 18/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪಾಟೀಲ್ (ನಡಹಳ್ಳಿ) ಎ.ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2347 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/ 10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪಾಟೀಲ್ (ನಡಹಳ್ಳಿ) ಎ.ಎಸ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2347 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2347
ಸದಸ್ಯರ ಹೆಸರು	: ಶ್ರೀ ಪಾಟೀಲ್ (ನಡಹಳ್ಳಿ) ಎ.ಎಸ್., (ಮುದ್ದೇಬಿಹಾಳ)
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 18-03-2020

ಕ್ರ.ಸ	ಪ್ರಶ್ನೆ	ಉತ್ತರ
ಅ	ರಾಜ್ಯದ 4 ಸಾರಿಗೆ ನಿಗಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ನೀಡುತ್ತಿರುವ ಸೌಲಭ್ಯಗಳಾವುವು; (ಸಂಪೂರ್ಣ ವಿವರ ನೀಡುವುದು)	ರಾಜ್ಯ ರಸ್ತೆ ಸಾರಿಗೆ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದೆ ಮತ್ತು ದಿನಾಂಕ.01.01.2020 ರಿಂದ ವೇತನ ಪರಿಷ್ಕರಣೆ ಆಗಬೇಕಿದೆ. ರಸ್ತೆ ಸಾರಿಗೆ ನೌಕರರು ರಾಜ್ಯ ಸರ್ಕಾರಿ ನೌಕರರು ಪಡೆಯುತ್ತಿರುವ ದರದನ್ವಯವೇ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಪಡೆಯುತ್ತಾರೆ. ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ನೀಡುತ್ತಿರುವ ಇತರೆ ಸೌಲಭ್ಯಗಳ ವಿವರಗಳನ್ನು **ಅನುಬಂಧ** ದಲ್ಲಿ ಅಡಕಗೊಳಿಸಲಾಗಿದೆ.
ಆ	ಸಾರಿಗೆ ನೌಕರರಿಗೆ ಹಾಗೂ ಅವಲಂಬಿತರಿಗೆ ವೈದ್ಯಕೀಯ ವೆಚ್ಚ ದೊರಕಲು ರಾಜ್ಯದ ಯಾವ ಯಾವ ಆಸ್ಪತ್ರೆಗಳಲ್ಲಿ ಉಚಿತ ಸೌಲಭ್ಯ ಒದಗಿಸಲಾಗಿದೆ;	ಸಾರಿಗೆ ನೌಕರರು ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ವೆಚ್ಚ ದೊರಕಲು ರಾಜ್ಯದ ಯಾವುದೇ ಆಸ್ಪತ್ರೆಯಲ್ಲಿ ಉಚಿತ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಆದರೆ, ತೀವ್ರ ಸ್ವರೂಪದ ಕಾಯಿಲೆ ಮತ್ತು ಒಳರೋಗಿ ಚಿಕಿತ್ಸೆ ಅವಶ್ಯವಿರುವ ಪ್ರಕರಣಗಳಲ್ಲಿ ಗರಿಷ್ಠ ಮೊತ್ತದ ವೈದ್ಯಕೀಯ ಮುಂಗಡವನ್ನು ಮಂಜೂರು ಮಾಡಲಾಗುತ್ತದೆ.
ಇ	ಸದರಿ ನೌಕರರು ಹಾಗೂ ಅವಲಂಬಿತರಿಗೆ ವೈದ್ಯಕೀಯ ವೆಚ್ಚವನ್ನು ಸಂಸ್ಥೆಯವರೆ ಭರಿಸುತ್ತಿದ್ದಾರೆಯೇ; ಇಲ್ಲದಿದ್ದಲ್ಲಿ ಕಾರಣವೇನು; (ವಿವರ ನೀಡುವುದು)	ಸಾರಿಗೆ ನೌಕರರು ಮತ್ತು ಅವರ ಕುಟುಂಬದವರು ವೈದ್ಯಕೀಯ ವೆಚ್ಚದ ಮರುಪಾವತಿಗೆ ನಿಯಮಾನುಸಾರ ಅರ್ಹರಿರುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದ ಪ್ರಕರಣಗಳಲ್ಲಿ ಸರ್ಕಾರಿ ಆಸ್ಪತ್ರೆಗಳ ದರದಲ್ಲಿ ಮರುಪಾವತಿ ಮಾಡಲಾಗುತ್ತದೆ. ಸಂಸ್ಥೆಯು ಮಾನ್ಯತೆ ನೀಡಿರುವ ಷೆಡ್ಯೂಲ್ಡ್ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದ ಪ್ರಕರಣಗಳಲ್ಲಿ CGHS-2014 (NON NABH) ದರದಲ್ಲಿ ಮರುಪಾವತಿ ಮಾಡಲಾಗುತ್ತದೆ. ಇತರೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಪ್ರಕರಣಗಳಲ್ಲಿ ಸರ್ಕಾರದಲ್ಲಿರುವಂತೆ ಸರ್ಕಾರಿ ಆಸ್ಪತ್ರೆಗಳ ದರದಲ್ಲಿ ಮರುಪಾವತಿ ಮಾಡಲಾಗುತ್ತದೆ.
ಈ	ರಾಜ್ಯದ ಸಾರಿಗೆ ಸಿಬ್ಬಂದಿಗಳಿಗೆ ಸಬ್ಸಿಡಿ ದರದಲ್ಲಿ ಆಹಾರ ಪದಾರ್ಥಗಳನ್ನು ನೀಡಲು ನಿಗಮ ಕ್ರಮ ಕೈಗೊಳ್ಳಲಾಗುವುದೇ; ಇಲ್ಲದಿದ್ದಲ್ಲಿ ಕಾರಣವೇನು? (ವಿವರ ನೀಡುವುದು)	ರಾಜ್ಯದ ಸಾರಿಗೆ ನೌಕರರಿಗೆ ಸಬ್ಸಿಡಿ ದರದಲ್ಲಿ ಆಹಾರ ಪದಾರ್ಥಗಳನ್ನು ನೀಡುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಟಿಡಿ 103 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

<u>ಅನುಬಂಧ</u>

<u>ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ಕಲ್ಪಿಸಿರುವ ಇತರೆ ಸೌಲಭ್ಯಗಳ ವಿವರ.</u>

1. <u>ರಜಾ ಸೌಲಭ್ಯ:</u> ರಾಜ್ಯ ಸರ್ಕಾರದ ಮಾದರಿಯಲ್ಲಿ ಗಳಿಕೆ ರಜೆ ಸೌಲಭ್ಯ, ಗಳಿಕೆ ರಜೆ ನಗದೀಕರಣ, ಹೆರಿಗೆ ರಜೆ ಸೌಲಭ್ಯ, ವೈದ್ಯಕೀಯ ಮರುಪಾವತಿ ಸೌಲಭ್ಯವನ್ನು ಒದಗಿಸಲಾಗಿದೆ.
2. <u>ಭವಿಷ್ಯ ನಿಧಿ ಮತ್ತು ಕುಟುಂಬ ಪಿಂಚಣಿ ಯೋಜನೆ:</u> ನೌಕರರ ವೇತನದ (Basic+DA) ಮೇಲೆ ಶೇ 12ರಷ್ಟು ಕಡಿತ ಮಾಡಿ ನೌಕರರ ಭವಿಷ್ಯ ನಿಧಿ ಖಾತೆಗೆ ಪಾವತಿಸಲಾಗುತ್ತದೆ. ಜೊತೆಗೆ, ಆಡಳಿತ ವರ್ಗದ ಪರವಾಗಿ ಸಹ ಶೇ.12 ಅನ್ನು ಪಾವತಿಸಲಾಗುತ್ತದೆ. ಆಡಳಿತ ವರ್ಗದ ಶೇ.12 ರಲ್ಲಿ ಶೇ.8.33 ರಷ್ಟನ್ನು ಹಾಲಿ ರೂ.1250/- ಕ್ಕೆ ಸೀಮಿತಗೊಳಿಸಿ ನೌಕರರ ಪಿಂಚಣಿ ಸಲುವಾಗಿ ಪಾವತಿಸಲಾಗುತ್ತದೆ.
   ಕಾರ್ಮಿಕರ ಠೇವಣಿ ವಿಮಾ ಯೋಜನೆ (ಇಡಿಎಲ್ಐ): ಭವಿಷ್ಯ ನಿಧಿಯಡಿ ಮೃತ ನೌಕರರ ನಾಮನಿದಾರರು ಗರಿಷ್ಠ ರೂ.6.00 ಲಕ್ಷಗಳ ವರೆಗೆ ಈ ಯೋಜನೆಯಡಿ ವಿಮಾ ಪರಿಹಾರಕ್ಕೆ ಅರ್ಹರಿರುತ್ತಾರೆ
3. <u>ಉಪಧನ ಯೋಜನೆ:</u> ನಿಗಮದ ಉಪದನ ನಿಯಮಾವಳಿ ಅಥವಾ ಉಪದನ ಕಾಯ್ದೆ (ಕೈಗಾರಿಕಾ ಒಪ್ಪಂದದ ಕ್ಲಾಸ್ ನಂತೆ) ಇವೆರಡರ ಪೈಕಿ ನೌಕರರಿಗೆ ಯಾವುದು ಅನುಕೂಲವಾಗುತ್ತದೆಯೋ ಆ ಮೊತ್ತವನ್ನು ಯಾವುದೇ ಮಿತಿಯ ನಿರ್ಬಂಧವಿಲ್ಲದೇ ನೀಡಲಾಗುತ್ತಿದೆ. ರಾಜ್ಯ ಸರ್ಕಾರದಲ್ಲಿ ಗರಿಷ್ಠ ರೂ.20.00 ಲಕ್ಷಗಳನ್ನು ಮಾತ್ರ ನೀಡಲಾಗುತ್ತದೆ. 2002 ರ ನಂತರ ಸೇವೆಗೆ ಸೇರಿದ ನೌಕರರು ಉಪಧನ ಕಾಯಿದೆಯನ್ವಯ ಮಾತ್ರ ಉಪಧನ ಪಡೆಯಲು ಅರ್ಹರು.
4. <u>ಪರ್ಯಾಯ ಹುದ್ದೆ</u> : ಅಂಗವಿಕಲ ವ್ಯಕ್ತಿಗಳ ಕಾಯ್ದೆ –1995ರಲ್ಲಿ ಸೂಚಿಸಲಾದ ಖಾಯಿಲೆಯಿಂದ ಬಳಲುತ್ತಿದ್ದು, ಕನಿಷ್ಠ ಶೇಕಡ 40 ಕ್ಕಿಂತ ಕಡಿಮೆ ಇರದ ಪ್ರಮಾಣದ ಅಂಗವಿಕಲತೆಯನ್ನು ಹೊಂದಿರುವ ನೌಕರರನ್ನು ಪರ್ಯಾಯ ಹುದ್ದೆಯಲ್ಲಿ ನಿಯೋಜಿಸಿ ಅನುಕೂಲ ಮಾಡಿಕೊಡಲಾಗುತ್ತದೆ.
5. ನಿಗಮದ ಅಂಧ ಮತ್ತು ಅಂಗವಿಕಲ ನೌಕರರಿಗೆ ವಾಹನ ಭತ್ಯೆಯ ದರವನ್ನು ಸರ್ಕಾರದಲ್ಲಿರುವಂತೆ ಅವರ ಮೂಲ ವೇತನದ ಶೇಕಡ 6 ರ ದರದಲ್ಲಿ ಯಾವುದೇ ಗರಿಷ್ಠ ಮಿತಿಯಿಲ್ಲದೆ ನೀಡಲಾಗುತ್ತಿದೆ.
6. **ವೈದ್ಯಕೀಯ ಮರುಪಾವತಿ ಮತ್ತು ವೈದ್ಯಕೀಯ ಮುಂಗಡ:** ನೌಕರರು ಮತ್ತು ಅವರ ಕುಟುಂಬದವರು ಹಾಗೂ ಅವಲಂಬಿತ ಹೆತ್ತವರು ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನಿಯಮಾನುಸಾರ ಪಡೆಯಲು ಅರ್ಹರಿರುತ್ತಾರೆ.

   - ತೀವ್ರ ಸ್ವರೂಪದ ಖಾಯಿಲೆ ಅಥವಾ ಅಪಘಾತ ಪ್ರಕರಣಗಳಲ್ಲಿ ಗರಿಷ್ಟ ಮೊತ್ತದ ವೈದ್ಯಕೀಯ ಮುಂಗಡವನ್ನು ಸಹ ನೀಡಲಾಗುತ್ತದೆ. ಜೊತೆಗೆ ಇತರೆ ತೀವ್ರ ಸ್ವರೂಪದ ಕಾಯಿಲೆ ಪ್ರಕರಣಗಳಲ್ಲಿ ಗರಿಷ್ಟ ರೂ.1,00,000/- ಅಥವಾ ಅಂದಾಜು ಪಟ್ಟಿಯ ಶೇ.50 ರಷ್ಟು ಮೊತ್ತವನ್ನು ಮುಂಗಡವಾಗಿ ನೀಡಲಾಗುತ್ತಿದೆ.
7. <u>ಬೋನಸ್:</u> ಬೋನಸ್ ಕಾಯಿದೆ ಅನ್ವಯ ರೂ.21,000/- ಗಳವರೆಗಿನ ವೇತನ ಪಡೆಯುತ್ತಿರುವ ಎಲ್ಲಾ ನೌಕರರಿಗೆ ಗರಿಷ್ಠ ರೂ.7000/-ಗಳ ಬೋನಸ್ ಅನ್ನು ಪಾವತಿಸಲಾಗುತ್ತದೆ.
8. <u>ಪ್ರೋತ್ಸಾಹ ಧನ ಯೋಜನೆ:</u> ಚಾಲಕ ನಿರ್ವಾಹಕರು ಸಾರಿಗೆ ಆದಾಯದ ಪ್ರೋತ್ಸಾಹ ಧನಕ್ಕೆ ಅರ್ಹರಿದ್ದು, ನಗರ/ಸಬ್‌ಅರ್ಬನ್ ಅನುಸೂಚಿಗಳ ಸಾರಿಗೆ ಆದಾಯದ ಶೇಕಡ 3 ರಷ್ಟು ಮತ್ತು ಸಾಮಾನ್ಯ, ಗ್ರಾಮಾಂತರ ಪ್ರದೇಶ, ವೇಗದೂತ, ಪ್ರತಿಷ್ಠಿತ ಸೇವೆಗಳ ಸಾರಿಗೆ ಆದಾಯದ ಶೇಕಡ 2 ರಷ್ಟನ್ನು ಪ್ರೋತ್ಸಾಹ ಧನದ ರೂಪದಲ್ಲಿ ಪಡೆಯುವರು. ವೇಗದೂತ ಸಾರಿಗೆಗಳಲ್ಲಿ ಮಾಸಿಕ ರೂ.3000/- ಗಳು ಮತ್ತು ಪ್ರತಿಷ್ಠಿತ ಸೇವೆಗಳಲ್ಲಿ ಮಾಸಿಕ ರೂ.6000/- ಗಳಷ್ಟು ಪಡೆಯುತ್ತಾರೆ.

   - ಇಪ್ಪತ್ತೈದು ವರ್ಷಗಳ ಸೇವೆ ಸಲ್ಲಿಸಿರುವ ನಿರ್ವಾಹಕರಿಗೆ ಆರ್ಥಿಕವಾಗಿ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಅವರಿಗೆ ಹೆಚ್ಚುವರಿಯಾಗಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.
9. <u>ಸ್ವಯಂ ನಿವೃತ್ತಿ ಯೋಜನೆ:</u> ವೈದ್ಯಕೀಯವಾಗಿ ಅಸಮರ್ಥರಾದ ನೌಕರರಿಗೆ ರೂ.6.00 ಲಕ್ಷಗಳವರೆಗಿನ ಗರಿಷ್ಠ ಮೊತ್ತದ ಹೆಚ್ಚುವರಿ ಆರ್ಥಿಕ ಸೌಲಭ್ಯದ ಐಚ್ಛಿಕ ಸ್ವಯಂ-ನಿವೃತ್ತಿ ಯೋಜನೆ ಜಾರಿಯಲ್ಲಿದೆ. ಅಲ್ಲದೇ, ಶೇಕಡ 40 ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಪ್ರಕರಣಗಳಲ್ಲಿ ನೌಕರರು ಸ್ವಯಂ ನಿವೃತ್ತಿ ಪಡೆಯಲು ಇಚ್ಛಿಸಿದಲ್ಲಿ ಅವರಿಗೆ ಗರಿಷ್ಠ ರೂ.10.00 ಲಕ್ಷಗಳವರಗೆ ಹೆಚ್ಚುವರಿ ಆರ್ಥಿಕ ಸೌಲಭ್ಯ ನೀಡಲಾಗುತ್ತಿದೆ.

---2

10. <u>ಗೃಹ ಸಾಲಕ್ಕೆ ಬಡ್ಡಿ ಸಹಾಯ ಧನ</u> : ನಿಗಮದ ನೌಕರರು/ಅಧಿಕಾರಿಗಳಿಗೆ ಮನೆ ಕಟ್ಟಲು / ಕೊಳ್ಳಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆಯುವ ಗರಿಷ್ಠ ರೂ.5.00 ಲಕ್ಷ ಸಾಲಕ್ಕೆ ಶೇಕಡ 4 ರಷ್ಟು ಬಡ್ಡಿ ಸಹಾಯ ಧನವನ್ನು ನೀಡಲಾಗುತ್ತದೆ. ಅಂದರೆ, ವಾರ್ಷಿಕ ಗರಿಷ್ಠ ರೂ.20,000/- ಮತ್ತು ಸೇವಾವಧಿಯಲ್ಲಿ ಒಟ್ಟು ರೂ.1,00,000/- ಗಳನ್ನು ಬಡ್ಡಿ ಸಹಾಯಧನವಾಗಿ ನೀಡಲಾಗುತ್ತಿದೆ.
11. <u>ಶಿಶುಪಾಲನಾ ಭತ್ಯೆ:</u> ಮಹಿಳಾ ಸಿಬ್ಬಂದಿಗಳಿಗೆ ಮಗುವಿಗೆ 3 ವರ್ಷ ತುಂಬುವವರೆಗೆ ಮಾಸಿಕ ರೂ.1250/- ರಂತೆ ಶಿಶುಪಾಲನಾ ಭತ್ಯೆ (ಎರಡು ಮಕ್ಕಳಿಗೆ ಮಾತ್ರ) ಯನ್ನು ನೀಡಲಾಗುತ್ತಿದೆ.
12. ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ ಒಟ್ಟು 730 ದಿವಸಗಳ <u>"ಶಿಶು ಪಾಲನಾ ರಜೆ"</u>ಯನ್ನು ವೇತನಸಹಿತವಾಗಿ ಪಡೆಯುವರು.
13. <u>ವಿಕಲ ಚೇತನ ಮಕ್ಕಳಿಗೆ ಶಿಕ್ಷಣ ಮತ್ತು ಪೋಷಣಾ ಭತ್ಯೆ:</u> ನೌಕರರ ಅವಲಂಬಿತ ಅಂಧ ಅಥವಾ ಚಲನವೈಕಲ್ಯತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ಒಂದು ಮಗುವಿಗೆ ತಲಾ ರೂ.1000/- ಶಿಕ್ಷಣ ಭತ್ಯೆಯನ್ನು ಮತ್ತು ಅಂಗವಿಕಲತೆ ಹೊಂದಿರುವ ನೌಕರರ ಮಕ್ಕಳ ಪಾಲನೆ/ಪೋಷಣೆ ಮಾಡುವುದಕ್ಕಾಗಿ ಮಾಸಿಕ ರೂ.500/- ಗಳ ಪೋಷಣಾ ಭತ್ಯೆಯನ್ನು ನಿಗಮದ ನೌಕರರಿಗೆ ಮಂಜೂರು ಮಾಡಲಾಗುತ್ತದೆ.
14. <u>ಮಕ್ಕಳ ವಿದ್ಯಾಭ್ಯಾಸಕ್ಕೆ ಉಚಿತ ಪಾಸು:</u> ನಿಗಮದ ನೌಕರರ ಮಕ್ಕಳು ಶಾಲಾ /ಕಾಲೇಜುಗಳಿಗೆ ಪ್ರಯಾಣಿಸಲು ಉಚಿತ ಬಸ್ ಪಾಸ್ ನೀಡಲಾಗುತ್ತದೆ. ಅಲ್ಲದೆ, ಸೇವೆಯಲ್ಲಿರುವಾಗ ನಿಧನರಾದ ನೌಕರರ ಮಕ್ಕಳಿಗೂ ಸಹ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ.
15. <u>ಕೌಟುಂಬಿಕ ಪಾಸು:</u> ನಿಗಮದ ನೌಕರರು ವಾರ್ಷಿಕ ಒಂದು ಸಾರಿ ಮಾತ್ರ (ಒಂದು ತಿಂಗಳ ಅವಧಿಯಲ್ಲಿ ಚಾಲ್ತಿಯಲ್ಲಿರುವಂತೆ) ಕುಟುಂಬ ಸಮೇತ ಪ್ರಯಾಣಿಸಲು ಉಚಿತ ಪಾಸ್ ನೀಡಲಾಗುವುದು.
16. <u>ಶೈಕ್ಷಣಿಕ ಸಹಾಯ ಧನ / ನಗದು ಪುರಸ್ಕಾರ</u> : ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮತ್ತು ಬಿಇ ಸೇರಿದಂತೆ ಪದವಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ನೌಕರರ ಮಕ್ಕಳಿಗೆ ರೂ:2,000/- ರಿಂದ ರೂ:6,000/- ರವರೆಗೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.
17. <u>ಡಿಆರ್‌ಬಿಎಫ್ ಯೋಜನೆ:</u> ಸದಸ್ಯ ನೌಕರರು ಮೃತಪಟ್ಟಲ್ಲಿ ವೇತನದಿಂದ ಕಡಿತವಾದ ವಂತಿಕೆ ಹಣವನ್ನು ನಿಗದಿತ ಬಡ್ಡಿ ಮತ್ತು ಹೆಚ್ಚುವರಿ ರೂ.1,50,000 ಪರಿಹಾರ ಸಮೇತ ನೀಡಲಾಗುವುದು.
18. <u>ನೌಕರರ ಕುಟುಂಬ ಕಲ್ಯಾಣ ಯೋಜನೆ:</u> ನಿಗಮದ ಆಂತರಿಕ ವಿಮಾ ಯೋಜನೆಯ ಸದಸ್ಯ ನೌಕರರು ಸೇವೆಯಲ್ಲಿರುವಾಗ ಅಕಾಲಿಕ ಮರಣ ಹೊಂದಿದ ಪಕ್ಷದಲ್ಲಿ ನಿಯಮಾನುಸಾರ ಅರ್ಹ ಉಪದನ, ಭವಿಷ್ಯನಿಧಿ, ಡಿಆರ್‌ಬಿಎಫ್ ಇತ್ಯಾದಿಗಳ ಜೊತೆಗೆ ಹೆಚ್ಚುವರಿಯಾಗಿ ರೂ: 3.00 ಲಕ್ಷಗಳ ವಿಮಾ ಹಣವನ್ನು ಅವರ ಅವಲಂಬಿತರಿಗೆ ನೀಡುವ ಮಹತ್ವದ ಯೋಜನೆ ಜಾರಿಯಲ್ಲಿರುತ್ತದೆ.
19. <u>ಅನುಕಂಪದ ಆಧಾರದ ಮೇಲೆ ಉದ್ಯೋಗ:</u> ನೌಕರರು ಸೇವೆಯಲ್ಲಿರುವಾಗ ನಿಧನರಾದ ಪಕ್ಷದಲ್ಲಿ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಒರ್ವ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕ ನೀಡಲಾಗುವುದು.
20. <u>ನಿವೃತ್ತ ನೌಕರರ ಉಚಿತ ಪಾಸು:</u> ದಿನಾಂಕ:01-01-1980 ರಂದು ಮತ್ತು ನಂತರದಲ್ಲಿ ನಿವೃತ್ತರಾಗುವ ನೌಕರ ಅಥವಾ ನೌಕರಳು ಆತನ/ಅವಳ ಪತಿ/ಪತ್ನಿಗೆ ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ಕರಾರಸಾಸಂಸ್ಥೆಯ ಬಸ್ಸುಗಳು ಕಾರ್ಯಾಚರಣೆ ಮಾಡುವ ಯಾವುದೇ ಸ್ಥಳಕ್ಕೆ ಸಂಚರಿಸಲು 5 ವರ್ಷಗಳವರೆಗೆ ಉಚಿತ ಪಾಸುಗಳನ್ನು ನೀಡಲಾಗುವುದು.

    - ದಿನಾಂಕ:1-1-1988 ಮತ್ತು ನಂತರ ನಿವೃತ್ತಿಯಾಗುವ ನೌಕರರಿಗೆ (ದರ್ಜೆ3 ಮತ್ತು 4) ನಗರ ಸಾರಿಗೆ ಬಸ್ಸುಗಳಲ್ಲಿ ಸಂಚರಿಸಲು ಉಚಿತ ಪಾಸುಗಳನ್ನು ನೀಡಲಾಗುತ್ತಿದೆ.
    - ನಿಗಮದ ನಿವೃತ್ತ ನೌಕರರು ಮತ್ತು ಅಧಿಕಾರಿಗಳು ಪ್ರತಿ ವರ್ಷ ರೂ.500/- ಸಂಸ್ಕರಣಾ ಶುಲ್ಕ ಪಾವತಿಸಿ, ನಿವೃತ್ತ ಪಾಸ್ ಪಡೆದು ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
    - ನಿವೃತ್ತ ಅಧಿಕಾರಿಗಳು ಅವರ ಪತ್ನಿ/ಪತಿ ರಾಜಹಂಸ ಮತ್ತು ಹವಾನಿಯಂತ್ರಿತ ಸಾರಿಗೆಗಳು ಸೇರಿದಂತೆ ಎಲ್ಲಾ ಪ್ರತಿಷ್ಠಿತ ಸಾರಿಗೆಗಳಲ್ಲಿ ಆಯಾ ವರ್ಗದ ಪೂರಕ ಮೂಲ ಪ್ರಯಾಣ ದರದ ಶೇಕಡ 50 ರಷ್ಟು ಪ್ರಯಾಣ ದರ ಆಕರಿಸಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

-**-

ಕರ್ನಾಟಕ ಸರ್ಕಾರ

ಸಂ: ಟಿಡಿ 96 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 18.03.2020.

78 us
18/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2228 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2228 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2228
ಸದಸ್ಯರ ಹೆಸರು : ಶ್ರೀ ಹ್ಯಾರಿಸ್.ಎನ್.ಎ (ಶಾಂತಿನಗರ)
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 18-03-2020

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸಾರಿಗೆ ಇಲಾಖಾ ವ್ಯಾಪ್ತಿಯಲ್ಲಿ ಬರುವ ಕೆ.ಎಸ್.ಆರ್.ಟಿ.ಸಿ ಮತ್ತು ಇತರ ಸಾರಿಗೆ ನಿಗಮಗಳಿಗೆ ಸರ್ಕಾರ 2016-17 ರಿಂದ 2019-20ರವರೆಗೆ ನಿಗಧಿಪಡಿಸಿದ, ಹಂಚಿದ ಮತ್ತು ವೆಚ್ಚವಾದ ಅನುದಾನವೆಷ್ಟು; (ಸಾರಿಗೆ ಸಂಸ್ಥೆಗ ನಿಗಮವಾರು, ವರ್ಷವಾರು ವಿವರಗಳನ್ನು ನೀಡುವುದು)</td><td>ಸಾರಿಗೆ ಇಲಾಖಾ ವ್ಯಾಪ್ತಿಯಲ್ಲಿ ಬರುವ ಕೆ.ಎಸ್.ಆರ್.ಟಿ.ಸಿ ಮತ್ತು ಇತರ ಸಾರಿಗೆ ನಿಗಮಗಳಿಗೆ ಸರ್ಕಾರ 2016-17 ರಿಂದ 2019-20ರವರೆಗೆ ನಿಗಧಿಪಡಿಸಿದ, ಹಂಚಿದ ಮತ್ತು ವೆಚ್ಚವಾದ ಅನುದಾನದ ಮಾಹಿತಿ ಕೆಳಕಂಡಂತಿದೆ.
<table>
<tr><th>ವರ್ಷ</th><th colspan="3">2016-17</th></tr>
<tr><th>ಸಂಸ್ಥೆಯ ಹೆಸರು</th><th>ಆಯ್ಯವ್ಯಯದಲ್ಲಿ ನಿಗಧಿ ಪಡಿಸಿದ ಅನುದಾನ</th><th>ಬಿಡುಗಡೆಯಾದ ಅನುದಾನ</th><th>ವೆಚ್ಚ</th></tr>
<tr><td>ಕ.ರಾ.ರ.ಸಾ.ನಿಗಮ</td><td>6276</td><td>6276</td><td>6276</td></tr>
<tr><td>ಬೆಂ.ಮ.ಸಾ.ಸಂ</td><td>6070</td><td>6070</td><td>6070</td></tr>
<tr><td>ವಾಕ.ರ.ಸಾ.ಸಂ</td><td>4926</td><td>4926</td><td>4253</td></tr>
<tr><td>ಈ.ಕ.ರಾ.ಸಂ</td><td>4828</td><td>4828</td><td>4828</td></tr>
<tr><th>ವರ್ಷ</th><th colspan="3">2017-18</th></tr>
<tr><td>ಕ.ರಾ.ರ.ಸಾ.ನಿಗಮ</td><td>8926</td><td>8926</td><td>8926</td></tr>
<tr><td>ಬೆಂ.ಮ.ಸಾ.ಸಂ</td><td>14367</td><td>14367</td><td>13907</td></tr>
<tr><td>ವಾಕ.ರ.ಸಾ.ಸಂ</td><td>6926</td><td>6926</td><td>5975</td></tr>
<tr><td>ಈ.ಕ.ರಾ.ಸಂ.</td><td>6828</td><td>6828</td><td>6828</td></tr>
<tr><th>ವರ್ಷ</th><th colspan="3">2018-19</th></tr>
<tr><td>ಕ.ರಾ.ರ.ಸಾ.ನಿಗಮ</td><td>9926</td><td>9926</td><td>8926</td></tr>
<tr><td>ಬೆಂ.ಮ.ಸಾ.ಸಂ</td><td>33797</td><td>33797</td><td>33257.3</td></tr>
<tr><td>ವಾಕ.ರ.ಸಾ.ಸಂ</td><td>6926</td><td>6926</td><td>4795</td></tr>
<tr><td>ಈ.ಕ.ರಾ.ಸಂ</td><td>6828</td><td>6828</td><td>6828</td></tr>
<tr><th>ವರ್ಷ</th><th colspan="3">2019-20 (ಫೆಬ್ರವರಿ-20ರವರೆಗೆ)</th></tr>
<tr><td>ಕ.ರಾ.ರ.ಸಾ.ನಿಗಮ</td><td>8926</td><td>8926</td><td>6001</td></tr>
<tr><td>ಬೆಂ.ಮ.ಸಾ.ಸಂ</td><td>23433</td><td>12009.8</td><td>11903.1</td></tr>
<tr><td>ವಾಕ.ರ.ಸಾ.ಸಂ</td><td>6926</td><td>4959</td><td>5413</td></tr>
<tr><td>ಈ.ಕ.ರಾ.ಸಂ</td><td>6828</td><td>4828</td><td>3828</td></tr>
</table></td></tr>
<tr><td>ಆ</td><td>ಸಾರಿಗೆ ನಿಗಮಗಳನ್ನು ನಷ್ಟದ ಸುಳಿಯಿಂದ ಹೊರ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಸಾರಿಗೆ ನಿಗಮಗಳನ್ನು ನಷ್ಟದ ಸುಳಿಯಿಂದ ಹೊರ ತರಲು ಸರ್ಕಾರ ಕೈಗೊಂಡಿರುವ ಕ್ರಮದ ಕುರಿತು ಮಾಹಿತಿಯನ್ನು ಅನುಬಂಧ-ಅ ರಲ್ಲಿ ಒದಗಿಸಿದೆ.</td></tr>
<tr><td>ಇ</td><td>ಸದರಿ ವರ್ಷಗಳಲ್ಲಿ ವಿವಿಧ ಸಾರಿಗೆ ನಿಗಮಗಳಿಗಾಗಿ ಖರೀದಿಸಿದ ವಿವಿಧ ಹೊಸ ಬಸ್ಸುಗಳ ಸಂಖ್ಯೆ ಮತ್ತು ವೆಚ್ಚದ ಮೊತ್ತ ಎಷ್ಟು; ಖರೀದಿಸಿದ ಬಸ್ಸುಗಳಿಗೆ ಪಾವತಿಸಿದ ಮೊತ್ತವೆಷ್ಟು; ಸಾರಿಗೆ ಸಂಸ್ಥೆಗಳು, ನಿಗಮವಾರು, ವರ್ಷವಾರು ಖರೀದಿಸಿದ ಬಸ್ಸುಗಳ ವಿವರ ನೀಡುವುದು?</td><td>ಸದರಿ ವರ್ಷಗಳಲ್ಲಿ ವಿವಿಧ ಸಾರಿಗೆ ನಿಗಮಗಳಿಗಾಗಿ ಖರೀದಿಸಿದ ವಿವಿಧ ಹೊಸ ಬಸ್ಸುಗಳ ಸಂಖ್ಯೆ ಮತ್ತು ವೆಚ್ಚದ ವಿವರ ಹಾಗೂ ಪಾವತಿಸಿದ ಮೊತ್ತದ ವಿವರವನ್ನು ಅನುಬಂಧ-ಆ ರಲ್ಲಿ ನೀಡಲಾಗಿದೆ.</td></tr>
</table>

ಸಂಖ್ಯೆ: ಟಿಡಿ 96 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ–ಅ

1) ಸಾರಿಗೆ ಸಂಸ್ಥೆಗಳಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಐರಾವತ ಕ್ಲಬ್ ಕ್ಲಾಸ್, ಫ್ಲೈ–ಬಸ್, ಅಂಬಾರಿ ಡ್ರೀಮ್ ಕ್ಲಾಸ್ ಮುಂತಾದ ಪ್ರತಿಷ್ಟಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

2) ಪ್ರಯಾಣಿಕರ ಅನುಕೂಲಕ್ಕಾಗಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಈ ಕೆಳಕಂಡ ವ್ಯವಸ್ಥೆಗಳನ್ನು ಜಾರಿಗೊಳಿಸಲಾಗಿದೆ.

- ಟಿಕೇಟ್ ವಿತರಣೆಯಲ್ಲಿ ಇ.ಟಿ.ಎಂ (Electronic Ticketing Machine).
- ವಿ.ಟಿ.ಎಂ.ಎಸ್(ವೆಹಿಕಲ್ ಟ್ರ್ಯಾಕಿಂಗ್ & ಮಾನಿಟರಿಂಗ್ ಸಿಸ್ಟಮ್) ವ್ಯವಸ್ಥೆ.
- ಮುಂಗಡ ಟಿಕೇಟು ಕಾಯ್ದಿರಿಸುವ ಎಂ–ಬುಕಿಂಗ್ ಮತ್ತು ಇ–ಬುಕಿಂಗ್ ವ್ಯವಸ್ಥೆ.
- ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆ ಗಳನ್ನು ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.
- ಎಂ–ಟಿಕೆಟನ್ನು ಲ್ಯಾಪ್‌ಟಾಪ್ ಐಪ್ಯಾಡ್/ಟ್ಯಾಬ್ಲೆಟ್ ಅಥವಾ ಮೊಬೈಲ್ ಫೋನ್‌ನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.
- ಬಸ್ ನಿಲ್ದಾಣಗಳಲ್ಲಿ ಬಸ್ ಮಾರ್ಗದ ಮಾಹಿತಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ತಿಳಿಸಲು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆ.
- ಬೆಂಮನಸಾ ಸಂಸ್ಥೆಯು ಸಂಚಾರ ದಟ್ಟಣೆ ಕಡಿಮೆಗೊಳಿಸುವ ಸಲುವಾಗಿ ಬಿಬಿಎಂಪಿ, ಬಿಟಿಪಿ, ನಗರ ಭೂಸಾರಿಗೆ ನಿರ್ದೇಶನಾಲಯಗಳ ಸಹಯೋಗದೊಂದಿಗೆ ಸೆಂಟ್ರಲ್ ಸಿಲ್ಕ್ ಬೋರ್ಡನಿಂದ ಟಿನ್ ಫ್ಯಾಕ್ಟರಿಯವರೆಗೆ "ಬಸ್ ಆದ್ಯತಾ ಪಥ"ವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದರಿಂದ ನಗರದ ಸಂಚಾರ ದಟ್ಟಣೆಯು ಕಡಿಮೆಯಾಗಿ, ಸಾರ್ವಜನಿಕರನ್ನು ಸಮೂಹ ಸಾರಿಗೆ ಬಳಸಲು ಉತ್ತೇಜಿಸಲಾಗುತ್ತಿದೆ.

–*–*–*–

ಅನುಬಂಧ–ಆ

(ರೂ.ಕೋಟಿಗಳಲ್ಲಿ)

ವರ್ಷ	2016-17			2017-18			2018-19			2019-20		
ಸಂಸ್ಥೆಯ ಹೆಸರು	ಬಸ್ಸುಗಳ ಸಂಖ್ಯೆ	ವೆಚ್ಚ	ಪಾವತಿಸಿದ ಮೊತ್ತ	ಬಸ್ಸುಗಳ ಸಂಖ್ಯೆ	ವೆಚ್ಚ	ಪಾವತಿಸಿದ ಮೊತ್ತ	ಬಸ್ಸುಗಳ ಸಂಖ್ಯೆ	ವೆಚ್ಚ	ಪಾವತಿಸಿದ ಮೊತ್ತ	ಬಸ್ಸುಗಳ ಸಂಖ್ಯೆ	ವೆಚ್ಚ	ಪಾವತಿಸಿದ ಮೊತ್ತ
ಕ.ರಾ.ರ.ಸಾ.ನಿಗಮ	938	286.30	286.30	1514	390.63	390.63	391	120.30	120.30	516	178.81	130.39
ಬೆಂ.ಮ.ಸಾ.ಸಂ	101	–	75.88	1406	–	449.30	292	–	78.90	300	–	43.23
ವಾಕ.ರ.ಸಾ.ಸಂ	642	147.81	147.81	566	130.34	130.34	143	33.65	33.65	370	101.98	63.50
ಈ.ಕ.ರಾ.ಸಂ	384	77.52	77.52	996	229.98	229.98	544	126.60	126.60	–	–	–

–*–*–*–

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಆಯುಕ್ತರವರ ಕಛೇರಿ, ಗ್ರಾ.ಕುನೀ.&ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009. ☎:080–22240508 📠:22240509
ಇ–ಮೇಲ್: krwssd@gmail.com

ಸಂ:ಗ್ರಾಕುನೀ&ನೈಇ/111/ಗ್ರಾನೀಸ(5)2020 ದಿನಾಂಕ:19.03.2020

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ:2334ಕ್ಕೆ** ಸಂಬಂಧಿಸಿದ ಮೇಲಿನ ಕ್ರಮ /ವಾಸ್ತವಿಕ ವರದಿಯ ಉತ್ತರ ನೀಡುವ ಬಗ್ಗೆ.

******

ಮಾನ್ಯ ವಿಧಾನ ಸಭಾ ಸದಸ್ಯರಾದ **ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ:2334ಕ್ಕೆ** ಸಂಬಂಧಿಸಿದ ಉತ್ತರದ **100** ಪ್ರತಿಗಳನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,
ಕೆ.ಪಿ. [signature] 19/03/2020
ಪತ್ರಾಂಕಿತ ವ್ಯವಸ್ಥಾಪಕರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಪ್ರತಿಯನ್ನು:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರಿಗೆ

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 2334
ಉತ್ತರ ದಿನಾಂಕ : 18.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಒಟ್ಟಾರೆ 6022 ಗ್ರಾಮ ಪಂಚಾಯತಿಗಳಿರುತ್ತವೆ.
ಆ)	ಗ್ರಾಮೀಣ ಕುಡಿಯುವ ನೀರು ಯೋಜನೆಗಾಗಿ ಇದುವರೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ;	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ರೂ.254308.00ಲಕ್ಷ (ಫೆಬ್ರವರಿ–2020ರ ಅಂತ್ಯಕ್ಕೆ) ಅನುದಾನ ಬಿಡುಗಡೆ ಮಾಡಲಾಗಿದೆ.
ಇ)	ಗ್ರಾಮೀಣ ಭಾಗದ ಶಾಶ್ವತ ಕುಡಿಯುವ ನೀರಿಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ರಾಜ್ಯದ ಗ್ರಾಮೀಣ ಭಾಗಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡಲು ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ರಾಜ್ಯದ ಆಯಾ ಜಿಲ್ಲೆಗಳ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಅವಶ್ಯಕತೆಯ ಅನುಸಾರ ಕೈಗೆತ್ತಿಕೊಳ್ಳಲು ಸರ್ಕಾರವು "ಜಲಧಾರೆ" ಯೋಜನೆಯನ್ನು ರೂಪಿಸಿದೆ.
ಈ)	ರಾಜ್ಯದ ಅಂತರ್ಜಲ ಕುಸಿತವನ್ನು ತಡೆಯಲು ಸರ್ಕಾರವು ತೆಗೆದುಗೊಂಡಿರುವ ಕ್ರಮವೇನು;	ಅಂತರ್ಜಲ ಮಟ್ಟ ಹೆಚ್ಚಿಸಲು ತಾಂತ್ರಿಕ ಅವಶ್ಯಕತೆ ಇರುವ ಸ್ಥಳಗಳಲ್ಲಿ ಇಂಗು ಕೆರೆ, ಚೆಕ್ ಡ್ಯಾಂ, ಸೇತುವೆ ಸಹಿತ ಬಾಂದಾರ ಮತ್ತು ಪಿಕಪ್‌ಗಳನ್ನು ನಿರ್ಮಿಸಿ ಮಳೆ ನೀರು ಸಂಗ್ರಹಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಕೆರೆಗಳ ಆಧುನೀಕರಣ ಅಡಿಯಲ್ಲಿ ಕೆರೆಗಳಲ್ಲಿನ ಹೂಳು ತೆಗೆದು ಹೆಚ್ಚಿನ ನೀರು ಸಂಗ್ರಹಿಸಲು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಹಾಗೂ ನದಿಗಳಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದ ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಯಾಗುವುದು.
ಉ)	ಪ್ರತಿ ವರ್ಷ ಅಂತರ್ಜಲದ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಎಷ್ಟು ಅಡಿಗಳವರೆಗೆ ಅಂತರ್ಜಲ ಕುಸಿತಗೊಂಡಿದೆ?	ಬಂದಿದೆ. ರಾಜ್ಯಾದ್ಯಂತ ಇರುವ ಒಟ್ಟು 1737 ಬಾವಿ/ ಕೊಳವೆಬಾವಿಗಳಲ್ಲಿ ಪ್ರತಿ ಮಾಹೆಯಾನ ದಾಖಲಿಸಿದ ಸ್ಥಿರ ಜಲಮಟ್ಟ ಮಾಪನದಂತೆ 2010ರಿಂದ 2019ರವರೆಗಿನ ತಾಲ್ಲೂಕುವಾರು ವಾರ್ಷಿಕ ಸರಾಸರಿ ಅಂತರ್ಜಲ ಸ್ಥಿರಮಟ್ಟದ ವ್ಯತ್ಯಾಸದಂತೆ 176 ತಾಲ್ಲೂಕುಗಳ ಪೈಕಿ 158 ತಾಲ್ಲೂಕುಗಳಲ್ಲಿ ಅಂತರ್ಜಲ ಸ್ಥಿರ ಮಟ್ಟದಲ್ಲಿ ಕುಸಿತ ಕಂಡು ಬಂದಿರುತ್ತದೆ. ಪ್ರಸ್ತುತ ಕನಿಷ್ಠ 0.04 ಮೀ.ನಿಂದ ಗರಿಷ್ಠ 60.98 ಮೀ. ಅಡಿಗಳವರೆಗೆ ಅಂತರ್ಜಲ ಕುಸಿತ ಕಂಡುಬಂದಿರುತ್ತದೆ. ವಿವರವನ್ನು ಅನುಬಂಧದಲ್ಲಿ ನೀಡಿದೆ.

ಸಂ.ಗ್ರಾಕುನೀ&ನೈಇ/111/ಗ್ರಾನೀಸ(5)/2020

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ) ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ ಎಲ್‌ಎಕ್ಯೂ 2334 ರ ಲಗತ್ತು

ANNEXURE

10 years average static water level 176 taluks (in meters)

Sl. No.	District	Taluk	2010	2011	2012	2013	2014	2015	2016	2017	2018	2019	Average Static water level difference between 2010 to 2019	
													Rise	Fall
1	Bagalkote	Badami	4.28	5.43	6.75	12.20	13.32	19.02	22.12	25.84	31.28	30.65		**26.37**
2	Bagalkote	Bagalkote	12.43	13.40	18.73	15.72	12.31	17.94	22.32	23.88	20.92	27.44		**15.01**
3	Bagalkote	Bilagi	4.98	6.90	12.18	11.11	10.64	14.77	18.28	19.70	13.82	13.31		**8.33**
4	Bagalkote	Hunagunda	4.48	5.36	6.37	6.14	5.20	7.29	9.86	11.35	11.25	9.32		**4.84**
5	Bagalkote	Jamakhandi	5.25	6.71	11.56	13.39	11.17	20.04	22.95	24.89	25.19	24.80		**19.55**
6	Bagalkote	Mudola	4.53	5.17	9.83	9.93	8.28	10.69	8.81	11.02	5.94	5.19		**0.66**
7	Bangaluru Rural	Devanahalli	25.62	23.87	27.39	30.25	31.74	32.52	30.57	32.02	32.54	35.30		**9.68**
8	Bangaluru Rural	Doddaballapur	30.06	27.66	30.65	33.20	36.98	34.47	27.99	27.76	24.94	30.58		**0.52**
9	Bangaluru Rural	Hosakote	33.29	36.49	47.91	54.27	57.09	56.81	56.21	67.32	67.07	71.92		**38.63**
10	Bangaluru Rural	Nelamangala	17.62	16.76	21.47	27.68	31.66	26.66	23.16	28.60	24.14	29.78		**12.16**
11	Bangaluru Urban	Anekal	15.68	16.86	21.75	24.86	26.10	26.06	26.37	34.71	32.53	34.21		**18.53**
12	Bangaluru Urban	Bangalore north	20.72	23.53	30.90	39.81	40.85	37.74	28.88	29.04	20.62	28.28		**7.56**
13	Bangaluru Urban	Bangalore south	17.03	19.21	24.43	28.62	34.32	32.66	22.08	21.06	20.15	21.80		**4.77**
14	Bangaluru Urban	Bangalore East	16.79	28.81	18.33	20.50	18.80	22.65	18.91	22.87	28.65	35.74		**18.95**
15	Belagavi	Athani	5.73	9.65	11.57	10.19	6.61	6.70	8.36	9.15	8.61	10.40		**4.67**
16	Belagavi	Bailahongala	5.79	6.22	8.77	10.54	13.69	12.28	16.04	16.68	12.67	11.26		**5.47**
17	Belagavi	Belagavi	5.64	6.02	7.57	7.56	6.98	7.20	7.46	7.61	7.07	6.53		**0.89**

Sl. No.	District	Taluk	2010	2011	2012	2013	2014	2015	2016	2017	2018	2019	Average Static water level difference between 2010 to 2019	
													Rise	Fall
18	Belagavi	Chikkodi	4.92	7.30	11.57	8.82	9.57	14.64	16.53	16.80	14.24	14.68		9.76
19	Belagavi	Gokak	4.66	5.94	7.53	7.20	7.74	8.37	14.70	10.65	8.63	7.67		3.01
20	Belagavi	Hukkeri	6.39	7.17	9.24	9.25	10.46	10.79	12.03	12.30	9.91	10.57		4.18
21	Belagavi	Khanapur	6.34	6.03	10.23	9.35	8.25	9.17	10.85	12.23	11.23	9.91		3.57
22	Belagavi	Raibag	3.98	4.52	5.17	5.41	5.86	6.45	8.32	6.57	6.51	6.45		2.47
23	Belagavi	Ramdurga	4.52	6.21	13.90	22.08	19.35	13.42	15.19	16.20	10.19	14.69		10.17
24	Belagavi	Soudathi	5.51	5.86	16.67	19.09	19.33	19.52	23.80	24.83	22.49	23.29		17.78
25	Ballari	Ballari	4.04	4.44	6.33	7.99	7.47	7.01	7.95	8.87	6.80	6.69		2.65
26	Ballari	Hadagalli	12.90	11.50	18.30	18.67	17.39	17.64	17.83	18.50	18.23	16.90		4.00
27	Ballari	Hagaribommanahalli	17.18	18.21	23.20	22.29	20.30	17.10	21.79	25.89	20.90	24.67		7.49
28	Ballari	Hospet	3.22	4.03	5.34	4.11	3.21	4.72	4.90	6.34	5.77	6.20		2.98
29	Ballari	Kudligi	8.80	10.67	12.44	14.97	18.28	16.97	17.88	16.99	19.56	21.60		12.80
30	Ballari	Sandur	5.28	5.20	8.56	11.12	8.43	8.46	7.73	11.18	11.54	10.76		5.48
31	Ballari	Siruguppa	4.25	5.63	7.58	7.93	7.12	6.50	6.99	6.81	6.04	4.15	0.10	
32	Bidar	Aurad	14.86	12.06	13.59	11.68	10.46	15.37	19.52	22.64	23.31	24.98		10.12
33	Bidar	Balki	15.79	15.17	12.93	14.29	17.97	22.67	24.16	19.87	20.24	20.48		4.69
34	Bidar	Basavakalyan	13.04	12.88	14.52	13.65	15.00	18.72	15.73	12.95	13.65	15.51		2.47
35	Bidar	Bidar	9.48	9.42	12.87	11.66	11.10	16.55	15.51	12.55	13.15	15.33		5.85
36	Bidar	Humnabad	9.67	10.07	13.59	12.09	14.25	20.67	20.00	17.51	16.79	18.54		8.87
37	Vijayapur	Basavana Bagewadi	5.65	9.22	16.51	18.69	13.71	14.55	18.95	18.35	17.55	21.42		15.77
38	Vijayapur	vijayapur	9.86	13.56	21.31	24.62	18.77	17.17	22.08	22.60	17.62	17.91		8.05

No.	District	Taluk	2010	2011	2012	2013	2014	2015	2016	2017	2018	2019	Average Static water level difference between 2010 to 2019	
													Rise	Fall
39	Vijayapur	Indi	8.73	16.18	25.44	22.61	14.35	17.03	21.96	19.60	26.80	38.24		**29.51**
40	Vijayapur	Muddebihal	3.41	5.99	7.16	5.27	4.79	5.10	8.22	9.34	12.83	9.25		**5.84**
7587	CRL4670	RAMESH JADHAV	VASUDEV	NO, 105, SHIVSHAKTI NAGAR ANGOL BELGAUM, Karnataka 999999
7588	KA22A3123	ARJUN PATIL	ISHWAR	H NO 181, KANGRALI K H TQ : BELGAUM DIST : BELGAUM Karnataka 999999
7589	KA22A2665	SRINATH KOKITKAR	BABURAO	# 19 2, KADOLKAR GALLI, BELGAUM. Karnataka 999999
7590	KA22C5731	MOHAMMEDARIF MUJAWAR	MOHAMMEDSAB	# 414 H NO 381 MUJAWAR GALLI, PEERANWADI BELAGAVI Karnataka 590001
7591	KA223316	KRISHNA PAWAR	SAWANTRAM	NO 4843, SADASHIV NAGAR, TQ DIST : BELGAUM. Karnataka 999999
7592	KA22A2524	MAQSUDAHMED SHAMSHER	MOHDHUSSAIN	EWS 316 ASHOK NAGAR BELGAUM Karnataka 999999
7593	KA227889	VILAS MORE	MADHUKAR	# 4148 1, KANGRALI GALLI BELGAUM Karnataka 999999
7594	KA22A0460	BEBINANADA MURKUTE	MOHAN	H NO 43 69, CROSS NO 4, MAHADWAR ROAD BELGAUM WEF 17-10-2006 Karnataka 999999
7595	KA22C6714	APPAJI DHAMNEKAR	TUKARAM	H.NO 4745 1 CHAVAT GALLI BELAGAVI Karnataka 590001
7596	KA22A5660	ABDULGAFAR BETGERI	MAKDEMSAB	181, BUDA SHOPPING COMPLEX T V CENTER BELGAUM Karnataka 999999
7597	KA22C8962	PRAKASH RAUT	NARAYAN	# 338 PATIL GALLI BELAGAVI Karnataka 590014
7598	KA22D1347	BASHIRAHMAD DALWAI	MAKTUMSAB	H NO 482 WADDER CHAVANI BELAGAVI KHASBAG Belgaum Karnataka 590004
7599	KA22A0982	ARUN KAKADE	MARUTI	NO, 392, VENGURLA ROAD A P, SULGA T D, BELGAUM, Karnataka 999999
7600	KA22B4883	ANANT A DALAVI	ARJUN	# 102, VARDAPPA GALLI KHASBAG BELGAUM Karnataka 999999
7601	KA22C1747	ASIFIQBAL MUJAWAR	UMAR	# 432 2, MUSLIM GALLI, ANGOL BELAGAVI Karnataka 999999
7602	KA22A1867	KASHIM BASTWADKAR	GUDUSAB	H NO 1038, KALAIGAR GALLI, TQ : BELGAUM DIST : BELGAUM WEF 28 11 2013 Karnataka 999999
7603	KA223720	QUTABUDDIN TASHILDAR	JANABSAB	A P : UCHAGAON, TQ : BELGAUM DIST : BELGAUM, Karnataka 999999
7604	KA22B4462	SANJAY PATIL	RAVOJI	A P:KUPPATGIRI TQ:KHANPUR BELGAUM WEF:11-03-2014 Karnataka 999999
7605	KA22A1463	UMESH S PUJARI	SHIVAJI	NO.4362, CHAVAT GALLI BGM WEF 7-7-06 BGM Karnataka 999999
7606	KA225846	LAGAMAPPA KONAKERI	MAIDAPPA	AT MASTAMARDI BGM BELGAUM Karnataka 999999
7607	KA22C1859	HEMANT YELLURKAR	MAHADEV	SHRI AAI NIVAS PLOT NO, 10, SY NO, 90, MAHALAXMI COLONY ADARSH NAGAR BELAGAVI Karnataka 999999
7608	KA223023	PARSHURAM JADHAV	NAMDEV	A OP- KANGRALI K H BELAGAVI WEF-13-01-2015 Karnataka 999999

7609	KA229575	VILASRAO SHINDE	S O MAHADEVRAO	#244 P53 FULLBAG GALLI BELAGAVI W.E.F 21 4 16 Karnataka 999999
7610	KA258180	MOHAMMEDHANIF MUJAWAR	KHATALSAB	# 256, MUJAWAR GALLI BELGAUM, BELGAUM, Karnataka 999999
7611	KA22B4188	ABDUL LATIF MEERABAI	HUSENSAB	MAHADEV ROAD, 3RD CROSS, TQ DIST : BELGAUM., Karnataka 999999
7612	KA229339	MOHAMMED KOTWAL	ABDULKHADAR	MUSALIM GALLI ANGOL BELGAUM, BELGAUM Karnataka 999999
7613	KA22C1734	ABDULKHADAR MULLA	NISARAHAMED	H.NO 990 KALIGAR GALLI TQ BELAGAVI DT BELAGAVI. Karnataka 999999
7614	KA22B2803	MAHADEV CHIGARE	VAIJU	A P, BADAL ANKALGI BELGAUM, BELGAUM Karnataka 999999
7615	KA22A4775	MUGUTSAHEB MAJAGAON	ABDULKARAMSAHEB	H.NO 1497 MARAGAI GALLI KAKATI DT BELGAUM W.E.F 25 7 2013 Karnataka 999999
7616	KA227720	IMTIYAZAHMED MULLA	ABDULKHADAR	# 3828 B, KOTWAL GALLI, BELGAUM Karnataka 999999
7617	KA22B8037	MOHAMMED MUSTAQ MUJAWAR	KUTBUDDIN	H NO-1069 GADI MARG GALLI A P SHAHAPUR BELGAUM Karnataka 999999
7618	KA22D1605	ABEED RANGARI	MOHDHUSEN	H NO 3910 BELAGAVI KAKATIVES ROAD Belgaum Karnataka 590001
7619	KA227432	PRAKASH P KURNE	PUNDALIK KURNE	HC LINE, ROOM NO. 02, PH QUARTERS, BELGAUM. Karnataka 590016
7620	KA227626	SUDHIR MADALI	SHRIKANT	# 337 A, ROY ROAD, TILAKWADI, TQ DIST : BELGAUM. Karnataka 999999
7621	KA22B4463	SARIKA CHOUGULE	UPADESH	PLOT 24 GANGWADI, SHIVABASAV NAGAR BELAGAVI WEF 05-04-2016 Karnataka 999999
7622	KA22B7025	DEEPAK DAWALE	KAMANATH	H.NO 303 JYOTHI NAGAR GANESHPUR BENKANHALLI HINDALGA BELAGAVI W.E.F 14 11 16 Karnataka 999999
7623	KA22C2001	VINAYAK SUWARE	SAKHARAM	AP H NO-3482 SAMADEVI GALLI BELAGAVI Karnataka 590001
7624	KA22C7536	VISHAL TIRODKAR	MANOHAR	MARKET YARD MARKANDEY NAGAR MARKET YARD ROAD, MARKANDEY CCB 215 WEF 23.11.2018 Belgaum Karnataka 590001
7625	KA22A2563	ANIL GAVALI	CHOTU	H NO 113, MANGALWAR PETH TILAKWADI BELGAUM Karnataka 999999
7626	KA263956	MALLESHI SHIGEHALLI	SHANTARAM	H NO 1238, BURUD GALLI, KHANAPUR, DIST : BELGAUM. Karnataka 999999
7627	KA22A1240	MILIND RAJAPUT	ARUN	H NO 553, BHARAT NAGAR, A P MACHHE, BELGAUM Karnataka 999999
7628	KA22A1442	SUHASH GHUME	KRISHNA	# 234, DATTA GALLI SHAHU NAGAR BELGAUM, Karnataka 999999
7629	KA22A1247	RAMESH PATIL	LAXMAN	H.NO-83, YALLUBAI NIVAS, GANDHI NAGAR BELGAUM.WEF-21-8-2007 Karnataka 999999
7630	KA227220	SALMAN RAMZAN	SALIM	PLOT NO 133 BLOCK NO 6 RUKMINI NAGAR BELGAUM Belgaum Karnataka 590016
7631	KA22D3876	RIYAZ MOKASHI	RUSTUM	#172 CHAMBAR WADA NATH PAI CIRCLE SHAHAPUR BELGAUM Belgaum Karnataka 590003
7632	KA229739	NABISAB BEG	SULEMAN	KILLA ROAD, KAKATI BELGAUM Karnataka 999999
7633	KA22C5002	ABDUL NALBAND	QADIR	#HNO 141 SAMBHAJI ROAD KHASBHAG BELAGAVI. Karnataka 590001
7634	KA229418	ABDULKHADAR MULLA	NISARAHAMED	H.NO 984 KALAIGAR GALLI BELAGAVI W.E.F 3 3 17 Karnataka 999999
7635	CNB6168	VISHWANATH JADHAV	JYOTIBA	A P CHURMURI TQ : BELGAUM DIST : BELGAUM Karnataka 999999
7636	KA22C4830	ASHIF JIYAUDDIN PATEL	JIYAUDDIN	A P 192 2ND CROSS SUBHASH NAGAR BELGAUM Karnataka 590001
7637	KA22B7075	BASAPPA KUMBAR	BHIMAPPA	MARUTI NAGAR BHAGIRATI NILAY MAHAVEER ROAD BELAGAVI W.E.F 17 10 19 Belgaum Karnataka 590016
7638	KA226881	NAMDEV YALLURKAR	G YALLURKAR	H NO 899 7, CCB M 28, TANAJI GALLI, BELGAUM Karnataka 999999
7639	KA22D0395	VISHAL PARSANAVAR	KAREPPA	PL NO 692 1 PARVATI NAGAR BELAGAVI Karnataka 590006
7640	KA22A1004	DADAPEER MULLA	DILAWAESAB.	HNO 746 OPP RAILWAY LINE. ANGOL INDIRA NAGAR ZATPAT COLONY ANGOL BELGAUM. Karnataka 999999
7641	KA223893	SHAKEEL FANIBAND	YAKUBSAB	H NO 4329, GHEE GALLI, TQ DIST : BELGAUM. Karnataka 999999
7642	KA22C0309	SAIF KACHI	MOHAMMED GOUS	H NO-38 A BRINDVAN COLONY UJWAL NAGAR BELAGAVI. WEF-27 09 17 Karnataka 999999
7643	KA22B9336	NITIN KUDACHI	ARAVIND	PLOT NO 51 SADASHIV NAGAR BELAGAVI WEF 17.01.2019 Belgaum Karnataka 590001
7644	KA226387	FAYAZAHMED BISTI	M.	H NO, 2, BISTI GALLI CAMP BELGAUM, Karnataka 999999

ಕರ್ನಾಟಕ ಸರ್ಕಾರ

ಸಂ: ಟಿಡಿ 109 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

(173) 18/3

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶರತ್ ಬಚ್ಚೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2333 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶರತ್ ಬಚ್ಚೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2333 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2333

ಸದಸ್ಯರ ಹೆಸರು : ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 18-03-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಬಿ.ಎಂ.ಟಿ.ಸಿ. ಕೆ.ಎಸ್.ಆರ್.ಟಿ.ಸಿ. ಎನ್.ಈ.ಕೆ.ಎಸ್.ಆರ್.ಟಿ.ಸಿ ಮತ್ತು ಎನ್.ಡಬ್ಲ್ಯೂ. ಕೆ.ಎಸ್.ಆರ್.ಟಿ.ಸಿ ನಿಗಮಗಳಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು;	ಸಾರಿಗೆ ಸಂಸ್ಥೆಗಳಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಈ ಕೆಳಗಿನಂತಿದೆ: **ಕ.ರಾ.ರ.ಸಾ.ನಿಗಮ:** 8620 **ಬೆಂ.ಮ.ಸಾ.ಸಂಸ್ಥೆ:** 6647 **ವಾ.ಕ.ರ.ಸಾ.ಸಂಸ್ಥೆ:** 5076 **ಈ.ಕ.ರ.ಸಾ.ಸಂಸ್ಥೆ:** 4663
ಆ	ಈ ನಾಲ್ಕು ನಿಗಮಗಳ ಇಂದಿನ ಆರ್ಥಿಕ ಸ್ಥಿತಿಗತಿ ಬಗ್ಗೆ ಮಾಹಿತಿ ಒದಗಿಸುವುದು;	ಕ.ರಾ.ರ.ಸಾ.ನಿಗಮವು 2018-19ನೇ ಸಾಲಿನಲ್ಲಿ ರೂ.134.93 ಕೋಟಿಗಳ ನಿವ್ವಳ ನಷ್ಟವನ್ನು ಅನುಭವಿಸಿರುತ್ತದೆ. ಬೆಂ.ಮ.ಸಾ.ಸಂಸ್ಥೆಯು 2012-13ನೇ ಸಾಲಿನಿಂದ 2018-19ನೇ ಸಾಲಿನವರೆಗೆ ರೂ.1175.00 ಕೋಟಿಗಳು ಕ್ರೋಢೀಕೃತ ನಷ್ಟವನ್ನು ಅನುಭವಿಸಿದೆ. ವಾ.ಕ.ರ.ಸಾ.ಸಂಸ್ಥೆಯು 2018-19ನೇ ಸಾಲಿನಲ್ಲಿ ರೂ.89.06 ಕೋಟಿಗಳ ನಿವ್ವಳ ನಷ್ಟವನ್ನು ಅನುಭವಿಸಿರುತ್ತದೆ ಈ.ಕ.ರ.ಸಾ.ಸಂಸ್ಥೆಯು **2000-2001** ರಿಂದ 2018-19ರ ವರೆಗೆ ರೂ.676.86 ಕೋಟಿಗಳ ಸಂಚಿತ ನಷ್ಟವನ್ನು ಅನುಭವಿಸಿರುತ್ತದೆ
ಇ	ನಷ್ಟದಲ್ಲಿರುವ ನಿಗಮಗಳ ಪುನಶ್ಚೇತನಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳು ಏನು?	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡ ಕ್ರಮಗಳನ್ನು "<u>ಅನುಬಂಧ</u>" ದಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 109 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)

ಉಪ ಮುಖ್ಯಮಂತ್ರಿಗಳು ಹಾಗೂ

ಸಾರಿಗೆ ಸಚಿವರು

ಅನುಬಂಧ

ನಷ್ಟವನ್ನು ಕಡಿಮೆಗೊಳಿಸಲು ಸಾರಿಗೆ ಸಂಸ್ಥೆಗಳಿಂದ ಕೈಗೊಂಡ ಕ್ರಮಗಳು:

1 ಸಾರಿಗೆ ಸಂಸ್ಥೆಗಳಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಐರಾವತ ಕ್ಲಬ್ ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್ ಕ್ಲಾಸ್ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

2 ಪ್ರಯಾಣಿಕರ ಅನುಕೂಲಕ್ಕಾಗಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಈ ಕೆಳಕಂಡ ವ್ಯವಸ್ಥೆಗಳನ್ನು ಜಾರಿಗೊಳಿಸಲಾಗಿದೆ.

- ಟಿಕೇಟ್ ವಿತರಣೆಯಲ್ಲಿ ಇ.ಟಿ.ಎಂ (Electronic Ticketing Machine)
- ವಿ.ಟಿ.ಎಂ.ಎಸ್(ವೆಹಿಕಲ್ ಟ್ರ್ಯಾಕಿಂಗ್ & ಮಾನಿಟರಿಂಗ್ ಸಿಸ್ಟಮ್) ವ್ಯವಸ್ಥೆ
- ಮುಂಗಡ ಟಿಕೇಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ
- ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆ ಗಳನ್ನು ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ
- *ಎಂ-ಟಿಕೆಟನ್ನು ಲ್ಯಾಪ್‌ಟಾಪ್ ಐಪ್ಯಾಡ್/ಟ್ಯಾಬ್ಲೆಟ್* ಅಥವಾ ಮೊಬೈಲ್ ಫೋನ್‌ನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ
- ಬಸ್ ನಿಲ್ದಾಣಗಳಲ್ಲಿ ಬಸ್ ಮಾರ್ಗದ ಮಾಹಿತಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ತಿಳಿಸಲು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆ.

* * * * *

ಕರ್ನಾಟಕ ಸರ್ಕಾರ

ಸಂ: ಟಿಡಿ 111 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

18/3

121

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2212 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2212 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala.S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2212
ಸದಸ್ಯರ ಹೆಸರು	: ಶ್ರೀ ನಂಜೇಗೌಡ ಕೆ.ವೈ (ಮಾಲೂರು)
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 18-03-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರಿನಿಂದ ಮಾಲೂರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಕಡಿಮೆ ಪ್ರಮಾಣದಲ್ಲಿ ಓಡಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಬೆಂಗಳೂರಿನಿಂದ ಮಾಲೂರಿಗೆ ಬೆಳಿಗ್ಗೆ 5.00 ಗಂಟೆಯಿಂದ ರಾತ್ರಿ 21.30 ಗಂಟೆಯವರೆಗೆ 22 ಸುತ್ತುವಳಿಗಳನ್ನು ಹಾಗೂ ಮಾಲೂರಿನಿಂದ ಬೆಂಗಳೂರಿಗೆ ಬೆಳಿಗ್ಗೆ 5.30 ರಿಂದ ರಾತ್ರಿ 20.00 ಗಂಟೆಯವರೆಗೆ 22 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ ಸಾರಿಗೆಗಳು ಮಾಲೂರು-ಬೆಂಗಳೂರು ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಅವಶ್ಯಕತೆಗನುಗುಣವಾಗಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರು ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.
ಆ	ಬಂದಿದ್ದಲ್ಲಿ, ಬೆಂಗಳೂರು-ಮಾಲೂರು ನಡುವೆ ಹೆಚ್ಚುವರಿ ಬಸ್ಸ್‌ಗಳನ್ನು ಓಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;	ಬೆಂಗಳೂರು-ಮಾಲೂರು ನಡುವೆ ಹೆಚ್ಚುವರಿ ಸಾರಿಗೆ ಸೌಲಭ್ಯ ಕೋರಿ ಮನವಿಗಳು ಬಂದಲ್ಲಿ, ಪರಿಶೀಲಿಸಿ ಮೂಲಭೂತ ಸೌಕರ್ಯಗಳನ್ನು ಕ್ರೋಢೀಕರಿಸಿಕೊಂಡು ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.
ಇ	ಎಷ್ಟು ಹೆಚ್ಚುವರಿ ಬಸ್ಸ್‌ಗಳನ್ನು ಓಡಿಸಲಾಗುವುದು; (ವಿವರ ಒದಗಿಸುವುದು)	
ಈ	ಮಾಲೂರು ತಾಲ್ಲೂಕು ಕೇಂದ್ರ, ಬೆಂಗಳೂರಿಗೆ ಹತ್ತಿರ ಇರುವುದರಿಂದ, ಪ್ರಸ್ತುತ ಮಾಲೂರು ಗಡಿವರೆಗೆ ಹಾಗೂ ಚಿಕ್ಕತಿರುಪತಿವರೆಗೆ ಓಡಾಡುತ್ತಿರುವ ಬಿ.ಎಂ.ಟಿ.ಸಿ ಬಸ್ಸುಗಳನ್ನು ಮಾಲೂರು ಕೇಂದ್ರಸ್ಥಾನದವರೆಗೂ ಓಡಾಡಿಸಲು ಸರ್ಕಾರ ಚಿಂತಿಸಿದೆಯೇ; ಇದ್ದಲ್ಲಿ ಕೈಗೊಂಡಿರುವ ಕ್ರಮಗಳೇನು?	ಬೆಂಗಳೂರು ಕೇಂದ್ರದಿಂದ ಮಾಲೂರಿಗೆ ಕ.ರಾ.ರ.ಸಾ.ನಿಗಮದಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಆದಾಗ್ಯೂ, ಬೆಂ.ಮ.ಸಾ.ಸಂಸ್ಥೆಯ ವತಿಯಿಂದ ಹೊಸಕೋಟೆಯಿಂದ ಜಡಿಗೇನಹಳ್ಳಿ ಮಾರ್ಗವಾಗಿ ಮಾಲೂರಿಗೆ ಹೊಸದಾಗಿ ಸಾರಿಗೆ ಸೇವೆಯನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಸಂಖ್ಯೆ: ಟಿಡಿ 111 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 110 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 17.03.2020.

114 18/3

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮುನಿಯಪ್ಪ ವಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2304 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮುನಿಯಪ್ಪ ವಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2304 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2304
ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 18-03-2020

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಹಲವಾರು ಹಳ್ಳಿಗಳಿಗೆ ಸಾರಿಗೆ ಸಂಪರ್ಕವಿಲ್ಲದೇ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಶಿಡ್ಲಘಟ್ಟ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಒಟ್ಟು 292 ಗ್ರಾಮಗಳ ಪೈಕಿ 264 ಗ್ರಾಮಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಸದರಿ ವ್ಯಾಪ್ತಿಯಲ್ಲಿ ಖಾಸಗಿ ಸಾರಿಗೆ ಪ್ರವರ್ತಕರೂ ಸಹ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ.</td></tr>
<tr><td>ಆ</td><td>ಸಾರ್ವಜನಿಕರ ಕೋರಿಕೆ ಮೇರೆಗೆ ಜನವಸತಿ ಇರುವ ಯಾವ ಯಾವ ಹಳ್ಳಿಗಳಿಂದ ಮನವಿಗಳು ಸ್ವೀಕೃತವಾಗಿವೆ ವಿವರಗಳನ್ನು ಒದಗಿಸುವುದು.</td><td>ಶಿಡ್ಲಘಟ್ಟ ತಾಲ್ಲೂಕು ವ್ಯಾಪ್ತಿಯಲ್ಲಿಟ ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಕೋರಿ ಮನವಿಗಳು ಸ್ವೀಕೃತವಾಗಿದ್ದು, ವಿವರಗಳು ಈ ಕೆಳಕಂಡಂತಿವೆ:
<table>
<tr><th>ಕ್ರಸಂ</th><th>ಮಾರ್ಗ</th></tr>
<tr><td>1</td><td>ದಿಬ್ಬೂರಹಳ್ಳಿ</td></tr>
<tr><td>2</td><td>ಪೈಯ್ಯಪ್ಪನಹಳ್ಳಿ.</td></tr>
<tr><td>3</td><td>ಪಾಶೆಟ್ಟಿಹಳ್ಳಿ.</td></tr>
<tr><td>4</td><td>ಹಲಸೂರುದಿನ್ನೆ.</td></tr>
<tr><td>5</td><td>ತಿಪ್ಪೇನಹಳ್ಳಿ.</td></tr>
<tr><td>6</td><td>ಚೇಳೂರು-ವಿನಿಗದಲೆ-ಕುಂದಲಗುರ್ಕಿ-ಶಿಡ್ಲಘಟ್ಟ-ಬೆಂಗಳೂರು</td></tr>
<tr><td>7</td><td>ಗಂಜಿಗುಂಟೆ.</td></tr>
<tr><td>8</td><td>ಕನ್ನಪ್ಪನಹಳ್ಳಿ.</td></tr>
<tr><td>9</td><td>ಜಂಗಮಕೋಟೆ-ಶಿಡ್ಲಘಟ್ಟ.</td></tr>
<tr><td>11</td><td>ಚೀಮಂಗಲ-ಹೆಚ್.ಕ್ರಾಸ್</td></tr>
<tr><td>12</td><td>ಚೀಮಂಗಲ-ಜಂಗಮಕೋಟೆ-ಚಿಕ್ಕಬಳ್ಳಾಪುರ.</td></tr>
</table></td></tr>
<tr><td>ಇ</td><td>ಹಾಗಿದ್ದಲ್ಲಿ, ಮನವಿಗಳನ್ನು ಸಲ್ಲಿಸಿರುವ ಹಳ್ಳಿಗಳಿಗೆ ವಿದ್ಯಾರ್ಥಿಗಳ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಸಾರಿಗೆ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಸಾರ್ವಜನಿಕ ಪ್ರಯಾಣಿಕರು ಕೋರಿರುವ ಎಲ್ಲಾ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಅವುಗಳಲ್ಲಿ ಚೀಮಂಗಲ-ಜಂಗಮಕೋಟೆ-ಚಿಕ್ಕಬಳ್ಳಾಪುರ ಮಾರ್ಗದಲ್ಲಿ ಈ ಹಿಂದೆ ಸಾರಿಗೆಯನ್ನು ಆಚರಣೆ ಮಾಡಿದ್ದು, ಸದರಿ ಸಾರಿಗೆಯನ್ನು ನಿರೀಕ್ಷಿತ ಸಂಖ್ಯೆಯ ಸಾರ್ವಜನಿಕ ಪ್ರಯಾಣಿಕರು ಉಪಯೋಗಿಸದೆ ನಷ್ಟದಲ್ಲಿ ಆಚರಣೆಯಾಗಿದ್ದರಿಂದ ಸದರಿ ಸಾರಿಗೆಯನ್ನು ರದ್ದುಗೊಳಿಸಲಾಗಿರುತ್ತದೆ. ಇದಲ್ಲದೆ ಶಿಡ್ಲಘಟ್ಟದಿಂದ ಚಿಕ್ಕಬಳ್ಳಾಪುರಕ್ಕೆ 5 ಸಂಪರ್ಕ ಸಾರಿಗೆಗಳಿಂದ ಪ್ರತಿ ದಿನ 80 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ</td></tr>
<tr><td></td><td></td><td>ತಾಲ್ಲೂಕಿನ ವಿದ್ಯಾರ್ಥಿಗಳು, ನೌಕರರು, ರೈತರು ಹಾಗೂ ಸಾರ್ವಜನಿಕ ಪ್ರಯಾಣಿಕರು ಈ ಸಾರಿಗೆಗಳ ಸೌಲಭ್ಯ ಪಡೆದುಕೊಳ್ಳುತ್ತಿರುತ್ತಾರೆ.</td></tr>
</table>

ಸಂಖ್ಯೆ: ಟಿಡಿ 110 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 112 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

18/3

185

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಣ್ಣ ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2375 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಣ್ಣ ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2375 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Mala S

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2375
ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ (ಆನೇಕಲ್)
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 18-03-2020

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಆನೇಕಲ್ ತಾಲ್ಲೂಕು ಕೇಂದ್ರ ಹಾಗೂ ಹೋಬಳಿ ಕೇಂದ್ರಗಳಿಂದ ಬಿ.ಎಂ.ಟಿ.ಸಿ ಹಾಗೂ ಕೆ.ಎಸ್.ಆರ್.ಟಿ.ಸಿ ಬಸ್‍ಗಳಿಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ಮಾಹಿತಿ ನೀಡುವುದು)	ಕ.ರಾ.ರ.ಸಾ.ನಿಗಮ ಹಾಗೂ ಬೆಂ.ಮ.ಸಾ.ಸಂಸ್ಥೆಯ ವತಿಯಿಂದ ಆನೇಕಲ್ ತಾಲ್ಲೂಕು ಕೇಂದ್ರ ಹಾಗೂ ಹೋಬಳಿ ಮತ್ತು ಗ್ರಾಮಗಳಿಂದ ಪ್ರಯಾಣಿಕರ ಬೇಡಿಕೆಗನುಗುಣವಾಗಿ ನಗರದ ಪ್ರಮುಖ ಬಸ್ ನಿಲ್ದಾಣ ಹಾಗೂ ಇತರೆ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
ಆ	ಆನೇಕಲ್ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿದ್ದು, ಹೆಚ್ಚುವರಿ ಬಸ್ಸುಗಳನ್ನು ಸಂಚಾರಕ್ಕೆ ಒದಗಿಸಿದಲ್ಲಿ ಸಾರಿಗೆ ಇಲಾಖೆಗೆ ಹೆಚ್ಚು ಆದಾಯ ಬರುವ ಸಾಧ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ಕ.ರಾ.ರ.ಸಾ.ನಿಗಮದ ವತಿಯಿಂದ ಪ್ರಸ್ತುತ 266 ಏಕಸುತ್ತುವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲದೇ, ಪ್ರಸ್ತುತ ಬೆಂ.ಮ.ಸಾ.ಸಂಸ್ಥೆಯಿಂದ ಪ್ರತಿದಿನ 1060 ಬಸ್ಸು/ಅನುಸೂಚಿಗಳಿಂದ 9264 ಏಕಮುಖ ಸುತ್ತುವಳಿಗಳು ಆಚರಣೆಯಲ್ಲಿರುತ್ತವೆ. ಪ್ರಸ್ತುತ ಕಲ್ಪಿಸುತ್ತಿರುವ ಸಾರಿಗೆ ಸೌಲಭ್ಯವು ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿರುತ್ತದೆ, ಸಾರ್ವಜನಿಕ ಪ್ರಯಾಣಿಕರಿಂದ ಹೆಚ್ಚುವರಿ ಬಸ್ಸುಗಳ ಕಾರ್ಯಾಚರಣೆಗೆ ಕೋರಿಕೆ ಬಂದಲ್ಲಿ, ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ.
ಇ	ಆನೇಕಲ್ ತಾಲ್ಲೂಕಿನ ತಾಲ್ಲೂಕು ಕೇಂದ್ರ ಹಾಗೂ ಹೋಬಳಿ ಕೇಂದ್ರಗಳಿಗೆ ಯಾವ ಕಾಲಮಿತಿಯಲ್ಲಿ ಬೇಡಿಕೆಯನುಸಾರ ಬಸ್‍ಗಳನ್ನು ಒದಗಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಟಿಡಿ 112 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂ: ಟಿಡಿ 114 ಟಿಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17.03.2020.

(37) 18/3

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ,
ಬೆಂಗಳೂರು

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 463. ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/10/2020, ದಿನಾಂಕ: 09.03.2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 463 ಕ್ಕೆ ದಿನಾಂಕ:18.03.2020ರಂದು ಸದನದಲ್ಲಿ ಉತ್ತರ ನೀಡುವ ಸಲುವಾಗಿ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಮಾಲಾ ಎಸ್.)
ಶಾಖಾಧಿಕಾರಿ,
ಸಾರಿಗೆ-1 ಶಾಖೆ, ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	463
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	:	18-03-2020

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಹಾಸನ ನಗರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ನರ್ಸಿಂಗ್ ಕಾಲೇಜು, ಸರ್ಕಾರಿ ಐ.ಟಿ.ಐ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು ಹಾಗೂ ಇತರೆ ಹಲವಾರು ವಿದ್ಯಾಸಂಸ್ಥೆಗಳಿದ್ದು, ಪ್ರತಿ ದಿನ ಸುತ್ತಮುತ್ತಲ ತಾಲ್ಲೂಕು ಕೇಂದ್ರಗಳಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಸುಮಾರು 15-20 ಸಾವಿರ ಹೆಣ್ಣು ಮಕ್ಕಳು ಹಾಸನ ನಗರಕ್ಕೆ ಬರುತ್ತಿರುವ ಇವರಿಗೆ ಸರಿಯಾದ ಸರ್ಕಾರಿ ಸಾರಿಗೆ ಸೌಲಭ್ಯಗಳಿಲ್ಲದೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ.</td><td rowspan="2">ಪ್ರಸ್ತುತ ಹಾಸನ ನಗರವು ಮುಖ್ಯ ಶೈಕ್ಷಣಿಕ ಕೇಂದ್ರವಾಗಿದ್ದು, ಹಾಸನ ನಗರಕ್ಕೆ ಬರುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಅನುಕೂಲಕ್ಕಾಗಿ ಹಾಸನ ಸುತ್ತಮುತ್ತಲಿನ ತಾಲ್ಲೂಕು ಕೇಂದ್ರ ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಕ.ರಾ.ರ.ಸಾ.ನಿಗಮದ ಹಾಸನ ಮತ್ತು ಚಿಕ್ಕಮಗಳೂರು ವಿಭಾಗದ ವಿವಿಧ ಘಟಕಗಳಿಂದ ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಕೇಂದ್ರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಸಾಮಾನ್ಯ ಸಾರಿಗೆ ಮತ್ತು ವೇಗದೂತ ಸಾರಿಗೆಗಳನ್ನು ಆಚರಣೆ ಮಾಡಲಾಗುತ್ತಿದೆ. ವಿವರಗಳು ಕೆಳಕಂಡಂತಿದೆ:

<table><tr><th>ತಾಲ್ಲೂಕು ಕೇಂದ್ರಗಳು</th><th>ಹಾಸನಕ್ಕೆ ಆಚರಣೆಯಲ್ಲಿರುವ ಸುತ್ತುವಳಿಗಳ ಸಂಖ್ಯೆ</th></tr><tr><td>ಅರಸೀಕೆರೆ</td><td>99</td></tr><tr><td>ಅರಕಲಗೂಡು</td><td>98</td></tr><tr><td>ಆಲೂರು</td><td>56</td></tr><tr><td>ಬೇಲೂರು</td><td>146</td></tr><tr><td>ಚನ್ನರಾಯಪಟ್ಟಣ</td><td>103</td></tr><tr><td>ಹಾಸನ</td><td>230</td></tr><tr><td>ಹೊಳೆನರಸೀಪುರ</td><td>139</td></tr><tr><td>ಸಕಲೇಶಪುರ</td><td>63</td></tr><tr><td>ಒಟ್ಟು</td><td>934</td></tr></table>
ಇದಲ್ಲದೆ ಹಾಸನ-ಆಲೂರು ಮಾರ್ಗದಲ್ಲಿ 8 ನಗರ ಸಾರಿಗೆ ಅನುಸೂಚಿಗಳಿಂದ 108 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಸಾರಿಗೆಗಳ ಅನುಕೂಲವನ್ನು ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳು, ನೌಕರರು, [illegible] ಪಡೆದುಕೊಳ್ಳುತ್ತಿರುತ್ತಾರೆ.</td></tr>
<tr><td>ಆ</td><td>ಹಾಗಿದ್ದಲ್ಲಿ, ಇವರಿಗೆ ಬಸ್ ಸೌಕರ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು? (ಸಂಪೂರ್ಣ ಮಾಹಿತಿ ನೀಡುವುದು)</td></tr>
</table>

ಸಂಖ್ಯೆ: ಟಿಡಿ 114 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 81 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

83 ಉ/183

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಇವರಿಗೆ;

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2308ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2308/2020, ದಿ:05.03.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2308ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M. Rajanna

(ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ – 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2308
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಎಷ್ಟು ಜನರು ಅಂಗವಿಕಲ ವಾಹನಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ (ವಿವರಗಳನ್ನು ಒದಗಿಸುವುದು);	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರದಲ್ಲಿ ಅಂಗವಿಕಲರ ವಾಹನಕ್ಕಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರರ ಸಂಖ್ಯೆ ಈ ಕೆಳಗಿನಂತಿದೆ. 2018-19 ನೇ ಸಾಲಿಗೆ : 44 2019-20 ನೇ ಸಾಲಿಗೆ : 13 **ಒಟ್ಟು : 57** (ಅರ್ಜಿದಾರರ ವಿವರ ಅನುಬಂಧದಲ್ಲಿ ಒದಗಿಸಿದೆ.)
ಆ)	ಕಳೆದ ಅನೇಕ ವರ್ಷಗಳಿಂದ ಅವರಿಗೆ ಸರ್ಕಾರದಿಂದ ಯಾವುದೇ ವಾಹನ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಲ್ಲಾ ಅರ್ಜಿದಾರರಿಗೆ ಕೂಡಲೇ ವಾಹನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?	ಶೇ. 75% ಮತ್ತು ಹೆಚ್ಚಿನ ಅಂಗವಿಕಲತೆ ಹೊಂದಿರುವ ದೈಹಿಕ ವಿಕಲಚೇತನರಿಗೆ ಜೀವಿತಾವಧಿಯಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಒದಗಿಸುವ ಯೋಜನೆ ಜಾರಿಯಲ್ಲಿದ್ದು, ಆಯವ್ಯಯ ಲಭ್ಯತೆ ಹಾಗೂ ಸರ್ಕಾರ ನಿಗದಿಗೊಳಿಸುವ ಗುರಿಗೆ ಅನುಗುಣವಾಗಿ ಯಂತ್ರಚಾಲಿತ ದ್ವಿಚಕ್ರ ವಾಹನಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಮಮಇ 81 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ ಇವರ
ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ: 2308ಕ್ಕೆ ಅನುಬಂಧ

2018-19 ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರದಲ್ಲಿ ಅಂಗವಿಕಲ ವಾಹನಕ್ಕಾಗಿ ಅರ್ಜಿ ಸಲ್ಲಿಸಿರುವ ವಿಕಲಚೇತನರ ವಿವರ.

ಕ್ರ ಸಂ	ವಿಕಲಚೇತನರ ಹೆಸರು ಮತ್ತು ವಿಳಾಸ	ಅಂಗವಿಕಲತೆ ಸ್ವರೂಪ / ಪ್ರಮಾಣ
1	ರೇಣುಕಾ ತುಕಾರಾಮ ಬಾಗಲಕೋಟ ಸಾ॥ ಗೊವನಕೊಪ್ಪ	ದೈಹಿಕ 85
2	ಪಕ್ಕಿರಪ್ಪ ಲಕ್ಷ್ಮಣ ಬಿಷ್ಟಣ್ಣವರ ಸಾ॥ ಆನಿಗೋಳ	ದೈಹಿಕ 85%
3	ಸಣ್ಣವೀರಪ್ಪ ಬಸನಗೌಡಾ ಮಲ್ಲೂರ ಸಾ॥ ಚಿವಟಗುಂಡಿ	ದೈಹಿಕ 85%
4	ಉಳವಪ್ಪ ಮೂಗಪ್ಪ ಗುರ್ಲಕಟ್ಟಿ ಸಾ॥ ಪಟ್ಟಿಹಾಳ ಕೆ.ಬಿ	ದೈಹಿಕ 80%
5	ಕಾಶಪ್ಪ ಮಡಿವಾಳಪ್ಪ ಮರಕುಂಬಿ ಸಾ॥ಆನಿಗೋಳ	ದೈಹಿಕ 80%
6	ಅಜ್ಜಪ್ಪ ಈರಪ್ಪ ಕೆಂಚರಾಮನಹಾಳ ಸಾ॥ದೊಡವಾಡ	ದೈಹಿಕ 76%
7	ಉಮೇಶ ಗಂಗಪ್ಪ ಕಿತ್ತೂರ ಸಾ॥ ಮೂಗಬಸವ	ದೈಹಿಕ 76%
8	ಶಂಕರ ಮಡಿವಾಳಪ್ಪ ಕಡೇದ ಸಾ॥ ಬುಡರಕಟ್ಟಿ	ದೈಹಿಕ 75%
9	ಮಹಾದೇವಿ ವಿಠ್ಠಲ ನೂರಜಪ್ಪನವರ (ದೇಮಟ್ಟಿ)ಸಾ॥ ಗೊವನಕೊಪ್ಪ	ದೈಹಿಕ 75%
10	ಲಕ್ಷ್ಮಣ ತಾತ್ಯಾಸಾಬ ಸೂರ್ಯವಂಶಿ ಸಾ॥ ನಯಾನಗರ	ದೈಹಿಕ 75%
11	ಶಿವಪ್ಪ ಬಸವಂತಪ್ಪ ಮಂಗಳಗಟ್ಟಿ ಸಾ॥ ಬುಡರಕಟ್ಟಿ	ದೈಹಿಕ 75%
12	ಚೆನ್ನಪ್ಪ ಬಾಳಪ್ಪ ಮುಳಕೂರ ಸಾ॥ಬಿದರಗಡ್ಡಿ	ದೈಹಿಕ 75%
13	ಮೀನಾಕ್ಷಿ ಬಾಬು ಕಲಾಲ ಸಾ॥ ನಯಾನಗರ	ದೈಹಿಕ 75%
14	ಸುರೇಶ ಸೋಮಪ್ಪ ಹೊಸೂರ ಸಾ॥ ಸಾಣಿಕೊಪ್ಪ	ದೈಹಿಕ 75%
15	ನೇತ್ರಾವತಿ ಮಂಜುನಾಥ ಉದ್ಯಾನಶೆಟ್ಟಿ ಸಾ॥ದೊಡವಾಡ	ದೈಹಿಕ 75%

ಕ್ರ ಸಂ	ವಿಕಲಚೇತನರ ಹೆಸರು ಮತ್ತು ವಿಳಾಸ	ಅಂಗವಿಕಲತೆ ಸ್ವರೂಪ / ಪ್ರಮಾಣ
16	ನದೀಮಅಹ್ಮದ ಹುಸೇನಸಾಬ ಘನಿಬಂದ ಸಾ॥ ಬೈಲಹೊಂಗಲ	ದೈಹಿಕ 75%
17	ಪರಪ್ಪಗೌಡಾ ನಿಂಗನಗೌಡಾ ಪರ್ವತಗೌಡ್ರ ಸಾ॥ ಚಿವಟಗುಂಡಿ	ದೈಹಿಕ 75%
18	ಸೋಮಪ್ಪ ವಿಠಲ ಕುರಬೇಟ ಸಾ॥ ಸಾಣಿಕೊಪ್ಪ	ದೈಹಿಕ 75%
19	ಮಂಜುನಾಥ ಲಕ್ಷ್ಮಣ ಹೊಳಿ ಸಾ॥ ಕೆಂಗಾನೂರ	ದೈಹಿಕ 75%
20	ಮೀನಾಕ್ಷಿ ಹಣಮಂತಪ್ಪ ತಳವಾರ ಸಾ॥ದೇವಲಾಪೂರ	ದೈಹಿಕ 85%
21	ಸೋಮಪ್ಪ ಬಸಪ್ಪ ಕರಡಿಗುದ್ದಿ ಸಾ//ಹೊಸೂರ	ದೈಹಿಕ 85%
22	ಕೆಂಚಪ್ಪ ವಿಠ್ಠಲ ಕುಚ್ಚನ್ನವರ ಸಾ//ಮುರಗೋಡ	ದೈಹಿಕ 85%
23	ಶಿವಪ್ಪ ಚನ್ನಪ್ಪ ಕಾದ್ರೋಳ್ಳಿ ಸಾ//ಚಿಕ್ಕೊಪ್ಪ	ದೈಹಿಕ 80%
24	ದೇವೇಂದ್ರ ಹಣಮಂತ ಪೂಜೇರ ಸಾ//ಹೊಸೂರ	ದೈಹಿಕ 76%
25	ರಫೀಕಹ್ಮದ ಬಾಬಾಸಾಬ ಚಕೋಲಿ ಸಾ//ಹೊಸೂರ	ದೈಹಿಕ 76%
26	ಈರಯ್ಯಾ ರಾಚಯ್ಯಾ ಚರಂತಿಮಠ ಸಾ//ಹಿಟ್ಟಣಗಿ	ದೈಹಿಕ 76%
27	ಸುಜಾತಯ್ಯಾ ಈರಯ್ಯಾ ಏಣಗಿಮಠ ಸಾ//ಹಿಟ್ಟಣಗಿ	ದೈಹಿಕ 75%
28	ಕಲ್ಲವ್ವ ಬಸಪ್ಪ ಉಗ್ರಾಣ ಸಾ//ಸುತಗಟ್ಟಿ	ದೈಹಿಕ 75%
29	ರಾಜೇಶ ಕಾಶಪ್ಪ ನಿಗಡೆ ಸಾ//ಯಕ್ಕುಂಡಿ	ದೈಹಿಕ 80%
30	ಮೀನಾಕ್ಷೀ ಬಸಪ್ಪ ಕರಡಿಗುದ್ದಿ ಸಾ//ಇಂಚಲ	ದೈಹಿಕ 76%
31	ಕರೆಪ್ಪ ಫಕ್ಕೀರಪ್ಪ ಕೆಂಬಳಿ ಸಾ//ಮುರಗೋಡ	ದೈಹಿಕ 75%

ಕ್ರ ಸಂ	ವಿಕಲಚೇತನರ ಹೆಸರು ಮತ್ತು ವಿಳಾಸ	ಅಂಗವಿಕಲತೆ ಸ್ವರೂಪ / ಪ್ರಮಾಣ
32	ಸುಭಾನಿ ಅಕ್ಬರಸಾಬ ಹುಬ್ಬಳ್ಳಿ ಸಾ//ಅಸುಂಡಿ	ದೈಹಿಕ 75%
33	ಮಹಾದೇವಗೌಡ ವಿರುಪಾಕ್ಷಗೌಡ ಪಾಟೀಲ ಸಾ//ಸಂಗೇಶಕೊಪ್ಪ	ದೈಹಿಕ 75%
34	ಸುಮಿತ್ರಾ ನೇಮಿನಾಥ ತಳಗೇರಿ ಸಾ//ಇಂಚಲ	ದೈಹಿಕ 80%
35	ಸೋಮಪ್ಪ ಅಪ್ಪಣ್ಣಾ ಕರಾಳೆ ಸಾ//ಇಂಚಲ	ದೈಹಿಕ 75%
36	ಯಲ್ಲಪ್ಪ ದುಂಡಪ್ಪ ತೋಟಗಿ ಸಾ//ಚಚಡಿ	ದೈಹಿಕ 70%
37	ಸಂಜು ಚಂದ್ರು ಮಾಯನ್ನವರ ಸಾ//ಕರೀಕಟ್ಟಿ	ದೈಹಿಕ 85%
38	ಮಹಾಂತೇಶ ಶೀನಪ್ಪ ಲಮಾಣಿ ಸಾ//ರುದ್ರಾಪೂರ ತಾಂಡೆ	ದೈಹಿಕ 85%
39	ಸುರೇಶ ರುದ್ರಪ್ಪ ಚಲವಾದಿ ಸಾ//ಅಸುಂಡಿ	ದೈಹಿಕ 76%
40	ಶಿವಾನಂದ ಲಕ್ಷ್ಮಣ ಕಾರಬಾರಿ ಸಾ//ಕಾರ್ಲಕಟ್ಟಿ ತಾಂಡೆ	ದೈಹಿಕ 76%
41	ಭೀಮಪ್ಪ ಯಮ್ನಪ್ಪ ಲಮಾಣಿ ಸಾ//ರುದ್ರಾಪೂರ ತಾಂಡೆ	ದೈಹಿಕ 75%
42	ರಮೇಶ ಸಿದ್ದಪ್ಪ ಬಂಡಿವಡ್ಡರ ಸಾ//ಚಚಡಿ	ದೈಹಿಕ 80%
43	ಮುತ್ತವ್ವ ಶಿವಾನಂದ ಇಂಚಲ ಸಾ//ಚಚಡಿ	ದೈಹಿಕ 75%
44	ಬಸವರಾಜ ಬಾಲಪ್ಪ ಕೌಜಲಗಿ ಸಾ//ಕಾರ್ಲಕಟ್ಟಿ	ದೈಹಿಕ 85%

2019–20 ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರದಲ್ಲಿ ಅಂಗವಿಕಲ ವಾಹನಕ್ಕಾಗಿ ಅರ್ಜಿ ಸಲ್ಲಿಸಿರುವ ವಿಕಲಚೇತನರ ವಿವರ.

ಕ್ರ ಸಂ	ವಿಕಲಚೇತನರ ಹೆಸರು ಮತ್ತು ವಿಳಾಸ	ಅಂಗವಿಕಲತೆ ಸ್ವರೂಪ / ಪ್ರಮಾಣ
1	ಫಕೀರಪ್ಪ ಲ. ಬಿಷ್ಟಪ್ಪನವರ ಸಾ//ಆನಿಗೋಳ	ದೈಹಿಕ 85%
2	ಕಾಶಪ್ಪ ಮ. ಮರಕುಂಬಿ ಸಾ//ಆನಿಗೋಳ	ದೈಹಿಕ 85%
3	ಉಮೇಶ ಗಂ ಕಿತ್ತೂರ ಸಾ//ಮೂಗಬಸವ	ದೈಹಿಕ 76%
4	ರಾಮನಗೌಡ ಮ ಶಿವನಗೌಡ್ರ ಸಾ//ಸಿದ್ದಸಮುದ್ರ	ದೈಹಿಕ 75%
5	ಶಾಂತವ್ವ ಯ. ಶಿದ್ರಾಮನ್ನವರ ಸಾ//ನಯಾನಗರ	ದೈಹಿಕ 85%
6	ಫಕೀರಪ್ಪ ರು. ಗುಡ್ಡದ ಸಾ//ಬೂದಿಹಾಳ	ದೈಹಿಕ 80%
7	ಶೋಭಾ ನಾಗಪ್ಪ ಶಿದ್ನಾಳ ಸಾ//ಇಂಚಲ	ದೈಹಿಕ 75%
8	ಮಂಜುಳಾ ಶಿವಪ್ಪ ಹಳಮನಿ ಸಾ//ಚಚಡಿ	ದೈಹಿಕ 75%
9	ಜಗದೀಶ ಈಶ್ವರ ಮಾರಿಹಾಳ ಸಾ//ಇಂಚಲ	ದೈಹಿಕ 76%
10	ವಿಠ್ಠಲ ಭೀಲಪ್ಪ ಕಾರಬಾರಿ ಸಾ//ಕಾರ್ಲಕಟ್ಟಿ ತಾಂಡೆ	ದೈಹಿಕ 75%
11	ಉಮೇಶ ಶಂಕರ ರಾಠೋಡ ಸಾ//ಕಾರ್ಲಕಟ್ಟಿ ತಾಂಡೆ	ದೈಹಿಕ 75%
12	ಸೋಮನಿಂಗಪ್ಪ ಯಲ್ಲಪ್ಪ ಸೊಗಲದ ಸಾ//ಚಿಕ್ಕೊಪ್ಪ	ದೈಹಿಕ 85%
13	ಸಿದ್ದಪ್ಪ ಫಕ್ಕೀರಪ್ಪ ಈರಗಾರ ಸಾ//ಇಂಚಲ	ದೈಹಿಕ 76%

ಕರ್ನಾಟಕ ಸರ್ಕಾರ

ಸಂಖ್ಯೆ: MWD 54 LMQ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:17.03.2020.

ಇವರಿಂದ,

ಸರ್ಕಾರದ ಕಾರ್ಯದರ್ಶಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ಸಿದ್ದು ಸವದಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2341 ಕ್ಕೆ ಉತ್ತರಿಸುವ ಬಗ್ಗೆ.

-oOo-

ಶ್ರೀ ಸಿದ್ದು ಸವದಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2341 ಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎಜಾಸ್ ಪಾಷ)
ಶಾಖಾಧಿಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2341
2. ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ)
3. ಉತ್ತರಿಸಬೇಕಾದ ದಿನಾಂಕ : 18-03-2020
4. ಉತ್ತರಿಸುವವರು : ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಬಾಗಲಕೋಟೆ ಜಿಲ್ಲೆಯಲ್ಲಿರುವ ವಕ್ಫ್ ಆಸ್ತಿಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು.)	ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 1334 ಅಧಿಸೂಚಿತ/ನೊಂದಾಯಿತ ವಕ್ಫ್ ಆಸ್ತಿಗಳಿವೆ. ವಿವರವನ್ನು "ಅನುಬಂಧ-1ರಲ್ಲಿ" ನೀಡಲಾಗಿದೆ.
ಆ	ಸದರಿ ಎಲ್ಲಾ ಆಸ್ತಿಗಳು ಯಾವಾಗ ನಿಯಮಾವಳಿ ಪ್ರಕಾರ ಸರ್ಕಾರದ ಆಸ್ತಿಗಳಾಗಿವೆ;(ಕ್ಷೇತ್ರವಾರು ಮಾಹಿತಿ ಒದಗಿಸುವುದು.)	ಸದರಿ ಎಲ್ಲಾ ವಕ್ಫ್ ಆಸ್ತಿಗಳು ರಾಜ್ಯಪತ್ರದಲ್ಲಿ ಅಧಿಸೂಚಿತ ಹಾಗೂ ವಕ್ಫ್ ಕಾಯ್ದೆ 1995 ರ ಪ್ರಾವಧಾನಗಳ ಅಡಿಯಲ್ಲಿ ವಕ್ಫ್ ಆಸ್ತಿಗಳಾಗಿರುತ್ತವೆ. ವಿವರವನ್ನು "ಅನುಬಂಧ-1" ರಲ್ಲಿ ನೀಡಲಾಗಿದೆ.
ಇ	ನ್ಯಾಯಾಲಯದಲ್ಲಿರುವ ಸರ್ಕಾರದ ಆಸ್ತಿ ಎಷ್ಟು; ಯಾವ ಕಾರಣಕ್ಕೆ ವ್ಯಾಜ್ಯಗಳಿವೆ? (ಸದರಿ ಎಲ್ಲಾ ಆಸ್ತಿಗಳ ಎಕರೆವಾರು ಮಾಹಿತಿ ನೀಡುವುದು.)	ನ್ಯಾಯಾಲಯದಲ್ಲಿ ಬಾಕಿ ಇರುವ ವಕ್ಫ್ ಆಸ್ತಿಗಳ: ವಿವರವನ್ನು "ಅನುಬಂಧ-2"ರಲ್ಲಿ ಲಗತ್ತಿಸಿದೆ.

ಕಡತ ಸಂಖ್ಯೆ: **MWD 54 LMQ 2020**

(ಸಹಿ)

(ಪ್ರಭು ಬಿ.ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್
ಮತ್ತು ವಕ್ಫ್ ಸಚಿವರು

ಅನುಬಂಧ-1

1.Total No of Wakf Properties of Bagalkot District.

Sl No.	Name of Constituency	Total No of Wakf Properties
01	BAGALKOT	166
02	HUNAGUND	263
03	BADAMI	186
04	JAMAKHANDI	206
05	TERDAL	112
06	MUDHOL	186
07	BILAGI	215
08	TOTAL	1334

KSBA/ADM/24/LALC/2019-20 ಅನುಬಂಧ-2

BAGALKOT

SL. NO	CASE NUMBER	INSTITUTION	NATURE OF CASE	Sy No.	Extent
1	KWT/BAG/SR/OS-3/2018	Hazrath Peer Adgal Shaheed Dargah & Peer Zameen Shaheed Dargah, Jamkhandi Bagalkot	Suit for declaration and injunction	Sy. No. 32/2	Ext 10A-10G
2	KWT/BAG/SR/OS-4/2018	Hazrath Bawa Masjid **Tq. Mudhol**	Suit for declaration and injunction	RS No. 53/1	6 A - 39 G
3	KWT/BAG/SR/OS-5/2018	Hazrath Bawa Masjid **Tq. Mudhol**	Suit for declaration and injunction	RS No. 53/2, RS No. 53/3	1 A - 10 G 2 A - 30 G
4	KWT/BAG/SR/OS-7/2019	Khabrasthan Khajibudihal, Tq. Guledgulll Dist. Bagalkot	Suit for declaration and injunction	RS No. 1	EXT 1A-17G
5	KWT/BAG/SR/OS-11/2019	Sunni Anjuman-e-Islam Gudedgudda, Tq. Gudedgudda, Dist. Bagalkot	Suit for declaration and injunction	RS No. 164/A	5 A - 25 G
6	O S 196/2018	Kabarasthan Sunni In Gaonthan area Dhavalashwar	Declaration Suit	SI No 93 in gazatte	—
7	WP-63644/ 2009	Muslim Khabarastan Sunni, Jamakhandi	OS No. 1/078 KWT Belagavi dated 22/05/09		
8	WP-76789/ 2013	Idgah Kerur Badami	Sr/2/2007 KWT Belagavi dated 27/8/2012	Sy no R S 313	A7 -G33
9	WP-109900/ 2014	**Hazrath Fateh Sha Wali Dargah & Masjid** Committee Bagalkot	LAQ-100/2007 Land Aquisition Officer BGK 22/01/2011	CTS No 242	
10	KAT/RP 2017	Fakirsab Dargah sunni Metegudda Village	RTS/AP/98/2016-17 dated 3/5/2017	Sy no 33	17G
11	WP. 104840/ 2018	Chinagi Sha Trust Committee Terdal	Challenge the KLR/SR/14/15/16/16A dated 13/03/2018	Sy no 117/2	A7-27G
12	WP. 104839 /2018	Chinagi Sha Trust Committee Terdal	Challenge the KLR/SR/14/15/16/16A dated 13/03/2018	R S No 118 and R S 120	A12-[illegible] G and A5-0G
13	WP. 107277 / 2018	Chinagi Sha Trust Committee Terdal	Chall[illegible] 14/15/16/16A dated [illegible]	Sy no 117,118,119,120,230	[illegible]

15	WP 108367/2016	Hazrath Fateh Sha Wali Dargah & Masjid Committee Bagalkot	Challenge the LAC 453/2013 dated 6/8/2016	CTS No 242	
16	WP 112967/2019	Peer abakhan Dargah (Sunni) Terdal	Challenge the KLR/SR/14/15/16/16A dated 13/03/2018	Sy no 561	A21-G26
17	WP 105336/2019	Arabic Madarsa Islam Tanzeem Committee Shirur Village Bagalkot	For Consideration of representation dated 09/02/2017,11/05/2017,01/07/2017,22/07/2017,22/07/2017,30/11/2017,11/12/2017,11/12/2017and 10/01/2018	Sy No 92	A54-02G
18	WP 105513/2018	Anjuman E Rifah E Aam Bagalkot	KWT/BAG/SR/OS/2/2012 dated 05/09/2014	Sy No 426 ,427	A4-G30, A4-G28
19	WP 105880/2019	Malang Sha Wali Dargah Hunugund	RTS/SR/29/2017-18 dated 23/05/2018 & Wakf/SR/25/2017-18 date 23/09/2017	RS NO 457/3	2a-01g

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 47 ಕೆಒಎಲ್ ಆಕ 2020.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 17.03.2020.

ಇಂದ:

ಸರ್ಕಾರದ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

226

18/3

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ಸಭೆ,
ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1785ಕ್ಕೆ ಉತ್ತರಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1785ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ನಂಬುಗೆಯ,

(ಹೆಚ್.ಕೆ. ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1785
ಸದಸ್ಯರ ಹೆಸರು	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	18.03.2020
ಉತ್ತರಿಸುವ ಸಚಿವರು	ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಡಾ. ಸರೋಜಿನಿ ಮಹಿಷಿರವರ ನೇತೃತ್ವದ ಸಮಿತಿಯು ಕನ್ನಡಿಗರಿಗೆ ಉದ್ಯೋಗ ಹಾಗೂ ಮೀಸಲಾತಿಗೆ ಸಂಬಂಧಪಟ್ಟಂತೆ ವಿವಿಧ ಸೌಲಭ್ಯಗಳ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆಯೇ; ಹಾಗಿದ್ದಲ್ಲಿ, ಯಾವಾಗ ಮಾಡಲಾಗಿದೆ;	ಡಾ. ಸರೋಜಿನಿ ಮಹಿಷಿಯವರ ನೇತೃತ್ವದ ಸಮಿತಿಯು ಕನ್ನಡಿಗರಿಗೆ ಉದ್ಯೋಗ ಮತ್ತು ಮೀಸಲಾತಿಗೆ ಸಂಬಂಧಿಸಿದಂತೆ ವಿವಿಧ ಸೌಲಭ್ಯಗಳ ಬಗ್ಗೆ ದಿನಾಂಕ:30.12.1886 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ.
ಆ)	ಸದರಿಯವರು ನೀಡಿರುವ ಶಿಫಾರಸ್ಸುಗಳು ಯಾವುವು;(ವಿವರ ನೀಡುವುದು)	ಡಾ. ಸರೋಜಿನಿ ಮಹಿಷಿ ವರದಿಯ ಪ್ರತಿಯನ್ನು ಅನುಬಂಧದಲ್ಲಿ ಇರಿಸಿದೆ.
ಇ)	ಸದರಿಯವರು ನೀಡಿರುವ ಶಿಫಾರಸ್ಸುಗಳಲ್ಲಿ ಎಷ್ಟು ಅನುಷ್ಠಾನಗೊಳಿಸಲಾಗಿದೆ; ಇದುವರೆಗೂ ಅನುಷ್ಠಾನಗೊಳಿಸದಿರಲು ಕಾರಣಗಳೇನು; (ವಿವರ ನೀಡುವುದು)	ಸದರಿಯವರು ನೀಡಿರುವ ಒಟ್ಟು 58 ಶಿಫಾರಸ್ಸುಗಳಲ್ಲಿ ಈ ವರದಿಯ ಅಂಗೀಕೃತ 45 ಶಿಫಾರಸ್ಸುಗಳನ್ನು ಜಾರಿಗೆ ತರುವ ಕಾರ್ಯವನ್ನು ಸರ್ಕಾರದ 7 ಇಲಾಖೆಗಳಿಗೆ ವಹಿಸಿಕೊಡಲಾಗಿದೆ. ಇದರಲ್ಲಿ 41 ಶಿಫಾರಸ್ಸುಗಳು ಅನುಷ್ಠಾನವಾಗುತ್ತಿವೆ. ಕೆಲವು ಶಿಫಾರಸ್ಸುಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ಅನುಷ್ಠಾನವಾಗಿರುವುದಿಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕಾಲ ಕಾಲಕ್ಕೆ ಪರಿಶೀಲನೆಯನ್ನು ನಡೆಸುತ್ತಿದೆ.
ಈ)	ಸದರಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆಸಕ್ತಿ ಹೊಂದಿದೆಯೇ;	ಹೌದು.
ಉ)	ಹೊಂದಿದ್ದರೆ, ಪರಿಷ್ಕೃತ ವರದಿಯನ್ನು ಪಡೆದು ಜಾರಿಗೊಳಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	ಇಂದಿನ ಕಾಲಘಟ್ಟಕ್ಕೆ ಅನ್ವಯಿಸುವ ರೀತಿಯಲ್ಲಿ ಖಾಸಗಿ ಕ್ಷೇತ್ರದಲ್ಲಿಯೂ ಕನ್ನಡಿಗರಿಗೆ ಉದ್ಯೋಗ ಪ್ರಾತಿನಿಧ್ಯ ಕಲ್ಪಿಸುವ ಸಂಬಂಧ 1986ರಲ್ಲಿ ನೀಡಲಾದ ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು

		ಪರಿಷ್ಕರಿಸಲು ರಾಜ್ಯ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದು ಸದರಿ ಸಮಿತಿಯು 2017ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ರಾಜ್ಯ ಸರ್ಕಾರ ಅನುಷ್ಠಾನಗೊಳಸಬೇಕಾದ 14 ಶಿಫಾರಸ್ಸುಗಳು ಹಾಗೂ ಕೇಂದ್ರ ಸರ್ಕಾರದಿಂದ ಅನುಷ್ಠಾನವಾಗ ಬೇಕಾಗಿರುವ 07 ಶಿಫಾರಸ್ಸುಗಳನ್ನು ಒಳಗೊಂಡ ಪರಿಷ್ಕೃತ ವರದಿಯನ್ನು ಸಲ್ಲಿಸಿದೆ. ರಾಜ್ಯ ಸರ್ಕಾರದಿಂದ ಅನುಷ್ಠಾನವಾಗಬೇಕಿರುವ ಕೆಲವು ಶಿಫಾರಸ್ಸುಗಳಲ್ಲಿ ಕಾರ್ಮಿಕ ಇಲಾಖೆಯು ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಆದ್ಯತೆ ಕಲ್ಪಿಸುವ ನಿರ್ಣಯವನ್ನು ಸಚಿವ ಸಂಪುಟವು ತೆಗೆದುಕೊಂಡಿರುತ್ತದೆ. ಅದರ ಅನುಸಾರವಾಗಿ ಕಾರ್ಮಿಕ ಇಲಾಖೆಯು ತನ್ನ ಸ್ಥಾಯಿ ಸಮಿತಿಯ ಆದೇಶಗಳಗೆ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲು ತಿದ್ದುಪಡಿ ಆದೇಶಗಳನ್ನು ಹೊರಡಿಸಿ ಜಾರಿಗೊಳಸುತ್ತಿದೆ. ಉಳಿದ ಶಿಫಾರಸ್ಸುಗಳನ್ನು ಹಂತ ಹಂತವಾಗಿ ಜಾರಿಗೆ ತರಲು ಕ್ರಮ ವಹಿಸುತ್ತಿದೆ.

(ಸಿ.ಟಿ. ರವಿ)
ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು
ಸಂಸ್ಕೃತಿ ಹಾಗೂ ಯುವ ಸಬಲೀಕರಣ
ಮತ್ತು ಕ್ರೀಡಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 80 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

116
18/3

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಇವರಿಗೆ;
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀ ಮುನಿಯಪ್ಪ ವಿ., ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2306ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2306/2020, ದಿ:05.03.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಮುನಿಯಪ್ಪ ವಿ., ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2306ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M. Rajanna

(ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಅ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2306
ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ.
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಿಕಲಚೇತನರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ 2018-19 ಮತ್ತು 2019-20ನೇ ಸಾಲಿನಲ್ಲಿ ಎಷ್ಟು ವಿಕಲಚೇತನ ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ನೀಡಲಾಗಿರುತ್ತದೆ; (ಕ್ಷೇತ್ರವಾರು ವಿವರ ಒದಗಿಸುವುದು)	ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ • ದೈಹಿಕ ವಿಕಲಚೇತನರು -1767 • ಶ್ರವಣದೋಷವುಳ್ಳವರು - 415 • ಬುದ್ಧಿಮಾಂದ್ಯರು - 327 • ಅಂಧರು - 493 • ಒಟ್ಟು ವಿಕಲಚೇತನರು - 3136 • ಚಿಕ್ಕಬಳ್ಳಾಪುರ ಜಿಲ್ಲೆಗೆ 2018-19ನೇ ಸಾಲಿನಲ್ಲಿ ಯಾವುದೇ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ನೀಡಿರುವುದಿಲ್ಲ. • 2019-20ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ 41 ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ವಿತರಿಸಲು ಗುರಿ ನಿಗದಿಪಡಿಸಿಕೊಳ್ಳಲಾಗಿರುತ್ತದೆ.
ಆ)	ಹಾಗಾದರೆ, ಹೆಚ್ಚಿನ ಸಂಖ್ಯೆಯಲ್ಲಿ ಅರ್ಹ ವಿಕಲಚೇತನರು ಸದರಿ ಯೋಜನೆಯಿಂದ ವಂಚಿತರಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಯಂತ್ರಚಾಲಿತ ತ್ರಿಚಕ್ರವಾಹನಗಳನ್ನು ಹಂತಹಂತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡಲು ಕ್ರಮವಹಿಸಲಾಗುವುದು.

ಸಂಖ್ಯೆ: ಮಮಇ 80 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 79 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

18/3

152

ಇವರಿಗೆ;

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀ ರಾಮದಾಸ್ ಎಸ್. ಎ., ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1796ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭಾ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1796/2020, ದಿ:04.03.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ರಾಮದಾಸ್ ಎಸ್. ಎ., ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1796ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M-Rajanna

(ಎಂ.ರಾಜಣ್ಣ)

ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1796
ಸದಸ್ಯರ ಹೆಸರು : ಶ್ರೀ ರಾಮದಾಸ್ ಎಸ್. ಎ.
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರ್ಕಾರ 21 ವಿವಿಧ ಅಂಗವಿಕಲತೆಯನ್ನು "ಗೆಜೆಟ್ ಪ್ರಕಟಣೆ" ಮಾಡದಿರುವುದು ನಿಜವೇ; ಇದರಲ್ಲಿ 12 ವಿವಿಧ ಅಂಗವಿಕಲತೆಯನ್ನು ಮಾತ್ರ ಪರಿಗಣಿಸಿ ಉಳಿದ 9 ವಿವಿಧ ಅಂಗವಿಕಲತೆಯನ್ನು ಗೆಜೆಟ್‌ನಲ್ಲಿ ಯಾವಾಗ ಪ್ರಕಟಣೆ ಮಾಡಲಾಗುವುದು;	ಕೇಂದ್ರ ಸರ್ಕಾರದಿಂದ 21 ವಿದಥ ಅಂಗವಿಕಲತೆಯನ್ನು ಗುರುತಿಸಿ ದಿನಾಂಕ:28.12.2016ರಂತೆ ಗೆಜೆಟ್ ಪ್ರಕಟಣೆಯನ್ನು ಹೊರಡಿಸಲಾಗಿದೆ.
ಆ)	ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿಗಳು ಕಾರ್ಯನಿರ್ವಹಿಸುತ್ತಿರುವುದು ಬಾಲನ್ಯಾಯ ಮಕ್ಕಳ ಪಾಲನೆ ಮತ್ತು ಪೋಷಣೆ ಅಧಿನಿಯಮ 2015ರ ಅಡಿಯಲ್ಲಿ ಸದರಿ ಸಮಿತಿಗಳು ಸ್ಥಾಪನೆಯಾಗಿದೆ; 2018ರ ಕೇಂದ್ರಿಯ ಅಧಿನಿಯಮ 4ರನ್ವಯ ಹಲವಾರು ಅಂಶಗಳಿಗೆ ತಿದ್ದುಪಡಿ ಮಾಡಲಾಗಿದೆ; ಅದರಂತೆ ಸದರಿ ಸಮಿತಿಯನ್ನು ಸದಸ್ಯರಿಗೆ ಸಭಾ ಭತ್ಯೆಯಾಗಿ ಪ್ರತಿ ದಿನಕ್ಕೆ ರೂ.1500/-ರಂತೆ ಪಾವತಿಸಲು ಸೂಚಿಸಲಾಗಿದ್ದರೂ ಸಹ ಕಡಿಮೆ ಪಾವತಿಸಲು ಕಾರಣವೇನು; ಹೊಸ ನಿಯಮದಂತೆ ಯಾವಾಗ ಪಾವತಿಸಲು ಕ್ರಮಕೈಗೊಳ್ಳಲಾಗುವುದು?	ಸರ್ಕಾರದ ಆದೇಶ ಸಂಖ್ಯೆ:ಮಮಇ 71 ಮಭಾಬ 2018, ದಿನಾಂಕ:26.06.2019ರಲ್ಲಿ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಹಾಗೂ ಬಾಲನ್ಯಾಯ ಮಂಡಳಿ ಸಮಾಜ ಕಾರ್ಯಕರ್ತ ಸದಸ್ಯರುಗಳಿಗೆ ಉಪಸ್ಥಿತಿ ಭತ್ಯೆಯನ್ನು ರೂ.1000/- ದಿಂದ ರೂ.1500/-ಕ್ಕೆ ಹೆಚ್ಚಿಸಿ ಅನುಮತಿ ನೀಡಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:ಮಮಇ 71 ಮಭಾಬ 2018, ದಿನಾಂಕ:06.01.2020ರಲ್ಲಿ, ಸದರಿ ಉಪಸ್ಥಿತಿ ಭತ್ಯೆಯನ್ನು ಹೆಚ್ಚಿಸಿ ಆದೇಶ ಹೊರಡಿಸಿದ ದಿನಾಂಕ:26.06.2019ರಿಂದಲೇ ಅನ್ವಯವಾಗುವಂತೆ ಪಾವತಿಸಲು ಸ್ಪಷ್ಟನೆ ನೀಡಲಾಗಿರುತ್ತದೆ. ಅದರಂತೆ ಕ್ರಮವಹಿಸಲು ಪತ್ರ ಸಂಖ್ಯೆ: ಕಿಎಸ್‌ಐಸಿಪಿಎಸ್/ ಮ.ಕ.ಸ/ಬಾನ್ಯಾಮಂ/ಉ.ಭ/59/2017-18, ದಿನಾಂಕ: 17.01.2020 ರಲ್ಲಿ ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ.

ಸಂಖ್ಯೆ: ಮಮಇ 79 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 84 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

196

18/3

ಇವರಿಗೆ;

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀಮತಿ ಸೌಮ್ಯ ರೆಡ್ಡಿ, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1579ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭಾ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1579/2020, ದಿ:27.02.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಸೌಮ್ಯ ರೆಡ್ಡಿ, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1579ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M. Rajanna

(ಎಂ.ರಾಜಣ್ಣ)

ಸರ್ಕಾರದ ಅಧೀನ ಕಾರ್ಯದರ್ಶಿ – 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1579
ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ವಿಕಲಚೇತನರ ಉನ್ನತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಕಳೆದ ಮೂರು ವರ್ಷಗಳಲ್ಲಿ ವಿಕಲಚೇತನರ ಉನ್ನತಿಗಾಗಿ ಹಾಲಿ ಇರುವ ಯೋಜನೆಗಳ ಜೊತೆಗೆ ಕೆಲವು ಹೊಸ ಹಾಗೂ ಪರಿಷ್ಕೃತ ಯೋಜನೆಗಳನ್ನು ಜಾರಿಗೊಳಿಸಿದ್ದು, ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಸಂಖ್ಯೆ: ಮಮಇ 84 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 1579ಕ್ಕೆ ಅನುಬಂಧ

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇಲ್ಲಿ ಕಳೆದ ಮೂರು ವರ್ಷಗಳಲ್ಲಿ ಜಾರಿಗೊಳಿಸಲಾದ ಹೊಸ ಹಾಗೂ ಪರಿಷ್ಕೃತ ಯೋಜನೆಗಳು

2016-17

1. **ಮರಣ ಪರಿಹಾರ ಯೋಜನೆ:** ಗ್ರಾಮೀಣ ಪುನರ್ವಸತಿ/ವಿವಿದೋದ್ದೇಶ ಪುರ್ನಸತಿ ಕಾರ್ಯಕರ್ತರಾತಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯಕರ್ತರು ಕರ್ತವ್ಯದ ಅವಧಿಯಲ್ಲಿ ಮರಣ ಹೊಂದಿದಲ್ಲಿ ಅವರ ಅವಲಂಬಿತರಿಗೆ ರೂ.50,000/-ಗಳ ಪರಿಹಾರ ಮಂಜೂರು ಮಾಡಲಾಗುವುದು.

2. **ಸ್ಪರ್ಧಾಚೇತನ ಯೋಜನೆ:** ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯವಿರುವ ವಿದ್ಯಾವಂತ ವ್ಯಕ್ತಿಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಈ ಯೋಜನೆ.

3. **ಅರಿವಿನ ಸಿಂಚನ ಯೋಜನೆ:** ಅಂಗವೈಕ್ಯವಿರುವ ವ್ಯಕ್ತಿಗಳ ಪೋಷಕರಲ್ಲಿ ಅವರ ಹೊಣೆಗಾರಿಕೆ ಕುರಿತು ಅರಿವು ಮೂಡಿಸಲು ಮತ್ತು ವಿಕಲಚೇತನ ವ್ಯಕ್ತಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

4. **ನಿರಾಶ್ರಿತ ಬುದ್ಧಿಮಾಂದ್ಯ ಪುರಷ ಮತ್ತು ಮಹಿಳೆಯರಿಗಾಗಿ ಅನುಪಾಲನಾ ಗೃಹಗಳು:** ನಿರಾಶ್ರಿತ ಬುದ್ಧಿಮಾಂದ್ಯ ಪುರಷ ಮತ್ತು ಮಹಿಳೆಯರಿಗಾಗಿ ಮೈಸೂರು, ಕಲಬುರ್ಗಿ ಹಾಗೂ ಬೆಳಗಾವಿ ವಿಭಾಗೀಯ ಮಟ್ಟದಲ್ಲಿ ಅನುಪಾಲನಾ ಗೃಹಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪ್ರಾರಂಭಿಸುವುದು.

5. **ಸಾಧನ ಸಲಕರಣೆ ಯೋಜನೆ:** ವಿಕಲಚೇತನ ವ್ಯಕ್ತಿಗಳಿಗೆ ಈ ಯೋಜನೆಯಡಿ ಪ್ರತೀ ಸಾಧನ ಸಲಕರಣೆಯ ಮಂಜೂರು ಮಾಡುವ ಮೊತ್ತವನ್ನು ರೂ.10,000/-ಗಳಿಂದ ರೂ.15,000/-ಗಳಿಗೆ ಹೆಚ್ಚಿಸಲಾಗಿದೆ. ಈ ಯೋಜನೆಯಡಿ 2016-17 ನೇ ಸಾಲಿಗೆ ಹೆಚ್ಚುವರಿಯಾಗಿ 2000 ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಒದಗಿಸುವುದು ಮತ್ತು ಈ ಯೋಜನೆಯಡಿ ವಾರ್ಷಿಕ 1400.00ಗಳನ್ನು ಮೀಸಲಿಡಲಾಗಿದೆ.

6. **ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆಯ ವಾರ್ಷಿಕ ಮೊತ್ತ ಪರಿಷ್ಕರಣೆ:** ಜಿಲ್ಲೆಗಳಲ್ಲಿರುವ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆಯನ್ನು ಉಳಿಕೆ ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ವಾರ್ಷಿಕ ಅನುದಾನ ರೂ.28.00 ಲಕ್ಷಗಳಿಂದ ರೂ.36.00 ಲಕ್ಷಗಳಿಗೆ ಹೆಚ್ಚಳ.

7. **ಸ್ವಾವಲಂಬನ್ ಛಾತ್ರವಾಸ್ ಯೋಜನೆ:** ವಿಕಲಚೇತನರ ವ್ಯಕ್ತಿಗಳ ವಿಶೇಷ ಶಾಲಾ ಕಟ್ಟಡಗಳ ದುರಸ್ಥಿ ಮತ್ತು ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ಸ್ವಾವಲಂಬನ್ ಛಾತ್ರವಾಸ್ ಯೋಜನೆ

8. **ಶಿಶು ಕೇಂದ್ರೀಕೃತ ಯೋಜನೆ;** ಶಿಶು ಕೇಂದ್ರೀಕೃತ ಯೋಜನೆಯಡಿ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆಯಲ್ಲಿನ ಪ್ರತಿ ಮಗುವಿಗೆ ಮಾಹೆಯಾನ ನೀಡುತ್ತಿರುವ ಅನುದಾನವನ್ನು ರೂ.5000/- ರಿಂದ 5600/-ಗಳಿಗೆ ಮತ್ತು ವಸತಿರಹಿತ ಮಗುವಿಗೆ ರೂ.4000/- ರಂದ 4800/-ಗಳಿಗೆ ಹೆಚ್ಚಳ.

2017-18

1. **ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ಹೆಚ್ಚಿಸುವ ಬಗ್ಗೆ: (ಪರಿಷ್ಕೃತ ಯೋಜನೆ)** 6,022 ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.2.000/- ಗಳಿಂದ ರೂ.3,000 /- ಗಳಿಗೆ ಹಾಗೂ 176 ಬಹುವಿಧ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.5,000/- ಗಳಿಂದ ರೂ.6,000/- ಹೆಚ್ಚಿಸಿದ್ದು, 613 ನಗರ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ 3,000 ರೂ.ಗಳ ಗೌರವಧನದೊಂದಿಗೆ ನೇಮಕಾತಿ.

..2

2. **ಸಾಧನೆ ಯೋಜನೆಯಡಿ ಆರ್ಥಿಕ ನೆರವನ್ನು ಹೆಚ್ಚಿಸುವ ಬಗ್ಗೆ: "ಸಾಧನೆ" (ಪರಿಷ್ಕೃತ ಯೋಜನೆ)** ಯೋಜನೆಯಡಿ ನೀಡಲಾಗುವ ಆರ್ಥಿಕ ನೆರವನ್ನು 30,000 ರೂ.ಗಳಿಂದ 50,000 ರೂ.ಗಳಿಗೆ ಹೆಚ್ಚಿಸಿದೆ.

3. **ಹಗಲು ಯೋಗಕ್ಷೇಮ ಕೇಂದ್ರ ಸ್ಥಾಪನೆ: (ಪರಿಷ್ಕೃತ ಯೋಜನೆ)** ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧದ ವೈಕಲ್ಯ ಹೊಂದಿರುವ ಮಕ್ಕಳಿಗಾಗಿ 4 ವಿಭಾಗಗಳಲ್ಲಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸುವುದು.

4. **ಶಿಶುಕೇಂದ್ರೀಕೃತ ಯೋಜನೆಯಡಿ ನೀಡುವ ಮಾಸಿಕ ಅನುದಾನವನ್ನು ಹೆಚ್ಚಿಸುವುದು: (ಪರಿಷ್ಕೃತ ಯೋಜನೆ)** ಶಿಶುಕೇಂದ್ರೀಕೃತ ಯೋಜನೆಯಡಿ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶ್ರವಣದೋಷವುಳ್ಳ ಮತ್ತು ಅಂಧರ ಹಾಗೂ ಬುದ್ಧಿಮಾಂದ್ಯರ ವಿಶೇಷ ಶಾಲೆಗಳ ಪ್ರತಿ ಮಗುವಿಗೆ ನೀಡುವ ಮಾಸಿಕ ಅನುದಾನವನ್ನು 1200 ರೂ.ಗಳಷ್ಟು ಹೆಚ್ಚಿಸಿದೆ.

5. **ಸುಧಾರಿತ ದ್ವಿಚಕ್ರ ವಾಹನಗಳ ಸಂಖ್ಯೆಯನ್ನು ಹೆಚ್ಚಿಸುವುದು: (ಪರಿಷ್ಕೃತ ಯೋಜನೆ)** 2017-18ನೇ ಸಾಲಿನಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಸುಧಾರಿತ ದ್ವಿಚಕ್ರ ವಾಹನಗಳ ಸಂಖ್ಯೆಯನ್ನು 2000 ರಿಂದ 4000ಕ್ಕೆ ಹೆಚ್ಚಿಸಿದೆ.

<u>2018-19</u>

1. 'ಆಧಾರ' ಸ್ವಯಂ ಉದ್ಯೋಗ ಯೋಜನೆಯ ಘಟಕ ವೆಚ್ಚವನ್ನು ಈಗಿರುವ ರೂ.0.35ಲಕ್ಷಗಳಿಂದ ರೂ.1.00 ಲಕ್ಷ ರೂ.ಗಳಿಗೆ ಹೆಚ್ಚಿಸಿ, ಇದರಲ್ಲಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸುವ ಯೋಜನೆ. **(ಪರಿಷ್ಕೃತ ಯೋಜನೆ)**

2. ರೂ. 5 ಕೋಟಿಗಳ ಅನುದಾನದಲ್ಲಿ ವಿಕಲಚೇತನರ ಸಮೀಕ್ಷೆಯನ್ನು ಮಾಡಲು ಅನುದಾನ ಒದಗಿಸಲಾಗಿದೆ. **(ಹೊಸ ಯೋಜನೆ)**

3. ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪವಿಭಾಗಗಳಲ್ಲಿ ತಲಾ ಒಂದರಂತೆ ವಿಸ್ತರಿಸಿ ಪ್ರಾರಂಭಿಸುವುದು. **(ಹೊಸ ಯೋಜನೆ)**

4. ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದಿಂದ ವಿಕಲಚೇತನರಿಗೆ ನೀಡಿರುವ ಸಾಲ ಮತ್ತು 2014ರಿಂದ ಸುಸ್ತಿಯಾಗಿರುವ ಬಡ್ಡಿ ಮೊತ್ತವನ್ನು 4 ಕೋಟಿ ರೂ.ಗಳ ಅನುದಾನದಲ್ಲಿ ಮನ್ನಾ ಮಾಡಲಾಗಿದೆ.

5. ಬುದ್ಧಿ ಮಾಂದ್ಯತೆ, ಸ್ವಲೀನತೆ, ಮೆದುಳಿನ ಪಾರ್ಶ್ವವಾಯು, ಬಹುವಿಧ ಅಂಗವಿಕಲತೆ ಸೇರಿದಂತೆ ವಿಕಲಚೇತನರ ಪಾಲನೆ ಹಾಗೂ ನಿರ್ವಹಣೆಯ ಬಗ್ಗೆ ಪಾಲಕರಿಗೆ, ವೃತ್ತಿಪರರಿಗೆ ತರಬೇತಿ, ಫಿಸಿಯೋಥೆರಪಿ ಹಾಗೂ ಪುನರ್ವಸತಿ ತರಬೇತಿ ಕೋರ್ಸುಗಳನ್ನು ನಡೆಸುವುದು, ಸ್ಪರ್ಶ ಸಂವೇದಿ ಉದ್ಯಾನ ನಿರ್ಮಾಣ ಇತ್ಯಾದಿ ಉದ್ದೇಶಗಳಿಗಾಗಿ 20 ಎಕರೆ ಜಾಗದಲ್ಲಿ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ವಿಕಲಚೇತನರ ಕ್ಯಾಂಪಸ್‌ನ್ನು ಪ್ರಾರಂಭ.

6. ಬೆಂಗಳೂರಿನ ಇಂದಿರಾನಗರದಲ್ಲಿರುವ ಸರ್ಕಾರಿ ಕಿವುಡು ಮಕ್ಕಳ ಶಾಲೆಯ ಕಟ್ಟಡದಲ್ಲಿ ವಿಶೇಷ ಶಿಕ್ಷಕರ ಶಿಕ್ಷಣಕ್ಕಾಗಿ ತರಬೇತಿ ಕೇಂದ್ರವನ್ನು/ವಿಶೇಷ ಬಿ.ಇಡಿ. ಕಾಲೇಜನ್ನು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಪ್ರಾರಂಭ.

7. ಉನ್ನತ ವ್ಯಾಸಂಗಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ನೀಡುತ್ತಿರುವ ವಿದ್ಯಾರ್ಥಿ ವೇತನದಂತೆ, ಪಿ.ಹೆಚ್.ಡಿ. ಮಾಡುತ್ತಿರುವ ಹಾಗೂ ವಿದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಕೈಗೊಳ್ಳುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದು.

2018–19

1. 2018–19ನೇ ಸಾಲಿನಿಂದ, ಶೇ.75ಕ್ಕೂ ಹೆಚ್ಚಿನ ಅಂಗವೈಕಲ್ಯತೆ ಹೊಂದಿರುವ ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು 200 ರೂ.ಗಳಷ್ಟು ಹಾಗೂ ಶೇ.75ಕ್ಕೂ ಕಡಿಮೆ ಅಂಗವೈಕಲ್ಯತೆ ಹೊಂದಿರುವ ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು 100 ರೂ.ಗಳನ್ನು ಹೆಚ್ಚಿಸಿದೆ.

2. 156. ಬುದ್ಧಿಮಾಂದ್ಯ ವಯಸ್ಕರಿಗೆ ಸೂಕ್ತ ವೃತ್ತಿ ತರಬೇತಿ ನೀಡಿ, ಅವರನ್ನು ವೃತ್ತಿ ಚಟುವಟಿಕೆಗಳಲ್ಲಿ ತೊಡಗಿಸಿ ವಿಶ್ವಸಂಸ್ಥೆಯ 2030ರ ಅಭಿವೃದ್ಧಿ ಕಾರ್ಯಸೂಚಿಯಂತೆ ಎಲ್ಲರನ್ನೊಳಗೊಂಡ ಅಭಿವೃದ್ಧಿ ಸಾಧನೆಯ ಉದ್ದೇಶದಿಂದ ಪ್ರಾಯೋಗಿಕವಾಗಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ತಲಾ ಒಂದರಂತೆ ವೃತ್ತಿ ತರಬೇತಿ ಕೇಂದ್ರವನ್ನು ಪ್ರಾರಂಭಿಸುವುದು.

3. ವಿಕಲಚೇತನರ ಹಕ್ಕುಗಳ ಕಾಯ್ದೆ 2016ರ ಅನುಸಾರವಾಗಿ ನಮ್ಮ ಸರ್ಕಾರವು ಅಂಗವಿಕಲತೆಯ ಪ್ರಮಾಣ ಹೊಂದಿರುವ ವ್ಯಕ್ತಿಗಳಿಗೆ ಎ ಮತ್ತು ಬಿ ಸಮೂಹದ ಹುದ್ದೆಗಳಲ್ಲಿ ಶೇ. 4 ರಷ್ಟು ಮೀಸಲಾತಿಯನ್ನು ಒದಗಿಸಲಿದೆ. ವಿಕಲಚೇತನರಿಗಾಗಿ ನಮ್ಮ ಸರ್ಕಾರವು ಸಿ ಮತ್ತು ಡಿ ಸಮೂಹದ ಹುದ್ದೆಗಳಿಗೆ ಈಗಾಗಲೇ ಶೇ. 5ರಷ್ಟು ಮೀಸಲಾತಿಯನ್ನು ಒದಗಿಸಿದೆ. ಇದಲ್ಲದೇ, ನಮ್ಮ ಸರ್ಕಾರವು ಅಂಗವಿಕಲತೆಯ ಪ್ರಮಾಣ ಹೊಂದಿರುವ ವ್ಯಕ್ತಿಗಳಿಗೆ ವಿಕಲಚೇತನರ ಹಕ್ಕುಗ ಕಾಯ್ದೆ–2016ರ ಅನುಸಾರ ಕೆಳಕಂಡಂತೆ ಸೌಲಭ್ಯಗಳನ್ನು ಒದಗಿಸಲಿದೆ.

   - ಅಂಗವಿಕಲತೆಯ ಪ್ರಮಾಣಕ್ಕನುಸಾರ ಮಹಿಳೆಯರಿಗೆ ಸೂಕ್ತ ಆದ್ಯತೆ ನೀಡುವುದರೊಂದಿಗೆ ಎಲ್ಲಾ ಸಂಬಂಧ ಪಟ್ಟ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ, ಕೃಷಿ ಭೂಮಿ ಹಂಚಿಕೆ ಮತ್ತು ವಸತಿಯಲ್ಲಿ ಶೇ. 5 ರಷ್ಟು ಮೀಸಲಾತಿ;
   - ಅಂಗವಿಕಲತೆಯ ಪ್ರಮಾಣಕ್ಕನುಸಾರವಾಗಿ ಮಹಿಳೆಯರಿಗೆ ಸೂಕ್ತ ಆದ್ಯತೆ ನೀಡುವುದರೊಂದಿಗೆ ಬಡತನ ನಿರ್ಮೂಲನೆ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಶೇ. 5 ರಷ್ಟು ಮೀಸಲಾತಿ;
   - ವಸತಿ, ಆಶ್ರಯ, ವೃತ್ತಿ, ವ್ಯಾಪಾರ, ಉದ್ಯಮ, ಮನರಂಜನಾ ಕೇಂದ್ರಗಳು ಮತ್ತು ಉತ್ಪಾದನಾ ಕೇಂದ್ರಗಳನ್ನು ಪ್ರಾರಂಭಿಸಲು ಉತ್ತೇಜಿಸುವ ಉದ್ದೇಶಕ್ಕಾಗಿ ಭೂಮಿಯನ್ನು ಬಳಸಲಾಗಿದ್ದರೆ, ರಿಯಾಯಿತಿ ದರದಲ್ಲಿ ಭೂಮಿ ಹಂಚಿಕೆಯಲ್ಲಿ ಶೇ. 5 ರಷ್ಟು ಮೀಸಲಾತಿ.

***

ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 76 ಪಿಹೆಚ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.03.2020

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಇವರಿಗೆ;
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಶ್ರೀ ಉಮಾನಾಥ ಎ. ಕೋಟ್ಯಾನ್, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2379ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2379/2020, ದಿ:05.03.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಉಮಾನಾಥ ಎ. ಕೋಟ್ಯಾನ್, ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2379ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M. Rajanna
(ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ: 2203 2240

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2379
ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹಿರಿಯ ನಾಗರೀಕರಿಗೆ ಆರೋಗ್ಯ ಸಂರಕ್ಷಣೆ, ಸಾರಿಗೆ ರಿಯಾಯಿತಿ, ಸುರಕ್ಷತೆ ಮತ್ತು ಭದ್ರತೆ ಹಾಗೂ ಅರ್ಹ ಫಲಾನುಭವಿಗಳಿಗೆ ಆಶ್ರಯ ನೀಡಿಕೆ ಕುರಿತು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಯಾವುವು;	ಹಿರಿಯ ನಾಗರಿಕರ ಆರೋಗ್ಯ ಸಂರಕ್ಷಣೆ, ಸುರಕ್ಷತೆ ಮತ್ತು ಭದ್ರತೆಗಾಗಿ ಯೋಜನೆಗಳನ್ನು ಇಲಾಖಾ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.

ಕ್ರ.ಸಂ	ಯೋಜನೆಯ ಹೆಸರು	ಯೋಜನೆಯ ವಿವರ
1	ವೃದ್ಧಾಶ್ರಮಗಳು	28 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 29 ವೃದ್ಧಾಶ್ರಮಗಳನ್ನು (ಬೆಂಗಳೂರಿನಲ್ಲಿ 2) ಸ್ವಯಂ ಸೇವಾ ಸಂಸ್ಥೆಗಳ ಮೂಲಕ 25 ಜನ ಅರ್ಹ ಫಲಾನುಭವಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದ್ದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಸಿಬ್ಬಂದಿ ಗೌರವಧನ, ಕಟ್ಟಡ ಬಾಡಿಗೆ, ಊಟದ ವೆಚ್ಚ, ಔಷದೋಪಚಾರ, ಎಣ್ಣೆ, ಸೋಪು, ವಿದ್ಯುತ್, ನೀರಿನ ವೆಚ್ಚ, ಮನೋರಂಜನಾ ವೆಚ್ಚ ಹಾಗೂ ಇತರೆ ವೆಚ್ಚಗಳು ರಾಜ್ಯ ಸರ್ಕಾರದ ಜಿಲ್ಲಾ ಪಂಚಾಯತ್ ಅನುದಾನದಡಿ ಭರಿಸಲಾಗುತ್ತಿದೆ.
2	ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರಗಳು	24 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 25 ಹಗಲು ಯೋಗಕ್ಷೇಮ ಕೇಂದ್ರಗಳನ್ನು (ಬೆಂಗಳೂರಿನಲ್ಲಿ 2) ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ಪ್ರತಿ ಕೇಂದ್ರದಲ್ಲಿ 50 ರಿಂದ 150 ವಯೋವೃದ್ಧರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ.
3	ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು	28 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನುಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. (ಶುಲ್ಕ ರಹಿತ ದೂರವಾಣಿ ಸಂಖ್ಯೆ:1090) ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ

		ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ದಿನದ 24 ಗಂಟೆ ನಡೆಸಲಾಗುತ್ತಿದೆ.
4	ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಜೀರಿಯಾಟ್ರಿಕ್ ವಾರ್ಡ್‌ಗಳು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ರಾಜ್ಯ ಯೋಜನೆಯಡಿ ಕೋಲಾರ, ತುಮಕೂರು, ಬಿಜಾಪುರ, ಕೊಡಗು, ಚಿಕ್ಕಮಗಳೂರು ಮತ್ತು ಧಾರವಾಡ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುವ ಜೀರಿಯಾಟ್ರಿಕ್ ವಾರ್ಡ್‌ಗಳಲ್ಲಿ ಉಚಿತವಾಗಿ ಆರೋಗ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸಾರಿಗೆ ರಿಯಾಯಿತಿಗೆ ಸಂಬಂಧಿಸಿದಂತೆ, ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಶೇ.25% ಸಾರಿಗೆ ರಿಯಾಯಿತಿಯನ್ನು ಕಲ್ಪಿಸಲಾಗುತ್ತಿದೆ.

ಆ)	ಸರ್ಕಾರದ ವಿವಿಧ ಹಿರಿಯ ನಾಗರಿಕ ಸಂಬಂಧಿತ ಯೋಜನೆಗಳ ಮೂಲಕ ಮಾಡಿದ ವೆಚ್ಚ ಮತ್ತು ಸೌಕರ್ಯ ಪಡೆದ ಹಿರಿಯ ನಾಗರಿಕರ ಜಿಲ್ಲಾವಾರು ಸಂಖ್ಯೆ ಎಷ್ಟು;	ಅನುಬಂಧದಲ್ಲಿ ಒದಗಿಸಿದೆ.
ಇ)	ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ವಿವಿಧ ವರ್ಗಗಳ ಬಸ್ಸ್‌ಗಳಲ್ಲಿ ರಿಯಾಯಿತಿ ದರದಲ್ಲಿ ಪ್ರಯಾಣ ಸೌಲಭ್ಯ, ಬಿಎಂಟಿಸಿ ಮತ್ತಿತರ ಬಸ್ಸ್‌ಗಳಲ್ಲಿ ಹಿರಿಯ ನಾಗರಿಕರಿಗೆ ಹೆಚ್ಚಿನ ಸೀಟ್‌ಗಳ ಕಾಯ್ದಿರಿಸುವಿಕೆ, ಸರ್ಕಾರಿ ಕಛೇರಿಗಳಲ್ಲಿ ಅರ್ಹ ಕೆಲಸ ಕಾರ್ಯಗಳಿಗೆ ಹಿರಿಯ ನಾಗರಿಕರು ಬಂದಾಗ ಆದ್ಯತೆ ನೀಡಿಕೆ ಮುಂತಾದ ಮಾನವೀಯ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿನ ಇಲಾಖೆಯ ಪರಿಣಾಮಕಾರಿ ಕ್ರಮಗಳೇನು?	ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ವಿವಿಧ ವರ್ಗಗಳ ಬಸ್‌ಗಳಲ್ಲಿ ರಿಯಾಯಿತಿ ದರದಲ್ಲಿ ಪ್ರಯಾಣ ಸೌಲಭ್ಯ, ಬಿಎಂಟಿಸಿ ಮತ್ತಿತರ ಬಸ್‌ಗಳಲ್ಲಿ ಹಿರಿಯ ನಾಗರಿಕರಿಗೆ ಹೆಚ್ಚಿನ ಸೀಟ್‌ಗಳ ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಶೇ.25% ಸಾರಿಗೆ ರಿಯಾತಿಯನ್ನು ಕಲ್ಪಿಸಲಾಗುತ್ತಿದ್ದು, ಬಿ.ಎಂ.ಟಿ.ಸಿ ಮತ್ತಿತರ ಬಸ್ಸುಗಳಲ್ಲಿ 2 ಸೀಟುಗಳನ್ನು ಕಾಯ್ದಿರಿಸಲಾಗಿರುತ್ತದೆ. ಸರ್ಕಾರಿ ಕಛೇರಿಗಳಲ್ಲಿ ಅರ್ಹ ಕೆಲಸ ಕಾರ್ಯಗಳಿಗೆ ಹಿರಿಯ ನಾಗರಿಕರು ಬಂದಾಗ ಆಧ್ಯತೆ ನೀಡಿಕೆ ಮುಂತಾದ ಮಾನವೀಯ ಸೌಕರ್ಯಗಳಿಗೆ ಸಂಬಂದಿಸಿದಂತೆ ಆಯಾ ಇಲಾಖೆಗಳಲ್ಲಿ ಮಾನವಿಯತೆಯ ದೃಷ್ಟಿಯಿಂದ ಆದ್ಯತೆಯ ಮೇರೆಗೆ ಹಿರಿಯನಾಗರಿಕರಿಗೆ ಪ್ರತ್ಯೇಕವಾದ ಸಾಲಿನ ವ್ಯವಸ್ಥೆ ಹಾಗೂ ಕೆಲಸ ಕಾರ್ಯಗಳಲ್ಲಿ ಮೊದಲ ಆದ್ಯತೆ ನೀಡಲಾಗುತ್ತಿದೆ. ಉದಾ; ಟಿಕೇಟ್

ಸಂಖ್ಯೆ: ಮಮಇ 76 ಪಿಹೆಚ್‌ಪಿ 2020

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2379ಕ್ಕೆ ಅನುಬಂಧ

ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು

ಕ್ರ ಸಂ.	ಜಿಲ್ಲೆಯ ಹೆಸರು	ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಮತ್ತು ವಿಳಾಸ	ಅನುದಾನದ ವಿವರ ರೂ.ಲಕ್ಷಗಳಲ್ಲಿ
1	ಬೆಂಗಳೂರು ನಗರ	ನೈಟಿಂಗೇಲ್ ಮೆಡಿಕಲ್ ಟ್ರಸ್ಟ್, ನಂ.337, 2ನೇ ಕ್ರಾಸ್, 1ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು 560 032	6.15
